ಗೌರಿ ಲಂಕೇಶರ

ಲಂಕೇಶ್

ಮೇ 31, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಚಾನೆಲ್ ಸಮರ

ETV

ರವಿ ಔಟ್?

ವಣಗೆರೆ : ಗುಂಡಿ ಮಹದೇವಪ್ಪನ ಗಂಡಾಗುಂಡಿ ಮಕ್ಕಳು

ರವಾಡ, ಹಾವೇರಿ, ಗದಗ

ರೋಸಿನ್ ಕಳ್ಳ ಇಬ್ರಾಹಿಂ ಚಾಂದನಿ!




ದ್ದನಕ್ಕಿದ್ದಾ... ಖರ್ಗೆ ಮುಕ್ಕಿದ್ದಾ...

ಲಾಲ್ ಸಲಾಂ ಮತ್ತು ಲಾಲ್ ಸಲೀಂ

ಕೇಳಗಿನ ಪ್ರಶ್ನೆಗೆ ಉತ್ತರವನ್ನು ಸಾಕ್ಷಾತ್ ಬುದ್ಧದೇವರೇ ಕೊಟ್ಟಿದ್ದಾರೆ. ಮೊನ್ನೆ ಪ್ರಮಾಣವಚನ ಸ್ವೀಕರಿಸಿದ ಕೂಡಲೇ ಅವರು ಕೊಟ್ಟ ಪ್ರಥಮ ಹೇಳಿಕೆಯೇನೆಂದರೆ "ನಾನು ಬಂಡವಾಳದೊಂದಿಗೆ ರಾಜಿ ಮಾಡಿಕೊಳ್ಳುವ ಕಮ್ಯುನಿಸ್ಟ್" ಎಂದು. 'ನಿನ್ನ ಸ್ನೇಹಿತರನ್ನು ಪರಿಚಯ ಮಾಡಿಕೊಟ್ಟರೆ ನೀನು ಯಾರೆಂದು ಹೇಳುವೆ' ಎಂಬುದು ಹಳೆಯ ಗಾದೆ. ಈಗ ಪ್ರಮಾಣ ವಚನ ಸಮಾರಂಭದಲ್ಲೇ ಹೊಸ ಸರ್ಕಾರದ ಸ್ನೇಹಿತರು ಯಾರ್‍ಯಾರೆಂದು ಬುದ್ಧದೇವರು ಸ್ಪಷ್ಟವಾಗಿ ಘೋಷಿಸಿ ದ್ದಾರೆ. ಅವರು ಈ ದೇಶದ ಸಂಪತ್ತು ಲೂಟಿ ಮಾಡು ತ್ತಿರುವ ಹಾಗೂ ವಿದೇಶಿ ಬಂಡವಾಳಿಗರಿಗೆ ಈ ದೇಶದ ಲೂಟಿ ಸುಗಮ ಮಾಡಿಕೊಡುತ್ತಿರುವ ಈ ದೇಶದ ದಲ್ಲಾಳಿ ಬಂಡವಾಳಿಗರು. ಇನ್ನು ಮುಂದೆ ಎಡರಂಗ ಸರ್ಕಾರ ಬಹಿರಂಗವಾಗಿಯೇ ಅವರ ನಮ್ರ ಸೇವಕನಾಗಿ ಕೆಲಸ ಮಾಡಲಿದೆ. ಈಗಾಗಲೇ ಆ ದಿಕ್ಕಿನಲ್ಲಿ ತನ್ನ ನೀತಿಗಳನ್ನು ಘೋಷಿಸಿರುವ ಕಮ್ಯುನಿಸ್ಟ್ ಮುಖ್ಯ ಮಂತ್ರಿಗಳು ತಮ್ಮ ರಾಜ್ಯಕ್ಕೆ ವಿದೇಶಿ ಬಂಡವಾಳ ತರಲು ಎಲ್ಲಾ ರೀತಿ ಶ್ರಮಿಸುವು ದಾಗಿ ಹೇಳಿದ್ದಾರೆ. ಆ ನಿಟ್ಟಿನಲ್ಲಿ ಕಮ್ಯುನಿಸ್ಟ್ ಸರ್ಕಾರ ವಿದೇಶಿ ಬಂಡವಾಳಿಗರಿಗೆ ಪೂರಕವಾದ ಬಂಡವಾಳ ನೀತಿ ಮತ್ತು ಕಾರ್ಮಿಕ ನೀತಿಗಳನ್ನು ಜಾರಿಗೆ ತರುವುದಾಗಿ ಘೋಷಿಸಿದೆ. ಕಾರ್ಮಿಕರು ಇನ್ನು ಮುಂದೆ ಶಿಸ್ತಿನಿಂದ ಕೆಲಸ ಮಾಡಬೇಕು, ಮುಷ್ಕರ ಇತ್ಯಾದಿ 'ಅಶಿಸ್ತು'ಗಳನ್ನು ಇನ್ನು ಮುಂದೆ ಸರ್ಕಾರ ಸಹಿಸುವುದಿಲ್ಲವೆಂದು ಹೇಳಿದೆ.

ಒಂದು ಸತ್ಯ:

ಇದು ಎಡರಂಗ ಸರ್ಕಾರದ ಹೇಳಿಕೆ ಎಂದು ಮೊದಲೇ ಯಾರೂ ಹೇಳದಿದ್ದರೆ ಇದಕ್ಕೂ ಬಿ.ಜೆ.ಪಿ. ಮತ್ತು ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿಗಳ ಹೇಳಿಕೆಗಳಿಗೂ ವ್ಯತ್ಯಾಸವೇ ಇಲ್ಲದಷ್ಟು ಬುದ್ಧದೇವರ ಕಮ್ಯುನಿಸಂ ಕಾಂಗ್ರೆಸ್ ಆಗಿಹೋಗಿದೆ. ಅಥವಾ ಆರ್ಥಿಕ ವಿಷಯಗಳಲ್ಲಿ ಬಿ.ಜೆ.ಪಿ. ಆಗಿಹೋಗಿದೆ!



ಆದ್ದರಿಂದಲೇ ಕೆಲವು ಪತ್ರಕರ್ತರ ವಲಯದಲ್ಲಿ ಈ ಬಗೆಯ ಮಾತೊಂದು ಚಾಲ್ತಿಯಲ್ಲಿದೆ. ಎಡರಂಗ ಸರ್ಕಾರ ದೇಶದ ಬೇರೆಬೇರೆ ಕಡೆ ವಿದೇಶಿ ಬಂಡವಾಳಕ್ಕೆ ವಿರೋಧ ವ್ಯಕ್ತ ಪಡಿಸುತ್ತದೆ. ಅದರಲ್ಲೂ ಉನ್ನತ ತಂತ್ರಜ್ಞಾನ ಮತ್ತು ಮೂಲಭೂತ ಸೌಕರ್ಯಗಳ ವಿಷಯಗಳಲ್ಲಿ ಬಿಟ್ಟರೆ ಮಿಕ್ಕ ಯಾವ ಕ್ಷೇತ್ರದಲ್ಲೂ ಯಾವ ಕಾರಣಕ್ಕೂ ವಿದೇಶಿ ಬಂಡವಾಳ ಕೂಡದೆಂಬುದು ಅವರ ಅಧಿಕೃತ ನಿಲುವು. ಅದಕ್ಕೇ ದೆಹಲಿಯಲ್ಲಿ ಏರ್‌ಪೋರ್ಟ್‌ನಂಥ ಕ್ಷೇತ್ರಗಳಲ್ಲಿ ವಿದೇಶಿ ಬಂಡವಾಳ ಬೇಡವೆಂದು ಸಕಾರಣವಾಗಿಯೇ ವಿರೋಧಿಸಿ ಕೆಂಬಾವುಟ ಏರಿಸಿದ್ದರು. ಆದರೆ ಪ.ಬಂಗಾಳ ದಲ್ಲಿ ಇದೇ ಕಮ್ಯುನಿಸ್ಟ್ ಸರ್ಕಾರ ಇಂಡೋನೇಷಿಯಾದ ಸಲೀಮ್ ಗ್ರೂಪ್ ಎಂಬ ಕಂಪನಿಯಿಂದ ಬಿ.ಎಂ.ಐ.ಸಿ. ಯಂಥ ರಿಯಲ್ ಎಸ್ಟೇಟ್ ಯೋಜನೆಗಾಗಿ ವಿದೇಶಿ ಬಂಡವಾಳ ಆಹ್ವಾನಿಸಿದೆ. ಇದರಲ್ಲಿ ಯಾವ ಉನ್ನತ ತಂತ್ರಜ್ಞಾನವೂ ಇಲ್ಲ, ಇದು ರೈತರಿಗೆ ಉಪಯುಕ್ತ ಆಗಬಹುದಾದ ಮೂಲಭೂತ ಸೌಕರ್ಯದ ಯೋಜನೆಯೂ ಅಲ್ಲ. ಬದಲಿಗೆ ರೈತರ ಫಲವತ್ತಾದ ಏಳು ಸಾವಿರ ಎಕರೆ ಜಮೀನನ್ನು ವಶ ಪಡಿಸಿಕೊಂಡು ವಿದೇಶಿ ಬಂಡವಾಳಕ್ಕೆ ಅನುಕೂಲವಾದ ಎಕ್ಸ್‌ಪ್ರೆಸ್ ಹೈವೇ ಮತ್ತು ಐದು ಟೌನ್‌ಶಿಪ್‌ಗಳನ್ನು ನಿರ್ಮಿಸಲಾಗುತ್ತಿದೆ. ಇಂತಹುದೇ ಯೋಜನೆಯನ್ನೇನಾದರೂ ಬೇರೆ ಪಕ್ಷದ ಸರ್ಕಾರಗಳು ಜಾರಿಗೆ ತಂದಿದ್ದರೆ ಇದೇ ಬುದ್ಧದೇವರ ಪಕ್ಷ ಹೋರಾಟದ ಮುಂಚೂಣಿಯಲ್ಲಿರುತ್ತಿತ್ತು. ಆದರೆ ಇದು ಅವರದೇ ಸರಕಾರ. ಅತ್ತೆ ಒಡೆದ ಪಾತ್ರೆಗೆ ಬೆಲೆಯಿಲ್ಲ, ಅಲ್ಲವೇ?

ಆದ್ದರಿಂದಲೇ ಈ ಸಿ.ಪಿ.ಎಂ. ಪಕ್ಷದ ಬಗ್ಗೆ "ದೆಹಲಿಯಲ್ಲಿ ಲಾಲ್ ಸಲಾಮ್-ಕೊಲ್ಕತ್ತದಲ್ಲಿ ಲಾಲ್ ಸಲೀಮ್" ಎಂಬ ಮಾತು ಚಾಲ್ತಿಗೆ ಬಂದಿದೆ..!!

ಸೆನ್ಸೆಕ್ಸ್: ಏರಿದವನು ಇಳಿಯಲೇಬೇಕೆಂಬ ಸತ್ಯ

ಚಾರ್ವಾಕ

- ಶಿವಸುಂದರ್-


ಸೆನ್ಸೆಕ್ಸ್ ಗುಳ್ಳೆ ಒಡೆದಿದೆ. ಕಳೆದ ಎರಡು ತಿಂಗಳುದ್ದಕ್ಕೂ ಏರುತ್ತಲೇ ಹೋದ ಸೆನ್ಸೆಕ್ಸ್ ಬಲೂನು ಹನ್ನೆರಡು ಸಾವಿರದಷ್ಟು ಅಂಶಗಳನ್ನು ದಾಟಿತ್ತು. ಅದನ್ನು ದೇಶದ ಸರ್ಕಾರಿ ಹಾಗೂ ವಿದೇಶಿ ಬಂಡವಾಳಪರ ಆರ್ಥಿಕ ತಜ್ಞರು ಸುಸ್ಥಿತ ಆರ್ಥಿಕತೆಗೆ ಉದಾಹರಣೆ ಎಂದು ಕೊಂಡಾಡುತ್ತಲೇ ಬಂದರು. ಈಗ ಸೆನ್ಸೆಕ್ಸ್ ಬಲೂನು ಒಡೆದಿದೆ. ಒಂದೇ ವಾರದಲ್ಲಿ ಸಾವಿರದಿನ್ನೂರು ಅಂಶಗಳಷ್ಟು ಕುಸಿತ ಕಂಡಿದೆ. ಅಂದರೆ ಶೇರು ಪೇಟೆ ಪಂಡಿತರ ಪ್ರಕಾರ ಮೂರುವರೆ ಲಕ್ಷ ಕೋಟಿ ರುಪಾಯಿಗಳಷ್ಟು ನಷ್ಟ! ಯಾರಿಗೆ? ಸಾಮಾನ್ಯ ಜನಕ್ಕಲ್ಲ. ದಿಢೀರ್ ಶ್ರೀಮಂತರಾಗಲು ಬಯಸಿದ್ದ ಈ ದೇಶದ ಮಧ್ಯಮ ವರ್ಗದ ಎರಡು ಕೋಟಿ ಜನರಿಗೆ. ಅದೂ ಯಾಕಾಗಿ? ಶೇರು ಮಾರುಕಟ್ಟೆ ಯಲ್ಲಿ ಲಕ್ಷಾಂತರ ಬಂಡವಾಳ ಹೂಡಿ ಕೋಟ್ಯಾಂತರ ಲಾಭ ತೆಗೆಯುವ ವಿದೇಶಿ ಬಂಡವಾಳಿಗರ ಮೇಲೆ ತೆರಿಗೆ ಹಾಕುವ ಪ್ರಸ್ತಾಪ ಮಾಡಿದ್ದಕ್ಕೆ!



ಇದನ್ನು ಕಂಡ ಅರ್ಥ ಮಂತ್ರಿ ಚಿದಂಬರಂ "ಇದು ಕೇವಲ ಪ್ರಸ್ತಾಪ ಅಷ್ಟೆ. ಇದಕ್ಕೆ ಶೇರು ಪೇಟೆ ಹೇಗೆ ಪ್ರತಿಕ್ರಿಯಿಸುತ್ತದೆ ಎಂದು ಪರೀಕ್ಷಿಸಿದೆವಷ್ಟೆ. ಯಾರೂ ಹೆದರಬೇಕಿಲ್ಲ-ತೆರಿಗೆ ಹಾಕುವುದಿಲ್ಲ" ಎಂದು ಭರವಸೆ ಕೊಟ್ಟಿದ್ದಾರೆ. ಅಲ್ಲಿಗೆ ಮುಗಿಯಿತು- ಈ ಸರ್ಕಾರದ ದೇಸೀ ಪ್ರಜ್ಞೆ. ದೇಶದ ರೈತರಿಗೆ ಕೊಡುತ್ತಿದ್ದ ಸಬ್ಸಿಡಿ ಹಿಂತೆಗೆದುಕೊಂಡ ಮೇಲೆ ರೈತರು ಆತ್ಮಹತ್ಯೆ ಮಾಡಿಕೊಂಡು ತಮ್ಮ ಪ್ರತಿಕ್ರಿಯೆ ವ್ಯಕ್ತ ಪಡಿಸಿದರೂ ಕಿಂಚಿತ್ತೂ ಚಲಿಸದ ಸರ್ಕಾರ ವಿದೇಶಿ ಬಂಡವಾಳಿಗರು ಸ್ವಲ್ಪ ಮುನಿಸಿಕೊಂಡರೂ ತಕ್ಷಣ ಸಂವಿಧಾನಕ್ಕೆ ಬದಲಾವಣೆ ತರಲು ಸಿದ್ಧವಾಗುತ್ತದೆ.

ಎಲ್ಲಕ್ಕಿಂತ ಹೆಚ್ಚಾಗಿ ವಿದೇಶಿ ಬಂಡವಾಳವನ್ನು ನೆಚ್ಚಿಕೊಂಡರೆ ಒಂದು ದೇಶದ ಆರ್ಥಿಕ ಪರಿಸ್ಥಿತಿ ಹೇಗೆ ಎಕ್ಕುಟ್ಟು ಹೋಗಬಹುದೆಂಬುದಕ್ಕೆ ಇದೊಂದು ಸಣ್ಣ ಉದಾಹರಣೆಯಷ್ಟೆ.

ಮೀಸಲಾತಿ ವಿವಾದ: ಸೀಟು ಹೆಚ್ಚಳವೆಂಬ ಮಾರ್ಜಾಲ ನ್ಯಾಯ



ಕೇಂದ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಒ.ಬಿ.ಸಿ. ಸಮುದಾಯದವರಿಗೆ ಮೀಸಲಾತಿ ನಿಗದಿ ಪಡಿಸಬೇಕೆಂಬ ಅರ್ಜುನ್ ಸಿಂಗರ ಅರೆ ಮನಸ್ಸಿನ ಪ್ರಸ್ತಾಪದ ವಿರುದ್ಧ ನಡೆಯುತ್ತಿರುವ ಚಳವಳಿ ಒಂದು ಕೃತಕ ಕಾವು ಪಡೆದುಕೊಳ್ಳುತ್ತಿದೆ! ಎಲ್ಲಾ ಚುನಾವಣಾ ಪಕ್ಷಗಳು ತಮ್ಮ ಬೆಂಬಲ ಈ ಹೋರಾಟಕ್ಕಿಲ್ಲವೆಂದು ಘೋಷಿಸಿದ್ದರೂ ದೇಶದ ಹಲವು ನಗರಗಳಲ್ಲಿ ಪ್ರದರ್ಶನಗಳು ನಡೆಯುತ್ತಿವೆ. ಕೆಲವು ನೂರು ವೈದ್ಯ ವಿದ್ಯಾರ್ಥಿಗಳು ಕೆಲವು ನಗರಗಳಲ್ಲಿ ಮೀಸಲಾತಿ ವಿರೋಧಿ ಪ್ರದರ್ಶನ ನಡೆಸಿದ ಮಾತ್ರಕ್ಕೆ ಮಾಧ್ಯಮಗಳು ಅದಕ್ಕೆ ದೇಶವ್ಯಾಪಿ ಬೃಹತ್ ಚಳವಳಿ ಎಂಬ ಸ್ವರೂಪ ಕೊಡುತ್ತಿವೆ. ಲಕ್ಷ ಲಕ್ಷ ಆದಿವಾಸಿಗಳು, ಕಾರ್ಮಿಕರು, ರೈತರು ದೇಶಾದ್ಯಂತ ತಿಂಗಳುಗಟ್ಟಲೆ ಚಳವಳಿ ನಡೆಸಿದರೂ, ಆತ್ಮಹತ್ಯೆ ಮಾಡಿಕೊಂಡರೂ ತಿರುಗಿ ನೋಡದ ಸರ್ಕಾರ ಈ "ಮಾಧ್ಯಮ ಚಳವಳಿಗೆ" ಮಣಿದು ಹೊಸ ಖಾಜಿ ಸೂತ್ರವನ್ನು ಮುಂದಿಟ್ಟಿದೆ.

ಈ ಮಾರ್ಜಾಲ ನ್ಯಾಯದ ಪ್ರಕಾರ ಒ.ಬಿ.ಸಿ. ವಿದ್ಯಾರ್ಥಿಗಳಿಗೆ ಸೀಟು ಹೆಚ್ಚಿಸಿದರೂ ಅದರ ಶಾಖ 'ಮೆರಿಟ್' ವಿದ್ಯಾರ್ಥಿಗಳಿಗೆ ತಟ್ಟದಂತೆ ಒಟ್ಟಾರೆ ಮೆರಿಟ್ ಸೀಟನ್ನು ಹೆಚ್ಚಿಸಲಾಗುವುದಂತೆ. ಇದರಿಂದ ಯಾವ ಸಾಮಾಜಿಕ ನ್ಯಾಯ ಜಾರಿಗೆ ಬಂದಂತಾಯಿತು? ಇನ್ನು ಮುಂದೆ 'ಮೆರಿಟ್' ಉಳ್ಳ ಒ.ಬಿ.ಸಿ. ವಿದ್ಯಾರ್ಥಿಗಳು ಮೀಸಲಾತಿ ಕೋಟದಲ್ಲೇ ಬರುವಂತಾದರೆ ಆಗ ಹೆಚ್ಚಳವಾಗುವ ಸೀಟುಗಳು ಕೋಟಾದ 'ಮೆರಿಟ್' ವಿದ್ಯಾರ್ಥಿಗಳಿಗೆ ಬೋನಸ್! ಹೀಗೆ ಸರ್ಕಾರದ ಈ ಖಾಜಿ ನ್ಯಾಯದಿಂದ ಒ.ಬಿ.ಸಿ. ವಿದ್ಯಾರ್ಥಿಗಳಿಗೆ ಲಾಭವಾಗುತ್ತದೋ ಇಲ್ಲವೋ ಗೊತ್ತಿಲ್ಲ, ಆದರೆ 'ಮೆರಿಟ್' ವಿದ್ಯಾರ್ಥಿಗಳಿಗಂತೂ ಬೋನಸ್ ಸೀಟುಗಳು ಗ್ಯಾರಂಟಿ!


ಒಂದು ಪ್ರಶ್ನೆ:

ಪ. ಬಂಗಾಳದಲ್ಲಿ ಮತ್ತೊಮ್ಮೆ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದಿದೆ. ಸತತ ಏಳನೇ ಬಾರಿ. ಏನಿದರ ಗುಟ್ಟು? ಗುಟ್ಟು ಬಿಡಿಸುವ ಮುನ್ನ ಕೆಲವು ವಿಷಯಗಳು ರಟ್ಟಾಗಿವೆ. ಎಡರಂಗವನ್ನು ಯಶಸ್ವಿಯಾಗಿ ಗೆಲ್ಲಿಸಿದ ಬುದ್ಧದೇವ ಭಟ್ಟಾಚಾರ್ಯರವರೇ ಈ ಬಾರಿಯೂ ಮುಖ್ಯಮಂತ್ರಿ. ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭ ಈ ಬಾರಿ ವಿಶೇಷವಾಗಿಯೂ ಇತ್ತಲ್ಲದೆ ಹಲವು ಗುಟ್ಟುಗಳನ್ನು ಹೊರಗೆ ಕೂಡಾ ಹಾಕಿತು. ಏನವು?

ಬುದ್ಧದೇವರು ಗೆದ್ದ ತಕ್ಷಣ ಖುಷಿಯಾದವರು ಯಾರು?ಯಾರು? ಸಾಮಾನ್ಯವಾಗಿ ಒಬ್ಬ ಕಮ್ಯುನಿಸ್ಟ್ ಗೆದ್ದರೆ ರೈತರು, ಕಾರ್ಮಿಕರು ಖುಷಿ ಪಡುತ್ತಾರೆ. ಆದರೆ ಇಲ್ಲಿ ಕಾಮ್ರೇಡ್ ಬುದ್ಧ ಗೆದ್ದರೆ ಸಂತೋಷಗೊಂಡಿದ್ದು ಐ.ಟಿ. ನರಿ ನಾರಾಯಣಮೂರ್ತಿ, ಪ್ರೇಮ್‌ಜಿ, ರತನ್ ಟಾಟಾ.. ಇತ್ಯಾದಿ ಕಾರ್ಮಿಕರ ರಕ್ತ ಕುಡಿಯುತ್ತಿರುವ ಹಾಗೂ ನಾಡಿಗೆ ಕಂಟಕವಾಗಿರುವ ಬಂಡವಾಳಶಾಹಿಗಳು. ಅಷ್ಟು ಮಾತ್ರವಲ್ಲ, ಬುದ್ಧದೇವರ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಇಡೀ ಈ ಬಂಡವಾಳಶಾಹಿ ವಿಪ್ರೋತ್ತಮರನ್ನು ಹಾಗೂ ರತ್ನಗಳನ್ನು ಆಹ್ವಾನಿಸಲಾಗಿತ್ತು.

ಈಗ ಪ್ರಶ್ನೆಯೇನೆಂದರೆ ಕಮ್ಯುನಿಸ್ಟ್ ಬುದ್ಧ ಗೆದ್ದರೆ ಬಂಡವಾಳಶಾಹಿಗಳು ಖುಷಿಯಾದದ್ದೇಕೆ? ಎಡರಂಗದ ಸರಕಾರದ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಈ ಬಂಡವಾಳಶಾಹಿಗಳಿಗೇನು ಕೆಲಸ? ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೇನು ಕೆಲಸ?

No Comments



"ಭೈರಪ್ಪ ಕನ್ನಡ ಕಾದಂಬರಿ ಲೋಕದ ಕಾಮನಬಿಲ್ಲು"

- ಮಹೇಶ್ ಜೋಷಿ. ದೂರದರ್ಶನದ ನಿರ್ದೇಶಕರು

"ಬೆಂಗಳೂರಿನ ಪ್ರಾಥಮಿಕ ಶಾಲಾ ಶಿಕ್ಷಕರು ಸರಿಯಾಗಿ ಕನ್ನಡ ವರ್ಣಮಾಲೆ ಹೇಳಿದರೆ ನೊಬೆಲ್ ಪ್ರೈಜ್ ಕೊಡಬಹುದು"

-ಜಿ. ವೆಂಕಟಸುಬ್ಬಯ್ಯ. ಹಿರಿಯ ಭಾಷಾ ತಜ್ಞರು

"ಸರ್ಕಾರ ಜನರ ಮನ ಒಲಿಸಿ ತದಡಿ ಸ್ಥಾವರ ಅನುಷ್ಠಾನಕ್ಕೆ ತರಲಿ"

-ಪೇಜಾವರ ಸ್ವಾಮಿಜಿ

"ಅಗತ್ಯ ಬಿದ್ದರೆ ನಾವು ಪೋಲಿಸ್ ಸ್ಟೇಷನ್ನಿನಲ್ಲೇ ಬಾಂಬ್ ತಯಾರಿಸುತ್ತೇವೆ"


-ಕೊಡಿಯೇರಿ. ಕೇರಳದ ಹೊಸ ಗೃಹಮಂತ್ರಿ (ಚುನಾವಣೆಗೆ ಮುನ್ನ)

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಜ್ಯೂಲಿ ಚಿತ್ರದಲ್ಲಿ ಒಳ್ಳೆ ಮೆಸೇಜಿದೆ"

-ರಮ್ಯ[...]



"ನನಗೆ ಯಾರ ಋಣವೂ ಇಲ್ಲ"

-ಪಿ.ಜಿ.ಆರ್.ಸಿಂಧ್ಯಾ

"ಆರ್ಥಿಕ ಸುಧಾರಣೆಯು ಜನರ ಪರವಾಗಿದ್ದರೆ ನಾವು ಸುಧಾರಣಾ ಕ್ರಮಗಳ ಪರ-ಇಲ್ಲದಿದ್ದರೆ ನಾವು ಸುಧಾರಣೆಯ ವಿರುದ್ಧ"

-ಸೀತಾರಾಂ ಯೆಚೂರಿ[...]

"ಒಳ್ಳೆಯ ಆಟಗಾರರಿಗೆ ಗಾಡ್ ಫಾದರ್‌ಗ[...] ಅಗತ್ಯವಿಲ್ಲ"

-ಕಿರಣ್ ಮೋ[...] ಕ್ರಿಕೆಟ್ ಆಯ್ಕೆ ಸಮಿತಿಯ ಅಧ್ಯಕ್ಷ[...]

ವಾರದ ಘೋಷಣೆ:

"ಬಾಬಾಬುಡನ್‌ಗಿರಿ ಅಯೋಧ್ಯೆಯಲ್ಲ- ಕರ್ನಾಟಕವೆಂದೂ ಗುಜರಾತ್ ಅಲ್ಲ"

-ಕರ್ನಾಟಕ ಫೋರಂ ಫಾರ್ ಡಿಗ್ನಿಟಿ (KFD) ವತಿಯಿಂದ ಬೆಂಗಳೂರಿನಲ್ಲಿ ಆಯೋಜಿಸಿದ್ದ ಬೃಹತ್ "ಕರ್ನಾಟಕವನ್ನು ಫ್ಯಾಸಿಸ್ಟರಿಂದ ಉಳಿಸಿ" ಸಮಾವೇಶದಲ್ಲಿ ಕೇಳಿಬಂದ ಘೋಷಣೆ.

ಮೀಸಲಾತಿ: ಬೆಂಕಿ? ಬೆಳಕು?

ದೇಶಾದ್ಯಂತ ಇಂದು ಮೀಸಲಾತಿ ವಿರೋಧಿ ಕಾವು ಏರುತ್ತಿದೆ. ಅಷ್ಟೇ ಮಟ್ಟಿಗೆ ಅದರ ಬಗ್ಗೆ ಇರುವ ಸಕಾರಣವಾದ ಹಾಗೂ ವಿನಾಕಾರಣವಾದ ಸಂದೇಹಗಳೂ ಸಹ. 'ಲಂಕೇಶ್' ಬಳಗ ನಾಡಿನಲ್ಲಿ ನಡೆಯುತ್ತಿರುವ ಈ 'ಬರ್ನಿಂಗ್' ವಿಷಯದ ಬಗ್ಗೆ ಒಂದು ಚರ್ಚೆ ನಡೆಸಲಿದೆ. ಆಸಕ್ತರೆಲ್ಲರಿಗೂ ಇದೇ ಆಹ್ವಾನ.

ಚರ್ಚೆಯಲ್ಲಿ ಭಾಗವಹಿಸುವವರು : ಪ್ರೊ. ಜಾಫೆಟ್ ಶಾಂತಪ್ಪ, ಇಂದೂಧರ ಹೊನ್ನಾಪುರ, ಶಿವಸುಂದರ್, ಗೌರಿ ಲಂಕೇಶ್ ಮತ್ತು ನೀವು

ದಯಮಾಡಿ ಬನ್ನಿ

ಮೇ 26 ಶುಕ್ರವಾರ ಸಂಜೆ 5 ಗಂಟೆಗೆ 'ಲಂಕೇಶ್' ಕಚೇರಿಯಲ್ಲಿ

'ಆಸೆಯೇ ದುಃಖಕ್ಕೆ ಮೂಲ' ಎಂಬ ಮಾತಿದೆ. ಆದರೆ ದುಃಖಕ್ಕೆ ನೂರಾರು ಕಾರಣಗಳು, ಪರಿಹಾರಗಳು ಇವೆ ಎಂಬುದು ಎಲ್ಲರಿಗೂ ಗೊತ್ತು. ಈ ವಾರ 'ದುಃಖ' ಕುರಿತಾದ ಸೂಕ್ತಿಗಳನ್ನು ಕಳುಹಿಸಿರುವ ಯುವ ಬರಹಗಾರ ಮ.ತಿ. ವೀರಣ್ಣನವರು "ದುಃಖವು ಕ್ರಿಯಾತ್ಮಕ ಬದುಕಿಗೂ ಕಾರಣ" ಎಂದು ನಂಬಿರುವವರು. ಅವರ ಆಯ್ಕೆಗಳು ನಿಮಗೆ ಇಷ್ಟವಾಗುತ್ತವೆ ಎಂದು ನಂಬಿದ್ದೇವೆ.

-ಗೌರಿ

ದುಃಖವು ಎಷ್ಟೇ ದೊಡ್ಡದಿರಲಿ, ಅದನ್ನು ತಾಳಿಕೊಳ್ಳುವುದರಲ್ಲಿ ಮನುಷ್ಯತ್ವವಿದೆ. -ಶರಶ್ಚಂದ್ರ

"ಇಗೋ, ಇದೇ ನಿನ್ನ ಮನೆಯ ದಾರಿ"

ಗುಡ್ಡ ಪ್ರದೇಶದಲ್ಲಿರುವ ಆ ಹಳ್ಳಿಯನ್ನು ...ಸಲು ಇರುವುದು ಅದೊಂದೇ ರಸ್ತೆ. ಬೇಸಿಗೆಯಲ್ಲಿ ...ಮ್ಯಾದ ಭತ್ತದ ಬೆಳೆಯಿಂದ ಸುತ್ತುವರಿದಿರುವ, ...ಗಾಲದಲ್ಲಿ ಹಿಮದಡಿ ಹೂತು ಹೋಗುವ ಆ ...ಯನ್ನು ಮುಟ್ಟಬೇಕಾದರೆ ಇರುವ ಏಕೈಕ ಮಾರ್ಗ ದಾರಿ. ಒಂದು ದಿನ ಆ ರಸ್ತೆಯಲ್ಲಿ ಹಳ್ಳಿಯ ...ಲಾ ಶಿಕ್ಷಕನಾಗಲು 20 ವರ್ಷದ ಯುವಕ ಆಗಮಿಸು ...ನೆ. ಇಡೀ ಹಳ್ಳಿ ಅವನನ್ನು ಸ್ವಾಗತಿಸಲು ನಿಂತಿರುತ್ತದೆ. ...ವರಲ್ಲಿ 18 ವರ್ಷದ ಆ ಯುವತಿ ಕೂಡ ಒಬ್ಬಳು. ...ವನನ್ನು ನೋಡಿ ಆಕೆ ವಿವರಿಸಲಾಗದಂತಹ ...ರೋಮಾಂಚನಕ್ಕೆ ಒಳಗಾಗುತ್ತಾಳೆ. ಆತ ಕೂಡ ಕೆಂಪು ...ಕೇಟನ್ನು ಧರಿಸಿರುವ ಸುಂದರ ಯುವತಿಯನ್ನು ...ನುನಿಸಿ ಸುಮ್ಮನಾಗುತ್ತಾನೆ. ಹಳ್ಳಿಯ ಜನರೆಲ್ಲಾ ಸೇರಿ ...ಲಾ ಕಟ್ಟಡವನ್ನು ನಿರ್ಮಿಸಲು ಪ್ರಾರಂಭಿಸುತ್ತಾರೆ. ...ರುಷರೆಲ್ಲಾ ನಿರ್ಮಾಣ ಕೆಲಸದಲ್ಲಿ ತೊಡಗಿದ್ದರೆ, ...ಹಿಳೆಯರು ಅವರಿಗೆಲ್ಲ ಊಟ ತಯಾರಿಸಿ ತಂದಿಡು ...ತ್ತಾರೆ. ಆ ಯುವತಿ ತನ್ನ ಅಚ್ಚುಮೆಚ್ಚಿನ ಪಿಂಗಾಣಿ ...ತ್ರೆಯಲ್ಲಿ ಆ ಶಿಕ್ಷಕನಿಗೆಂದೇ ರುಚಿ ರುಚಿಯಾದ ...ಟ ತಯಾರಿಸಿ ತರುತ್ತಿರುತ್ತಾಳೆ. ಆದರೆ ತಾನು ...ಯಾರಿಸಿದ ಊಟವನ್ನು ಆತ ತಿಂದನೋ ...ಲ್ಲವೋ ಎಂದು ಗೊತ್ತಾಗದೇ ಒದ್ದಾಡುತ್ತಾಳೆ. ...ಲೆ ಪ್ರಾರಂಭವಾದಾಗ ಹಳ್ಳಿಯ ಯುವತಿ ...ಒಬ್ಬಳು ನೇಯ್ದಿರುವ ಕೆಂಪು ಧ್ವಜ ವನ್ನು ...ರಿಸಬೇಕೆಂಬ ನಿಯಮವಿರುತ್ತದೆ. ತಾನೇ ಆ ...ಪು ಬಟ್ಟೆಯನ್ನು ನೇಯಬೇಕೆಂಬ ಆಶೆಯಿಂದ ... ಯುವತಿ ರಾತ್ರಿ-ಹಗಲು ಕಷ್ಟ ಪಟ್ಟು ...ಯುತ್ತಾಳೆ.

ಆ ಹಳ್ಳಿಯಲ್ಲಿ ಎರಡು ಬಾವಿಗಳು. ಒಂದು ...ರಿಗೆ ಹತ್ತಿರವೇ ಇರುವ ಹೊಸ ಬಾವಿ ...ದರೆ ಮತ್ತೊಂದು ಊರಿನಿಂದ ದೂರ ...ರುವ, ಆದರೆ ಆ ಯುವಕ ಪಾಠ ಮಾಡು ...ರುವ ಶಾಲೆಯ ಹತ್ತಿರವಿರುವ ಹಳೇಬಾವಿ. ...ವಿದ್ಯಾವಂತಳಾದ ಆಕೆ ಮಕ್ಕಳಿಗೆ ಪಾಠ ...ಳಿಕೊಡುವ ಆತನ ದನಿಯನ್ನು ಕೇಳಲೆಂದೇ ಹಳೇ ...ವಿಯಲ್ಲಿ ನೀರು ಸೇದುತ್ತಿರುತ್ತಾಳೆ. ಗ್ರಾಮ ಪಂಚಾಯ್ತಿ ...ಕಚೇರಿಯಲ್ಲೇ ವಾಸಿಸುವ ಆ ಯುವ ಶಿಕ್ಷಕ ಪ್ರತಿ ...ನ ಹಳ್ಳಿಯ ಒಬ್ಬರ ಮನೆಯಲ್ಲಿ ಸರದಿ ಮೇಲೆ ...ಹ್ವಾನ ಪಡೆದು ಊಟ ಮಾಡುತ್ತಿರುತ್ತಾನೆ. ...ನೆಗೊಂದು ದಿನ ಅವಳ ಮನೆಗೆ ಬರುತ್ತಾನೆ. ...ದೆಯನ್ನು ಎಂದೋ ಕಳೆದುಕೊಂಡು, ಕುರುಡು ...ಯಿಯನ್ನು ನೋಡಿಕೊಳ್ಳುತ್ತಿರುವ ಆಕೆಗೆ ಆ ದಿನ ಹಬ್ಬದಂತಹ ಸಂಭ್ರಮ. ರುಚಿಯಾದ ಅಡುಗೆ ತಯಾರಿಸಿ ತನ್ನ ಮೆಚ್ಚಿನ ಕೆಂಪು ಜಾಕೀಟು ಧರಿಸಿ ಅವನಿಗಾಗಿ ಕಾಯುತ್ತಿರುತ್ತಾಳೆ. ತನಗಾಗಿ ಕಾಯುತ್ತಿರುವ ಆ ಹುಡುಗಿಯ ದೃಶ್ಯ ಅವನ ಮನಸ್ಸಿನಲ್ಲಿ ಸುಂದರ ಕಲಾಕೃತಿಯಂತೆ ಅಚ್ಚಾಗುತ್ತದೆ. ಮರುದಿನ ಆಕೆ ತಯಾರಿಸಿದ ಅಣಬೆ ತಿಂಡಿಯನ್ನು ಸೇವಿಸಲು ಬರುವುದಾಗಿ ಹೇಳಿ ಹೊರಡುತ್ತಾನೆ. ಆದರೆ ಹಿರಿಯ ಅಧಿಕಾರಿಯೊಬ್ಬ ಹಳ್ಳಿಗೆ ಬಂದು ಶಾಲಾ ಶಿಕ್ಷಕ ಪೇಟೆಗೆ ಬರಲೇಬೇಕೆಂದು ಧಮಕಿ ಹಾಕುತ್ತಾನೆ. ಯುವಕ ಎಷ್ಟೇ ಪ್ರತಿಭಟಿಸಿದರೂ ಅಧಿಕಾರಿ ಕೇಳುವುದಿಲ್ಲ. ಕೊನೆಗೆ ಪೇಟೆಗೆ ಹೋಗಲು ನಿರ್ಧರಿಸಿ, ಅವಳಿಗೆ ವಿಷಯ ತಿಳಿಸಲು ಬರುತ್ತಾನೆ. ಹಲವೇ ದಿನಗಳಲ್ಲಿ ವಾಪಸ್ಸು ಬರುವುದಾಗಿ ಹೇಳುವ ಶಿಕ್ಷಕ ಕೆಂಪು ಬಣ್ಣದ ಬ್ರೋಚ್ ನೀಡಿ "ನಿನ್ನ ಕೆಂಪು ಜಾಕೀಟ ನೊಂದಿಗೆ ಹಾಕಿಕೊ, ಚೆನ್ನಾಗಿ ಕಾಣುತ್ತಿ" ಎಂದು ಹೇಳುತ್ತಾನೆ. ಅವನಿಗಾಗಿ ಪ್ರತಿ ದಿನ ಆ ರಸ್ತೆಯಲ್ಲಿ ಆ ಹುಡುಗಿ ಕಾಯುತ್ತಾ ಕಾಲ ಕಳೆಯುತ್ತಾಳೆ. ಬೇಸಿಗೆ ಕಳೆದು ಚಳಿಗಾಲ ಪ್ರಾರಂಭವಾಗುತ್ತದೆ. ಆದರೂ ಆಕೆ ರಸ್ತೆಬದಿ ಕಾಯುವುದನ್ನು ಬಿಡುವುದಿಲ್ಲ.



ಶಿಕ್ಷಕನ ಗೈರುಹಾಜರಿಯಲ್ಲಿ ಶಾಲಾ ಕಟ್ಟಡ ಪಾಳು ಬಿದ್ದಿರುತ್ತದೆ. ಅದನ್ನು ಆಕೆ ಸ್ವಚ್ಛಗೊಳಿಸುವುದನ್ನು ಗಮನಿಸುವ ಊರಿನ ಮುಖ್ಯಸ್ಥನಿಗೆ ಆಕೆ ವ್ಯಕ್ತಪಡಿಸದೇ ಇರುವ ಪ್ರೀತಿ ಗೊತ್ತಾಗುತ್ತದೆ. ಆ ಊರಿಗೆ ಅದೇ ಮೊದಲ ಪ್ರೇಮ ಪ್ರಕರಣವಾಗಿರುತ್ತದೆ. ಕೊನೆಗೊಂದು ದಿನ ಶಿಕ್ಷಕನನ್ನು ಹುಡುಕಿಕೊಂಡು ಪೇಟೆಗೆ ಹೊರಡುತ್ತಾಳೆ ಯುವತಿ. ಆದರೆ ಜೋರಾಗಿ ಬೀಳುತ್ತಿರುವ ಹಿಮದಿಂದಾಗಿ ಆಕೆ ಊರಿನ ಆ ರಸ್ತೆಯಲ್ಲೇ ಕುಸಿಯುತ್ತಾಳೆ.

ಅವಳ ಸ್ಥಿತಿಯನ್ನು ಕಂಡು ಊರಿನ ಹಿರಿಯರು ಶಿಕ್ಷಕನಿಗೆ ಪತ್ರ ಬರೆಯುತ್ತಾರೆ. ಆತ ಅವಳನ್ನು ನೋಡಲೆಂದೇ ಅಧಿಕಾರಿಗಳ ಕಣ್ಣು ತಪ್ಪಿಸಿ ಹಿಂದಿರುಗುತ್ತಾನೆ. ಆಕೆ ಚೇತರಿಸಿಕೊಂಡ ನಂತರ ಮತ್ತೆ ಪೇಟೆಗೆ ಹೊರಡುವ ಶಿಕ್ಷಕ ಎರಡು ವರ್ಷಗಳ ನಂತರ ಹಿಂದಿರುಗುತ್ತಾನೆ.

ಹಾಗೆ ಬಂದವನು ಅವಳನ್ನು ಮದುವೆ ಆಗಿ, ಒಬ್ಬ ಮಗನನ್ನು ಪಡೆದು ನಲವತ್ತು

ಕಂಡಹಾಗೆ



ವರ್ಷಗಳ ಕಾಲ ಅದೇ ಶಾಲೆಯಲ್ಲಿ ಪಾಠ ಮಾಡುತ್ತಾ ಜೀವಿಸುತ್ತಾನೆ. ಆದರೆ ಆ ಶಾಲಾ ಕಟ್ಟಡ ಹಳೆಯದ್ದಾಗಿದೆ. ಅದರ ರಿಪೇರಿಗೆಂದು ಜನರಿಂದ ಹಣ ಸಂಗ್ರಹಿಸಲು ಶುರು ಮಾಡುತ್ತಾನೆ. ಈ ಕೆಲಸದ ಸಲುವಾಗಿ ದೂರದ ಊರಿಗೆ ಹೋಗಿದ್ದಾಗ ಹೃದಯಾಘಾತದಿಂದ ಸಾವನ್ನಪ್ಪುತ್ತಾನೆ.

ಅವರಿಬ್ಬರ ಒಬ್ಬನೇ ಮಗ ಹಳ್ಳಿಯನ್ನು ಬಿಟ್ಟು ಪೇಟೆ ಸೇರಿ ಅದೆಷ್ಟೋ ವರ್ಷಗಳಾಗಿವೆ. ತಂದೆಯ ಸಾವಿನ ಸುದ್ದಿ ಕೇಳಿ ಹಿಂದಿರುಗುವ ಮಗನಿಗೆ ಒಂದು ಸಮಸ್ಯೆ ಎದುರಾಗುತ್ತದೆ. ವೃದ್ಧೆಯಾಗಿರುವ ತಾಯಿ ತನ್ನ ಪ್ರೀತಿಯ ಗಂಡನ ಅಂತ್ಯ ಸಂಸ್ಕಾರಕ್ಕೆ ಬೇಕಿರುವ ಬಟ್ಟೆಯನ್ನು ತಾನೇ ನೇಯುವುದಾಗಿ ಪಟ್ಟು ಹಿಡಿಯುತ್ತಾಳಲ್ಲದೆ, ಗಂಡನ ಶವವನ್ನು ಜೀಪಿನಲ್ಲಿ ತರಕೂಡದು, ಬದಲಾಗಿ ಹಳೆಯ ಸಂಪ್ರದಾಯದಂತೆ ಆತನನ್ನು ಹೊತ್ತು "ಇದೋ, ಇದೇ ನಿನ್ನ ಮನೆಯ ದಾರಿ" ಎಂದು ಪಠಿಸುತ್ತಾ ತರಬೇಕೆಂದು ಒತ್ತಾಯ ಮಾಡುತ್ತಾಳೆ.

ಹೊರಗೆ ಹಿಮ ಬೀಳುತ್ತಿದೆ, ತಡೆಯಲಾರದಷ್ಟು ಚಳಿ. ಇಂತಹ ಸಂದರ್ಭದಲ್ಲಿ ದೂರದ ಊರಿನಿಂದ ಶವವನ್ನು ಹೊತ್ತು ನಡೆದುಕೊಂಡು ಬರುವುದಾದರೂ ಹೇಗೆ? ಮಗ ಊರಿನ ಮುಖ್ಯಸ್ಥನೊಂದಿಗೆ ಚರ್ಚಿಸುತ್ತಾನೆ. ಶವ ಹೊರಲು 36 ಜನ, ಅವರಿಗೆ ಊಟ, ಸಿಗರೇಟು, ಬೆಚ್ಚಗಿರಲು ಗುಂಡು, ಇತ್ಯಾದಿಗಳು ಸೇರಿ 4000 ಯುವಾನ್ ಬೇಕಾಗುತ್ತದೆ ಎಂದು ಮುಖ್ಯಸ್ಥ ಲೆಕ್ಕ ಹಾಕುತ್ತಾನೆ. ಆಗ ಮಗ ಅವನ ಕೈಗೆ 5000 ಯುವಾನ್ ಇಟ್ಟು ಎಲ್ಲ ವ್ಯವಸ್ಥೆಯನ್ನು ಮಾಡಬೇಕೆಂದು ಕೋರುತ್ತಾನೆ.

ಈ ಸುದ್ದಿ ಸುತ್ತಮುತ್ತಲಿನ ಹಳ್ಳಿಗಳಿಗೆ ಹರಡಿ ಜನ ಸೇರಲಾರಂಭಿಸುತ್ತಾರೆ. ಅವರೆಲ್ಲರಿಗೆ ಯಾವುದೋ ಒಂದು ಕಾಲದಲ್ಲಿ ಪಾಠ ಹೇಳಿಕೊಟ್ಟ ಆತ ಈಗ ಹೆಣವಾಗಿದ್ದಾನೆ. ಎಲ್ಲರೂ ಜೊತೆಗೂಡಿ "ಇದೋ, ಇದೇ ನಿನ್ನ ಮನೆಯ ದಾರಿ" ಎಂದು ಪಠಿಸುತ್ತಾ ಶವವನ್ನು ಹೊತ್ತು ತರುತ್ತಾರೆ. ಇಷ್ಟು ಅದೆಷ್ಟೋ ಜನ ಹಿಮದಿಂದಾಗಿ ಊರನ್ನು ತಲುಪಲಾಗದೆ ಹಿಂದಿರುಗುತ್ತಾರೆ. ಆದರೆ ತಮಗೆ ಪಾಠ ಹೇಳಿಕೊಟ್ಟ ಶಿಕ್ಷಕನ ಕೊನೆ ಯಾತ್ರೆಗೆ ಅವ ರ್‍ಯಾರೂ ಹಣ ಸ್ವೀಕರಿಸುವುದಿಲ್ಲ, ಊರ ಮುಖ್ಯಸ್ಥ ಆ ಹಣವನ್ನು ಮಗನಿಗೆ ಹಿಂದಿರುಗಿಸುತ್ತಾನೆ.

ಆಗ ತಾಯಿ ಮಗನ ಹಣದೊಂದಿಗೆ ತಾನು ಮತ್ತು ಗಂಡ ಕೂಡಿಸಿಟ್ಟಿದ್ದ ಹಣವನ್ನು ಸೇರಿಸಿ ಹೊಸ ಶಾಲಾ ಕಟ್ಟಡ ಕಟ್ಟಲು ನೀಡುತ್ತಾಳೆ. ಮಗ ಇನ್ನೇನು ಪೇಟೆಗೆ ಹಿಂದಿರುಗಬೇಕು, ಆಗ ತಾಯಿ ತನ್ನ ಕೊನೆ ಆಸೆಯನ್ನು ವ್ಯಕ್ತಪಡಿಸುತ್ತಾಳೆ. ಅದೇನೆಂದರೆ ತನ್ನ ಪ್ರೀತಿಯ ಗಂಡನಂತೆ ಮಗ ಕೂಡ ಆ ಶಾಲೆಯಲ್ಲಿ ಒಂದು ದಿನದ ಮಟ್ಟಿಗಾದರೂ ಪಾಠ ಮಾಡುವುದು....

ಇದು 'ರೋಡ್ ಹೋಮ್' ಎಂಬ ಚೀನಿ ಸಿನಿಮಾದ ಕತೆ. ಪ್ರಖ್ಯಾತ ಜಾಂಗ್ ಯಿಮು ಇದನ್ನು ನಿರ್ದೇಶಿಸಿದ್ದರೂ ಇದರಲ್ಲಿ ಯಾವ ರಾಜಕೀಯ ಸಂದೇಶಗಳಿಲ್ಲ, ಬಂಡಾಯದ ಸದ್ದಿಲ್ಲ, ಬದಲಾಗಿ ಇದೊಂದು ಅಪ್ಪಟ ಪ್ರೇಮ ಕತೆಯಾದರೂ ಇದರಲ್ಲಿ ಪ್ರೇಮಿಗಳು ಮುದ್ದಾಡುವುದಿರಲಿ, ಒಬ್ಬರನ್ನೊಬ್ಬರು ಮುಟ್ಟುವುದೂ ಇಲ್ಲ. ಗಾಢವಾದ ಪ್ರೇಮವನ್ನು ಮಾತಿನಲ್ಲಿ ಹೇಳದೆ ಭಾವನೆಗಳ ಮೂಲಕ ತೋರಿಸುವ, ಶಾಲಾ ಶಿಕ್ಷಕನ ಬಗ್ಗೆ ಇರುವ ಗೌರವವನ್ನು ತೆರೆದಿಡುವ, ಮಗನ ಹೊಣೆಗಾರಿಕೆಯನ್ನು ಸ್ಪಷ್ಟಪಡಿಸುವ ಈ ಚಿತ್ರ ಸರಳವಾಗಿದ್ದರೂ ಎಂದೂ ಮರೆಯಲಾಗದಂತೆ ಮನ ಮುಟ್ಟುತ್ತದೆ.

ಆ ಪುಟ್ಟ ಊರಿನ ಜನ ಯುವ ಪ್ರೇಮಿಗಳ ಬೆಚ್ಚಗಿನ ಪ್ರೀತಿಯನ್ನು ಪೋಷಿಸುವ ಪರಿ, ಶಿಕ್ಷಕನ ಸಾವಿನ ಸಂಕಟವನ್ನು ಭರಿಸುವ ರೀತಿ ನಮ್ಮನ್ನು ತಟ್ಟುತ್ತದೆ. ಮೀಸಲಾತಿ, ಎಡಪಕ್ಷಗಳ ಬಂಡವಾಳಶಾಹಿ ಪರ ಧೋರಣೆ, ಚೆಡ್ಡಿಗಳ ಹುಚ್ಚಾಟ, ತೋಟದ ಸಮಸ್ಯೆ ಇತರ ಒತ್ತಡಗಳನ್ನು ಒಂದು ಗಂಟೆ ಕಾಲ ಮರೆಯಲೆಂದು ನೋಡಿದ ಈ ಸುಂದರ ಚಿತ್ರದ ಬಗ್ಗೆ ನಿಮ್ಮೊಂದಿಗೆ ಹಂಚಿಕೊಳ್ಳಬೇಕು ಅನ್ನಿಸಿದ್ದಕ್ಕೆ ಈ ಟಿಪ್ಪಣಿ.

-ಗೌರಿ ಲಂಕೇಶ್

ನಮ್ಮ ರೇಶ್ಮೆ ಬೇಗನೆ ಗುಣಮುಖರಾಗಲಿ

'ಲಂಕೇಶ್' ವಾರ ಪತ್ರಿಕೆಯ ಹಿರಿಯ ಬರಹಗಾರರಾದ ರವೀಂದ್ರ ರೇಶ್ಮೆಯವರು ಸೂಕ್ಷ್ಮ ತೆರನಾದ ...ಸ್ತ್ರ ಚಿಕಿತ್ಸೆಯನ್ನು ಪಡೆದು, ನಾಲ್ಕು ದಿನಗಳ ಕಾಲ ICU ನಲ್ಲಿದ್ದು ನಿನ್ನೆ (ಶನಿವಾರ) ವಾರ್ಡಿಗೆ ಬಂದು ...ಚೇತರಿಸಿಕೊಳ್ಳುತ್ತಿದ್ದಾರೆ. ಅವರು ಬೇಗನೆ ಗುಣಮುಖರಾಗಲಿ ಎಂದು 'ಲಂಕೇಶ್' ಸಮಸ್ತ ಸಿಬ್ಬಂದಿ, ಅವರ ...ಪಾರ ಹಿತೈಷಿಗಳು, ಸ್ನೇಹಿತರು, ಹೆಂಡತಿ ಡಾ. ...ಮಳಾ ಪಾಟೀಲ್ ಮತ್ತು ಇಬ್ಬರು ಮಕ್ಕಳು ...ಶಿಸುತ್ತಿದ್ದೇವೆ.

ಸದಾ ಲವಲವಿಕೆಯಿಂದಿರುವ, ಜೀವನೋತ್ಸಾಹದಿಂದ ತುಂಬಿರುವ, ರಾಜ್ಯ-ರಾಷ್ಟ್ರ ರಾಜಕೀಯದ ...ಗ್ಗೆ ಪ್ರತಿಕ್ಷಣ ಎಚ್ಚರದಿಂದಿರುವ ರೇಶ್ಮೆಯವರು ಆಸ್ಪತ್ರೆ ಸೇರುವಂತೆ ಮಾಡಿದ್ದು ನಮ್ಮ ಸರ್ಕಾರದ ...ಬೇಜವಾಬ್ದಾರಿತನ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ...ದು ಆದದ್ದು ಹೀಗೆ:

ಕಳೆದ ಭಾನುವಾರ ಪತ್ರಿಕಾ ಕಚೇರಿಗೆ ಬಂದು ...ಮ್ಮ ರಾಜಕೀಯ ವರದಿಯನ್ನು ಬರೆದುಕೊಡುವ ...ಮುನ್ನ ಬೆಳಗ್ಗೆ ತಮ್ಮ ಹೆಂಡತಿ ಮತ್ತು ಮಗಳೊಂದಿಗೆ ...ಬೆಂಗಳೂರಿನ ಹೊರವಲಯದಲ್ಲಿರುವ ಜಕ್ಕೂರಿಗೆ ...ರೇಶ್ಮೆ ಹೋಗಿದ್ದರು. ಜಕ್ಕೂರಿನಲ್ಲಿ ನಮ್ಮ ಸರ್ಕಾರ ...ಏರೋ ಸ್ಪೋರ್ಟ್ಸ್' ನಡೆಸುತ್ತದೆ. ಆ ಏರೋ ...ಸ್ಪೋರ್ಟ್ಸ್‌ಗಳಲ್ಲಿ ಪ್ಯಾರಾ ಸೈಲಿಂಗ್ ಕೂಡ ಒಂದು. ... ಪ್ಯಾರಾ ಸೈಲಿಂಗ್‌ನಲ್ಲಿ ವ್ಯಕ್ತಿಯೊಬ್ಬರಿಗೆ ಪ್ಯಾರಾ ...ಚೂಟ್ ಅನ್ನು ಕಟ್ಟಿ, ಜೀಪೊಂದು ಅವರನ್ನು ಮುಂದೆ ...ಳೆಯುತ್ತದೆ. ಹೀಗೆ ಮುಂದೆ ಸಾಗಿದಾಗ ಪ್ಯಾರಾ ...ಚೂಟ್‌ನಲ್ಲಿ ಗಾಳಿ ತುಂಬಿ ಅದು ವ್ಯಕ್ತಿಯನ್ನು ಗಾಳಿ ...ಯಲ್ಲಿ ಸುಮಾರು 300 ಅಡಿ ಎತ್ತರಕ್ಕೆ ಹೊತ್ತೊಯ್ಯು...ದೆ. ಇದು ಇತ್ತೀಚೆಗೆ ಬೆಂಗಳೂರಿನಲ್ಲಿ ಬಹಳ ...ಜನಪ್ರಿಯವಾಗಿರುವ ಕ್ರೀಡೆ. ನಾನೂ ಕೂಡ ಕೆಲವು ...ವರ್ಷಗಳ ಹಿಂದೆ ನಮ್ಮ ಸ್ನೇಹಿತರ ನಡೆಸುವ ಪ್ಯಾರಾ ಸೈಲಿಂಗ್‌ನಲ್ಲಿ ಭಾಗವಹಿಸಿದ್ದೆ. ಅವತ್ತು ಗೊತ್ತಾಗಿದ್ದೇನೆಂದರೆ ಪ್ಯಾರಾ ಸೈಲಿಂಗ್‌ನಲ್ಲಿ ಭಾಗವಹಿಸಲು ತಕ್ಕಮಟ್ಟಿಗೆ ಪರಿಣಿತಿ ಇರಬೇಕು ಮಾತ್ರವಲ್ಲ, ಅದನ್ನು ನಡೆಸುವವರೂ ಬಹಳಷ್ಟು ಮುಂಜಾಗ್ರತೆಯನ್ನು ವಹಿಸಬೇಕು ಎಂಬುದು. ಏಕೆಂದರೆ ಕೆಳಗೆ ಇಳಿಯುವಾಗ ಭೂಮಿ ಸಮೀಪಿಸುತ್ತಿದ್ದಂತೆ ಪ್ಯಾರಾಚೂಟ್ ಎಷ್ಟು ವೇಗವಾಗಿ ಬರುತ್ತದೆ ಅಂದರೆ ಅಭ್ಯಾಸ ಇಲ್ಲದವರ ಮೈಮೂಳೆಗಳು ಜಖಂ ಆಗುವ ಸಾಧ್ಯತೆಗಳು ಹೆಚ್ಚು.

ರೇಶ್ಮೆಯವರಿಗೆ ಅಂದು ಈ ಕ್ರೀಡೆಯಲ್ಲಿ ಭಾಗವಹಿಸಲು ಇಷ್ಟವಿಲ್ಲದಿದ್ದರೂ, ಎಲ್ಲರೂ ಭಾಗವಹಿಸಿದ ನಂತರ ಅವರೆಲ್ಲರ ಒತ್ತಡಕ್ಕೆ ಮಣಿದು ಪ್ಯಾರಾ ಸೈಲಿಂಗ್ ಮಾಡಲು ಒಪ್ಪಿಕೊಂಡಿದ್ದಾರೆ. ಆದರೆ ಅವರು ಪ್ಯಾರಾಚೂಟನಲ್ಲಿ ಇಪ್ಪತ್ತು ಅಡಿ ಕೂಡ ಮೇಲಕ್ಕೆ ಹೋಗಿಲ್ಲ, ಆಗ ಜೀಪಿಗೆ ಕಟ್ಟಿದ್ದ ಹಗ್ಗ ಇದ್ದಕ್ಕಿದ್ದಂತೆ ಕಳಚಿಕೊಂಡಿದೆ. ತಕ್ಷಣವೇ ರೇಶ್ಮೆಯವರು ಇಪ್ಪತ್ತು ಅಡಿಯಿಂದ ನೆಲಕ್ಕೆ ಬಿದ್ದಿದ್ದಾರೆ. ಹಾಗೆ ಬಿದ್ದಾಗ ಅವರ ಸ್ಪೈನಲ್ ಕಾರ್ಡ್‌ನ ಮೂರು ಮೂಳೆಗಳು ಜಖಂಗೊಂಡು ಮಧ್ಯದಲ್ಲಿದ್ದ ಒಂದು ಸಂಪೂರ್ಣವಾಗಿ ಛಿದ್ರಗೊಂಡಿದೆ.



ರವೀಂದ್ರ ರೇಶ್ಮೆ

ಈ ಅನಾಹುತ ಸಂಭವಿಸಿದಾಗ ಜಕ್ಕೂರ್ ಏರೋಡ್ರೊಮಿನಲ್ಲಿ ಓರ್ವ ವೈದ್ಯ ಇರಲಿ, ಕನಿಷ್ಠ ಒಂದು ಫಸ್ಟ್‌ಏಡ್ ಕಿಟ್ ಕೂಡ ಇರಲಿಲ್ಲ. ಇನ್ನು ಆಂಬ್ಯುಲೆನ್ಸ್ ಮಾತು ಎಲ್ಲಿಂದ ಬಂದೀತು?

ದೇಹದಲ್ಲಿ ಅತಿಸೂಕ್ಷ್ಮವಾದ ಬೆನ್ನಿನ ಮೂರು ಮೂಳೆಯನ್ನೇ ಮುರಿದುಕೊಂಡು ಅಪಾರವಾದ ನೋವಿನಿಂದ ನರಳುತ್ತಿದ್ದ ರೇಶ್ಮೆಯವರನ್ನು ಅಲ್ಲಿದ್ದ ಜೀಪಿನಲ್ಲೇ ಕೂರಿಸಿಕೊಂಡು ಆಸ್ಪತ್ರೆಗೆ ಸಾಗಿಸಿದ್ದಾರೆ. ಇಂತಹ ಅಪಘಾತ ಸಂಭವಿಸಿದಾಗ ಸಮೀಪದಲ್ಲಿ ಯಾವ ಆಸ್ಪತ್ರೆ ಇದೆ ಎಂಬುದರ ಬಗ್ಗೆಯೂ ಅರಿವಿಲ್ಲದ ಆ ಜನ ಎಲ್ಲೆಲ್ಲಿಗೋ ಅಲೆದಾಡುತ್ತಿರುವಾಗ ರೇಶ್ಮೆಯವರೇ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಂದಿದ್ದಾರೆ.

ಆಸ್ಪತ್ರೆಯಲ್ಲಿ ಸಿ.ಟಿ. ಸ್ಕ್ಯಾನ್ ಮಾಡಿದ ವೈದ್ಯರು ಛಿದ್ರಗೊಂಡಿದ್ದ ಸ್ಪೈನಲ್ ಕಾರ್ಡಿನ ಭಾಗವನ್ನು ತೆಗೆದು, ಅದರ ಜಾಗದಲ್ಲಿ ಹಿಪ್ ಬೋನಿನ ಒಂದು ಭಾಗವನ್ನು ಅಳವಡಿಸಿ ಅದಕ್ಕೆ clamp ಹಾಕಬೇಕೆಂದು ಹೇಳಿದ್ದಾರೆ.

ಸೋಮವಾರ ರೇಶ್ಮೆಯವರನ್ನು ನೋಡಲು ಆಸ್ಪತ್ರೆಗೆ ಹೋದಾಗ "ಗೌರೀ, I am grounded. ಪತ್ರಿಕೆ ಆರಂಭವಾದ ದಿನದಿಂದ ಇಪ್ಪತ್ತೈದು ವರ್ಷಗಳ ಕಾಲ ಎಂದೂ ರಜೆ ಪಡೆಯದಿರುವ, ಕಾಯಿಲೆ ಎಂದು ಹಾಸಿಗೆ ಹಿಡಿಯದಿರುವ ನಾನು ಇವತ್ತು ಅಸಹಾಯಕನಾಗಿ ಮಲಗಿದ್ದೇನೆ," ಎಂದು ತಮ್ಮ ದುಃಖವನ್ನು ತೋಡಿಕೊಂಡರು. ಅವರ ಹಣೆ ಮೇಲೆ ಕೈಯಿಟ್ಟು "ನಾನು ಎಂದೂ ನಿಮ್ಮನ್ನು ಹೀಗೆ ಆಸ್ಪತ್ರೆಯಲ್ಲಿ ನೋಡುತ್ತೇನೆ ಎಂದು ಭಾವಿಸಿರಲಿಲ್ಲ" ಎಂದು ಹೇಳಿದೆ. ಆಗಲೇ ಅವರ ಹಲವಾರು ಸ್ನೇಹಿತರು, ಸಹೋದ್ಯೋಗಿಗಳು ಬರಲಾರಂಭಿಸಿದರು. ಜೆಡಿ(ಎಸ್)ನ ಪ್ರಫುಲ್ಲಾ ಮಧುಕರ್ ಮತ್ತು ಕಾಂಗ್ರೆಸ್‌ನ ಮುಖಂಡ ಎಚ್.ಕೆ. ಪಾಟೀಲ್ ಕೂಡ ಆಗಮಿಸಿದರು. ವೈದ್ಯರು ನೀಡಿದ್ದ ಚುಚ್ಚುಮದ್ದಿನಿಂದಾಗಿ ನೋವು ಕಡಿಮೆ ಆಗಿತ್ತು. ಆದರೆ ರೇಶ್ಮೆ ಎಂತಹ ಉತ್ಸಾಹಿ ಅಂದರೆ ಅವರು ಹಾಗೆ ಹಾಸಿಗೆಯ ಮೇಲೆ ಅಂಗಾತ ಮಲಗಿದ್ದರೂ ಸೀಇಟಿ ಬಗ್ಗೆ, ಕ್ಯಾಪಿಟೇಶನ್ ಕಾಲೇಜುಗಳ ಕಪಟತನದ ಬಗ್ಗೆ ಎಲ್ಲರೊಂದಿಗೆ ಚರ್ಚಿಸುತ್ತಿದ್ದರಲ್ಲದೆ, ಸರ್ಕಾರ ನಡೆಸುತ್ತಿರುವ ಏರೋ ಸ್ಪೋರ್ಟ್ಸ್‌ನಲ್ಲಿನ ಬೇಜವಾಬ್ದಾರಿಯ ಬಗ್ಗೆಯೂ ಮಾತನಾಡುತ್ತಿದ್ದರು.

ಇಂತಹ ರೇಶ್ಮೆ ಆದಷ್ಟು ಬೇಗನೆ ಚೇತರಿಸಿಕೊಂಡು ಮೊದಲಿನಂತೆ ಲವಲವಿಕೆಯಿಂದ ಓಡಾಡುವಂತಾಗಲಿ ಎಂಬುದು ನಮ್ಮೆಲ್ಲರ ಆಶೆ. ರೇಶ್ಮೆಯವರಿಗೆ ನನ್ನ ಮತ್ತು ನಮ್ಮ ಸಿಬ್ಬಂದಿಯ ಎಲ್ಲ ರೀತಿಯ ಬೆಂಬಲ ಇದೆ. ನಿಮ್ಮ ಹಾರೈಕೆಯೂ ರೇಶ್ಮೆಯವರಿಗೆ ಸಿಗಲಿ.

-ಗೌರಿ ಲಂಕೇಶ್

ರೈತ ಸಂಘದಲ್ಲಿ 'ಸಿವಿಲ್ ವಾರ್'

ಸರ್ಕಾರದ ರೈತ ವಿರೋಧಿ ಪಾಲಿಸಿಗಳ ವಿರುದ್ಧ ಹೋರಾಟ ಮಾಡುವ ಬದಲು, ವಿದೇಶಿ ಕಂಪನಿಗಳ ವಿರುದ್ಧ ಸೆಣಸಾಡುವ ಬದಲು, ಕರ್ನಾಟಕ ರಾಜ್ಯ ರೈತ ಸಂಘಟನೆಯ ನಾಯಕರು ಪರಸ್ಪರ ಜಗಳಕ್ಕೆ ನಿಂತುಬಿಟ್ಟಿದ್ದಾರೆ.

ಅಲ್ಲೊಂದು ಸಿವಿಲ್ ವಾರ್ ತರದ ಪರಿಸ್ಥಿತಿ ಸೃಷ್ಟಿಯಾಗಿದೆ.


ಹಾಲಿ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ, ವೀರಸಂಗಯ್ಯ, ಶಿವಮೊಗ್ಗ ವಸಂತ್ ಎಂಬುವರು ಒಂದೆಡೆ ಇದ್ದರೆ ಮತ್ತೊಂದೆಡೆ ಹಿರಿಯ ರೈತನಾಯಕ ಧಾರವಾಡದ ಚಾಮರಸ ಪಾಟೀಲ್, ಚುಕ್ಕಿ ನಂಜುಂಡ ಸ್ವಾಮಿ, ದೊಡ್ಡಬಳ್ಳಾಪುರದ ಡಾ. ವೆಂಕಟರೆಡ್ಡಿ, ಪ್ರಧಾನ ಕಾರ್ಯದರ್ಶಿ ಷಣ್ಮುಖ, ಮಂಗಳೂರಿನ ವರ್ಮ, ಬೆಂಗಳೂರು ಗ್ರಾಮಾಂತರದ ಪ್ರಸಾದ್, ಲಕ್ಷ್ಮಣ ಸ್ವಾಮಿ, ಮಲ್ಲಯ್ಯ ಇನ್ನೂ ಮುಂತಾದವರಿದ್ದಾರೆ.

ಇವರ ಅಸಮಾಧಾನ ಭಿನ್ನಾಭಿಪ್ರಾಯಕ್ಕೆ ಪ್ರಚೋದನೆ ನೀಡಿರುವುದೇ ಕೋಡಿಹಳ್ಳಿ ಚಂದ್ರಶೇಖರ್. ಹಣ ದುರುಪಯೋಗ, ಸಂಘಟನಾತ್ಮಕ ಶಿಸ್ತಿನ ಉಲ್ಲಂಘನೆ, ಸೈದ್ಧಾಂತಿಕ ಬದ್ಧತೆ ಮೀರಿದ ನಡವಳಿಕೆಗಳ ಆರೋಪ ಎದುರಿಸುತ್ತಿರುವ ಕೋಡಿಹಳ್ಳಿ ಚಂದ್ರು ವಿರುದ್ಧ ಈಗ ಇಡೀ ರೈತ ನಾಯಕರು ಹಾಗೂ ಕಾರ್ಯಕರ್ತರು ತಿರುಗಿ ಬಿದ್ದಿದ್ದಾರೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿಯವರ ನಿರ್ಗಮನದ ನಂತರ ಅವರ ದೇಹವಿರಿಸಿದ್ದ ಚಾಮರಾಜನಗರದ 'ಅಮೃತ ಭೂಮಿ'ಯಲ್ಲಿ ಮೂರು ಲಕ್ಷ ವೆಚ್ಚದಲ್ಲಿ ಒಂದು ಸಮಾಧಿ ನಿರ್ಮಿಸುವ ಬಗ್ಗೆ ರೈತ ಸಂಘಟನೆಯಲ್ಲಿ ನಿರ್ಣಯವಾಗಿತ್ತು. ಅದರಂತೆ ರೈತ ಸಂಘದ ಚಾಮರಾಜನಗರ ಜಿಲ್ಲಾ ಘಟಕದ ಲೆಕ್ಕದಲ್ಲಿದ್ದ ಹಣ ಡ್ರಾ ಮಾಡಲು ಕೋಡಿಹಳ್ಳಿ ಚಂದ್ರಶೇಖರ್‌ಗೆ ಸಂಘಟನೆ ಅಧಿಕಾರ ನೀಡಿತ್ತು. ಉಳಿದ ಜಿಲ್ಲಾ ಘಟಕಗಳು ನಂತರ ತಲಾ ಇಂತಿಷ್ಟೆಂದು ಹಣ ಕೂಡಿಸಿ ಚಾಮರಾಜನಗರ ರೈತರಿಗೆ ಹಿಂತಿರುಗಿಸುವಂತೆಯೂ ನಿರ್ಣಯವಾಗಿತ್ತು ಎನ್ನಲಾಗಿದೆ.

ಇದಾದ ಮೇಲೆ ಚಂದ್ರಶೇಖರ್ ಅರ್ಜೆಂಟಾಗಿ ಹಣವನ್ನೇನ್ನೋ ಡ್ರಾ ಮಾಡಿ ಜೇಬಲ್ಲಿಟ್ಟುಕೊಂಡಿದ್ದಾರೆ. ಆದರೆ ಆರು ತಿಂಗಳಾದರೂ ಸಮಾಧಿ ನಿರ್ಮಾಣದ ಕೆಲಸ ಮಾತ್ರ ಶುರುವಾಗಲೇ ಇಲ್ಲ. ಸಮಾಧಿ ಕಟ್ಟಿರುವ ಬದಲಾಗಿ ಚಂದ್ರು ಬೊಲೆರೋ ಕಾರು ಖರೀದಿಸಿ ಓಡಾಡತೊಡಗಿದರು.

ಈ ನಡುವೆ ಕಳೆದ ಜನವರಿಯಲ್ಲಿ ಬೆಂಗಳೂರಿನ ಕತ್ತರಿಗುಪ್ಪೆಯಲ್ಲಿ ಸೈಟ್ ಡೀಲ್ ಒಂದಕ್ಕೆ ಕೈ ಹಾಕಿದ ಚಂದ್ರು ಲ್ಯಾಂಡ್ ಮಾಫಿಯಾಗಳು, ಕ್ರಿಮಿನಲ್ ಪೋಲೀಸರ ನೆರವು ಪಡೆದು ಹೆಸರು ಕೆಡಿಸಿಕೊಂಡರು. ಅರಸೀಕೆರೆಯ ಗಿರಿಜಮ್ಮ ಎಂಬುವರಿಗೆ ಸೇರಿದ್ದ ಆ ಜಾಗದ ವ್ಯವಹಾರದಲ್ಲಿ ಕೈ ಹಾಕಿದ ಚಂದ್ರು ಈಗ ಅದನ್ನು 20 ಲಕ್ಷಕ್ಕೆ ಬಲವಂತವಾಗಿ ಸೇಲ್ ಮಾಡಿಸಿ ತಾವು ಹದಿನೈದು ಲಕ್ಷ ಇಟ್ಟುಕೊಂಡು ಅಸಲಿ ಮಾಲೀಕರಾದ ಗಿರಿಜಮ್ಮನವರಿಗೆ ಜುಜುಬಿ ಐದು ಲಕ್ಷ ಕೊಟ್ಟು ಕಳಿಸಿದ್ದಾರೆ. ರೈತ ಸಂಘಟನೆಯ ಅಧ್ಯಕ್ಷರಾಗಿಯೇ, ಆ ಕೆಪಾಸಿಟಿಯಲ್ಲೇ ಚಂದ್ರು ಈ ಅಕ್ರಮ ಡೀಲ್ ನಡೆಸಿದ್ದರು.



ನಂಜುಂಡಸ್ವಾಮಿ

ಕಳೆದ ತಿಂಗಳು ರಾಜ್ಯಸಭೆ ಚುನಾವಣೆಗಳು ನಡೆದಾಗ ಚಂದ್ರು ಯು.ಆರ್. ಅನಂತಮೂರ್ತಿಯವರನ್ನು ಬೆಂಬಲಿಸಿ ಹೇಳಿಕೆ ನೀಡಿದ್ದರು. ಆದರೆ ಈ ವಿಚಾರ ರಾಜ್ಯ ಸಮಿತಿಗೆ ಗೊತ್ತಿರಲಿಲ್ಲ. ಚಂದ್ರು ಬೇರೆ ಪದಾಧಿಕಾರಿಗಳ ಒಪ್ಪಿಗೆಯನ್ನು ಕೇಳಿರಲಿಲ್ಲವೆಂಬ ಅಸಮಾಧಾನ ಎಲ್ಲರಲ್ಲೂ ಇತ್ತು. ಈ ಮಧ್ಯೆ ಕೋ-ಜಾ ಸರ್ಕಾರದ ರೂವಾರಿ ಎಚ್.ಡಿ. ದೇವೇಗೌಡರನ್ನು ಕೋಡಿಹಳ್ಳಿ ಚಂದ್ರು ಭೇಟಿಯಾಗಿ ಬಂದದ್ದು ಸಂಘಟನೆಯ ಪದಾಧಿಕಾರಿಗಳಿಗೆ ಇರುಸುಮುರಿಸು ಉಂಟು ಮಾಡಿತ್ತು.


ಈ ಎಲ್ಲಾ ಘಟನೆಗಳಿಂದ ಬೇಸತ್ತಿದ್ದ ಸಂಘಟನೆಯ ಪದಾಧಿಕಾರಿಗಳಲ್ಲೊಬ್ಬರಾದ ಚುಕ್ಕಿ ನಂಜುಂಡಸ್ವಾಮಿ ಇತ್ತೀಚೆಗೆ ರಾಜೀನಾಮೆ ನೀಡಿದ್ದರು.

ರೈತ ಸಂಘದೊಳಗಿನ ಮುಸುಕಿನ ಗುದ್ದಾಟ ಹೊರಬೀಳಲು ಈಗ ಇದೇ ಕಾರಣವಾಗಿ ಹೋಗಿದೆ.


ಮೊನ್ನೆ ಮೇ 15ರಂದು ದಾವಣಗೆರೆಯಲ್ಲಿ ರಾಜ್ಯ ಸಮಿತಿ ಸಭೆ ನಡೆದಾಗ ಎಲ್ಲಾ ಸದಸ್ಯರು ಚುಕ್ಕಿ ರಾಜೀನಾಮೆ ವಿಷಯ ಹಾಗೂ ಕೋಡಿಹಳ್ಳಿ ಚಂದ್ರಶೇಖರ್‌ರ ಭ್ರಷ್ಟಾಚಾರದ ಬಗ್ಗೆ ಚರ್ಚೆ ಶುರು ಮಾಡಿದ್ದಾರೆ. ಆಗ ಚಂದ್ರು, 'ಆ ಚಿಕ್ಕ ಹುಡುಗಿಗೆ ನಾನು ವಿವರಣೆ ಕೊಡಬೇಕಾ?' ಎಂದು ಉಡಾಫೆಯಿಂದ ಮಾತನಾಡಿ ಎಲ್ಲರಿಂದ ಛೀಮಾರಿ ಹಾಕಿಸಿಕೊಂಡಿದ್ದಾರೆ.



ಚುಕ್ಕಿ ನಂಜುಂಡಸ್ವಾಮಿ



ಕೋಡಿಹಳ್ಳಿ ಚಂದ್ರಶೇಖರ್



ವೆಂಕಟರೆಡ್ಡಿ

ಚಂದ್ರು ಪರವಾಗಿ ಕುತರ್ಕ ಮಾಡಿದ ಶಿವಮೊಗ್ಗ[...] ವಸಂತ ಎಂಬ ಬಾಲಕನನ್ನು ಉಳಿದವರು ಗದರಿ[...] ಕೂರಿಸಿದ್ದಾರೆ.

ಇಲ್ಲಿ ಚುಕ್ಕಿ ಎಷ್ಟು ಚಿಕ್ಕವರು, ಚಂದ್ರು ಎಷ[...] ಹಿರಿಯ ಎಂಬುದಕ್ಕಿಂತಾ ಚಂದ್ರು ಮೇಲಿರು[...] ಆರೋಪಗಳೇನು, ಮತ್ತದಕ್ಕೆ ಚಂದ್ರು ನೀಡು[...] ವಿವರಣೆಗಳೇನು ಎಂಬುದಷ್ಟೇ ಮುಖ್ಯವಾ[...] ಬೇಕಿತ್ತು.

ಚಾಮರಸ ಪಾಟೀಲ್ ಮತ್ತಿತರರ ನಿಲುವೂ ಅದೇ[...] ಆಗಿದೆ.

ಆದರೆ ಕೋಡಿಹಳ್ಳಿ ಚಂದ್ರಶೇಖರ್ ಇದ್ಯಾವುದನ್ನೂ[...] ಕೇರ್ ಮಾಡದೆ ಪುಟ್ಟಣ್ಣಯ್ಯ ಬಣದೊಂದಿಗೆ ವಿಲೀ[...] ಎಂಬ ಒನ್ ಪಾಯಿಂಟ್ ಹಾಗೂ ಒನ್‌ಮ್ಯಾ[...] ಅಜೆಂಡಾ ಮಾತ್ರ ಇಟ್ಟುಕೊಂಡು ಓಡಾಡುತ್ತಿದ್ದಾ[...] ರೈತ ಬಣಗಳ ವಿಲೀನ ನಿಜಕ್ಕೂ ಆಗೇಹೋದರೆ ಆ[...] ಪುಟ್ಟಣ್ಣಯ್ಯನವರನ್ನು ಏಕೀಕೃತ ರೈತ ಸಂಘ[...] ಅಧ್ಯಕ್ಷರನ್ನಾಗಿ ಸ್ಥಾಪಿಸಿ, ತಾನು ಸರ್ವೋದಯ ಕರ್ನಾಟ[...] ಎಂಬ ನಾನ್‌ಸ್ಟಾರ್ಟರ್ ಪಕ್ಷಕ್ಕೆ ಹಾರಿಕೊಳ್ಳುವ ಉದ್ದೇ[...] ಚಂದ್ರಶೇಖರ್‌ಗೆ ಇದೆಯೆಂಬ ಪುಕಾರುಗಳಿವೆ. ಬಹುಶ[...] ಸರ್ವೋದಯ ಕರ್ನಾಟಕ ಎಂಬ ಪಿಂಜಾರಾಪೋಲ[...] ಪಾರ್ಟಿಯ ಸಂವಿಧಾನದಲ್ಲಿ ಅಕ್ರಮ ರಿಯಲ್ ಎಸ್ಟೇಟ[...] ಡೀಲ್‌ಗಳಿಗೆ ನಿಷೇಧವಿರದಿರುವುದು ಚಂದ್ರಶೇಖರ್[...] ಹಿತಕರವಾಗಿ ಕಾಣಿಸುತ್ತಿರಬಹುದೇನೋ.

ಮೇ 15 ರ ದಾವಣಗೆರೆ ರಾಜ್ಯ ಸಮಿ[...] ಅಪೂರ್ಣವಾಗಿದ್ದರಿಂದ ಇದೇ ಮೇ 26 ರಂದು[...] ಬೆಂಗಳೂರಿನಲ್ಲಿ ರೈತ ಸಂಘದ ರಾಜ್ಯ ಸಮಿತಿ ಸ[...] ಮತ್ತೆ ನಡೆಯುವ ಸಾಧ್ಯತೆಗಳಿವೆ.

ರೈತ ಸಂಘದೊಳಗೆ ಲೆಕ್ಕ ಕೇಳಬೇಡಿ, ಏನನ್ನೂ[...] ಪ್ರಶ್ನಿಸಬೇಡಿ ಎಂಬ ಸರ್ವಾಧಿಕಾರಿ ಧೋರಣೆಯ[...] ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಅಸಮಾಧಾ[...] ತೀವ್ರಗೊಂಡಂತೆ ಕಾಣುತ್ತಿದ್ದು ಈ ಗಲಾಟೆಯಲ್ಲಿ ರೈತ[...] ಕಷ್ಟಗಳನ್ನು ಕೇಳುವವರಿಲ್ಲದಂತಾಗಿರುವುದೇ ವಿಷಾದಕ[...] ವಾಗಿದೆ.

-ಈ[...]

"ನಾವು ಕುಡಿತಿವಿ, ಯಾಕ್ ಗೊತ್ತನು?"

"ಕುಡಿತದ ಕೆಡುಕುಗಳು" ಕುರಿತು ಸಚಿವ ಆಲ್ಕೋಡ್ ಹನುಮಂತಪ್ಪ ಹೋದ ಹೋದಲ್ಲೆಲ್ಲಾ ಲೆಕ್ಚರ್ ಕೊಡುತ್ತಿದ್ದಾರೆ. ದಲಿತರು ಹಾಳಾಗುತ್ತಿರುವುದೇಕೆ? ಎಂಬ ಪ್ರಶ್ನೆ ಇಟ್ಟುಕೊಂಡು ಧಾರವಾಡದಲ್ಲಿ ಸಂಶೋಧನೆ ಮಾಡಿದ ಈ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ, ದೇವದುರ್ಗದ ಶಾಸಕ ಆಲ್ಕೋಡ್ ಹನುಮಂತಪ್ಪ ಕೊನೆಗೂ ಅದರಲ್ಲಿ ಯಶಸ್ವಿಯಾಗಿ ಡಾಕ್ಟರ್ ಇನ್ 'ಪೀಲೆ' ಪಡೆದಿದ್ದಾರೆ. ದಲಿತರು ಹಾಳಾಗುತ್ತಿರುವುದಕ್ಕೆ ಕುಡಿತವೇ ಮೂಲ ಕಾರಣ, ಏಕೈಕ ರಿಜನ್ನು ಎಂಬುದು ಹನುಮ್ಸ್ ಎಸ್ಸೆಯ ಸಾರಾಂಶ....



ಸೋಮವಾರ 15 ನೇ ತಾರೀಖು ಗುಲ್ಬರ್ಗಾ, ಬೀದರ್ ಪ್ರವಾಸದಲ್ಲಿದ್ದ ಈ ಕ್ರೀಡಾ ಸಚಿವ ಆಲ್ಕೋಹಾಲಿಕ್ ಭಾಷಣವೊಂದನ್ನು ಹೆಟ್ಟಿದರು. ಹೊಟ್ಟೆ ದುಮ್ಮ ಸ್ವಾಮಿಗಳ ಸ್ಟೈಲಲ್ಲಿ, ಡಾಕ್ಟರುಗಳ ಸ್ಟೈಲಲ್ಲಿ ಮಾತಾಡಿದ ಆಲ್ಕೋಡ್ "ಕುಡಿಯೋದು ಒಳ್ಳೆದಲ್ರಪ್ಪಾ... ಅದನ್ನ ಬಿಟ್ ಬಿಡ್ರಿ.... ಕುಡಿತದಿಂದಾನ ದಲಿತ್ರು ಹಾಳಾಗಾಕ ಹತ್ಯಾರ...." ಎಂದು ಪ್ರವಚನ ಆರಂಭಿಸಿಬಿಟ್ಟರು. ಸ್ವಲ್ಪ ಎಣ್ಣೆ ಹಾಕಿಕೊಂಡೇ ಬಂದಂತಿದ್ದ ಆಲ್ಕೋಡ್‌ಗೆ ಬಿಸಿಲಿನ ತಾಪದಿಂದ ಅಳ್ಳೆತ್ತಿಗೆ ನಶೆ ಏರಿರಬೇಕು. ತನ್ನ ಕುಡಿತದ ಬಗ್ಗೆ ಸ್ವವಿಮರ್ಶೆ ಆರಂಭಿಸಿದ ಆಲ್ಕೋಡ್ "ಸಾವಿರ ಸಾವಿರ ರೂಪಾಯಿ ಕೊಟ್ಟು ನಾವ್ ಡ್ರಿಂಕ್ಸ್ ಮಾಡ್ತೀವಿ. ನಮಗ ಎಲ್ಲೆಲ್ಲಿಂದಲೋ ರೊಕ್ಕ ಬರ್‍ತದ.... ಅದಕ್ಕ ನಾವು ಕುಡಿತಿವಿ. ನಿಮಗ ಹಂಗ ರೊಕ್ಕ ಬರಾಂಗಿಲ್ಲ, ಅದಕ್ಕ ಕುಡಿಬ್ಯಾಡ್ರಿ..." ಎಂದು ಹೇಳುವ ಮೂಲಕ 'ಎಲ್ಲೆಲ್ಲಿಂದಲೋ' ಎನ್ನುವುದಕ್ಕೆ ಸಾವಿರಾರ್ಥ ಹೊಮ್ಮಿಸಿಬಿಟ್ಟರು.

'ಸತ್ಯ ಎಲ್ಲಿದೆ ಕೈ ಎತ್ತಿ ಹೇಳು' ಎಂಬ ನಾಟಕ ನೋಡಿ ಬಂದಿದ್ದ ಈ ಸತ್ಯಹರಿಶ್ಚಂದ್ರ ಟೈಟಾದವರಂತೆ 'ಲೂಸ್ ಟಾಕ್' ಮಾಡುವುದರಲ್ಲಿ ತನ್ನದು ಎತ್ತಿದ ಕೈ ಎಂದು ಸಾಬೀತು ಮಾಡಿದ್ದಾನೆ. ಕ್ರೀಡಾ ಸಚಿವನ ಈ 'Sportive' ಉಪದೇಶ ಕೇಳಿದ ಕುಡುಕರು "ಹಲ್ಕೋಡ್ ಅನುಮಂತಪ್ಪನಿಗೆ ಧಿಕ್ಕಾರ" ಎಂದು ಕೂಗಬೇಕೆ?

'ಆಲ್ಕೋ'ಡ್ ಹನುಮಂತಪ್ಪನೀಗ 'ಎಲ್ಲೆಲ್ಲಿಂದಲೋ' ಬರುವ ರೊಕ್ಕಕ್ಕೆ ಕಾಯುತ್ತಿದ್ದಾನೆ.

****

ತಾನೇನು ಕಮ್ಮಿ ಎಂದುಕೊಂಡ ಕೃಷಿ ಸಚಿವ ಬಂಡೆಪ್ಪ ಕಾಶಂಪೂರ ವೈದ್ಯಕೀಯ ಇಲಾಖೆಯ ಮುಖ್ಯಸ್ಥರಂತೆ ಮಾತಾಡುತ್ತಾ "ಬಿ.ಪಿ., ಶುಗರು ಬಂದ್ರ ದವಾಖಾನಿಗೆ ಯಾಕ್ ಹೊಗ್ತೀರಿ? ನಾ ಒಂದು ಮಾತ್ ಹೇಳ್ತೀನಿ... ಹಂಗ ಮಾಡ್ರಿ... ದಿನಾ ನಾಕು ಬಸವಣ್ಣನ ವಚನ ಓದಿ, ಹೇಳಿಬಿಡ್ರಿ... ಬಿ.ಪಿ., ಶುಗರು ಎಲ್ಲಾ ಓಡಿ ಹೋಕ್ಕಾವು..." ಎಂದು ಉಚಿತ ಸಲಹೆ ನೀಡುತ್ತಾ ಆರೋಗ್ಯ ಸುಧಾರಕರಾಗಿದ್ದಾರೆ. ರಾಜ್ಯದ ಕೃಷಿ ಕ್ಷೇತ್ರ ಅನಾರೋಗ್ಯದಿಂದ ಬಳಲುತ್ತಿರುವಾಗ BSc (Agri) ಓದಿರುವ ಈ ಕೃಷಿ ಸಚಿವ ಬಿ.ಪಿ., ಶುಗರು ಏರಿಸಿಕೊಂಡು ಏನೇನೋ ಮಾತಾಡುತ್ತಿದ್ದಾರೆ. ಬೇಕಾದರೆ ಈತನ ಹೆಸರನ್ನು ಕಂಡೆಪ್ಪ ಬಾಶಂಪೂರ ಎಂದು ಬದಲಾಯಿಸಿಕೊಳ್ಳಿ.....

-ಮಲ್ಲಿ

ಕುಮಾರ್ ಟು 'ಬಂ'

"ಓ ಡ್ಯಾಡಿ, ಐ ಲವ್ ಯು....."

"ಅಪ್ಪ ಅಪ್ಪ..... ನಂಗೆ ನೀನು ಬೇಕಪ್ಪ..." ಇದು ಕುಮಾರ್ ಬಂಗಾರಪ್ಪನ ಹೊಸ ಹಾಡು... ಹೋದ ಹೋದಲ್ಲಿ ಬಂಗಾರಪ್ಪನ ಗುಣಗಾನ ಮಾಡುವುದೇ ಮರಿ 'ಬಂ' ಕೆಲಸವಾಗಿಬಿಟ್ಟಿದೆ. ಇನ್ನುಳಿದಿರುವುದೊಂದೇ: ದೇವೇಗೌಡ, ಕುಮಾರಸ್ವಾಮಿಗಳಂತೆ ಒಬ್ಬರನ್ನೊಬ್ಬರು ಹೊಗಳುತ್ತಾ ಅತ್ತು ಬಿಡುವುದು!



ಕಳೆದ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳ ವೇಳೆ ಅಪ್ಪ, ಮಗ ಇಬ್ಬರೂ ಸೇರಿ ಬಿಜೆಪಿಗೆ ಹಾರಿ, ನಂತರ 'ಮರಿ-ಬಂ'ಗೆ ಅದೇನೋ ಜ್ಞಾನೋದಯವಾಗಿ ಮತ್ತೆ ಕಾಂಗ್ರೆಗೆ ಬಂದಿತ್ತು. ಸೊರಬದಲ್ಲಿ ಮಧು ಬಂಗಾರಪ್ಪನನ್ನು ಕುಮಾರ್ ಬಂಗಾರಪ್ಪ ವಿರುದ್ಧ ನಿಲ್ಲಿಸಿ 'ಬಂ' ವೀರಾವೇಶದಿಂದ ಹೋರಾಡಿ 'ಮರಿ ಬಂ' ಎದುರು ಲಗಾಟ ಹೊಡೆದಿದ್ದೂ ಆಯ್ತು.

ಈಗ ಮುಲಾಯಂ ಸಿಂಗ್‌ನ ಎಸ್.ಪಿ. ಸೈಕಲ್ಲು ತುಳಿದು ತುಳಿದು ಹೈರಾಣಾಗಿರುವ 'ಬಂ'ಗೂ ಮಗನ ಸಾಂಗತ್ಯ ಬೇಕಿದೆ. ಹಾಗೆಯೇ ಅಪ್ಪ-ಮಗನ ಜಗಳದಲ್ಲಿ ಸೊರಬದಲ್ಲಿ ಚೆಡ್ಡಿಗಳು ಗಟ್ಟಿಗೊಳ್ಳುತ್ತಿರುವುದು ಕುಮಾರನಿಗೆ ತಲೆನೋವು ತಂದಿದೆ.

ಶಿವಮೊಗ್ಗದ ಗಡಿ ದಾಟಲೂ ತಿಣುಕಾಡುತ್ತಿರುವ ಸೈಕಲ್ಲಿಗೆ ಮಗನ 'ಕೈ' ನೆರವೂ ಬೇಕಿದೆಯೇನೋ?

'ಬಂ' ಇಲ್ಲದ ಕಾಂಗ್ರೆಸನಲ್ಲೂ 'ಮರಿ ಬಂ'ಗೆ ಪ್ರಾಮು[...] ಖ್ಯತೆ ಸಿಗದಾಗಿದೆ. ಈಗ ಅಪ್ಪ-ಮಗನ ಮಿಲನ[...] ಪೀಠಿಕೆ ಹಾಕುವ ಕೆಲಸ ಶುರುವಾಗಿದೆ. ಅದಕ್ಕೆ ಕುಮಾ[...] ಬಂಗಾರಪ್ಪನೇ ಬಹಿರಂಗವಾಗಿ "ಓ ಡ್ಯಾಡಿ... ಐ ಲವ್ ಯೂ" ಎಂದು ಗೀತ-ಸಂಗೀತದಲ್ಲಿ ಸಿಗ್ನಲ್[...] ಕೊಡುತ್ತಿದ್ದಾನೆ.

ದೇವೇಗೌಡ-ಕುಮಾರಸ್ವಾಮಿಗಳ ಡ್ರಾಮಾ[...] ಮೆಲೋಡ್ರಾಮಾಗಳಿಂದ ಪ್ರಭಾವಿತರಾದಂತಿರುವ 'ಬಂ[...] 'ಮರಿ ಬಂ'ಗಳು ಮತ್ತೆ ಅಪ್ಪಿಕೊಂಡು ಕಾಗೋ[...] ತಿಮ್ಮಪ್ಪನನ್ನು ತುಳಿಯುವ ಹುನ್ನಾರ ಮಾಡಲಿ[...] "ನಿನ್ನಂಥ ಅಪ್ಪ ಇಲ್ಲ....." ಹಾಡಂತೂ ಜೋರಾಗಿಯೇ ಮೊಳಗುತ್ತಿದೆ.

ಏನು ಮಾಡಿದರೇನು ಶಿವಮೊಗ್ಗಕ್ಕೆ ಈ ಶನಿಗಳಿಂ[...] ಏನು ಲಾಭವಿದೆ?

ಫ್ಯಾಸಿಸ್ಟರಿಂದ ಕರ್ನಾಟಕವನ್ನು ಉಳಿಸಿ

KFDಯ ಐತಿಹಾಸಿಕ ಸಮಾವೇಶ

ಮೇ 19ರಂದು ಬೆಂಗಳೂರಿನಲ್ಲಿ KFD(ಕರ್ನಾಟಕ ಫೋರಂ ಫಾರ್ ಡಿಗ್ನಿಟಿ) ಸಂಘಟನೆಯು ಆಯೋಜಿಸಿದ್ದ ಸಮಾವೇಶವು ಹಲವು ವಿಧದಲ್ಲಿ ಐತಿಹಾಸಿಕವಾದುದಾಗಿತ್ತು.

ಐತಿಹಾಸಿಕ, ಕ್ರಾಂತಿಕಾರಿ ಇತ್ಯಾದಿ ಪದಗಳನ್ನು ಬಹಳ ಅಗ್ಗದಲ್ಲಿ ಬಳಸಿ, ಬಳಸಿ ಈಗ ಅದಕ್ಕೊಂದು ವಿಶೇಷ ಅರ್ಥ ಬಾರದೆ ಹೋಗಿಬಿಟ್ಟಿದೆ. ಆದರೆ ಕೆಎಫ್‌ಡಿಯ ಸಮಾವೇಶವು ಕರ್ನಾಟಕದ ಸಮಕಾಲೀನ ಸಂದರ್ಭದಲ್ಲಿ ಒಂದು ಮಹತ್ತರ ಸಂದೇಶವನ್ನು ನೀಡಿರುವುದನ್ನು ಅದರಲ್ಲಿ ಭಾಗವಹಿಸಿದ ಯಾರೂ ಅಲ್ಲಗಳೆಯಲಾರರು.



ಬೆಂಗಳೂರಿನಲ್ಲಿ ನಡೆದ KFD ಯ ಬೃಹತ್ ಸಮಾವೇಶ

'ಫ್ಯಾಸಿಸ್ಟರಿಂದ ಕರ್ನಾಟಕವನ್ನು ಉಳಿಸೋಣ' ಎಂಬ ಕೇಂದ್ರ ಘೋಷಣೆಯನ್ನು ಹೊಂದಿದ್ದ ಈ ಕಾರ್ಯಕ್ರಮವು ಮುಖ್ಯವಾಗಿ ಕರಾವಳಿ ಜಿಲ್ಲೆಗಳಲ್ಲಿ ಅತ್ಯಂತ ಆತಂಕಕಾರಿಯಾಗಿ ಹೆಚ್ಚುತ್ತಿರುವ ಸಂಘಪರಿವಾರದ ಫ್ಯಾಸಿಸ್ಟರನ್ನು ಮತ್ತು ಸರ್ಕಾರದ ನಿಷ್ಕ್ರಿಯತೆಯನ್ನು ಗುರಿಯಾಗಿಸಿಕೊಂಡಿತ್ತು. 2005ರ ಮಾರ್ಚ್ 16ರಂದು ಆದಿ ಉಡುಪಿಯ ಹೊರವಲಯದ ನಡುರಸ್ತೆಯಲ್ಲಿ ದನದ ವ್ಯಾಪಾರಿಗಳಾದ ತಂದೆ-ಮಕ್ಕಳಿಬ್ಬರನ್ನು ಸಂಪೂರ್ಣ ನಗ್ನಗೊಳಿಸಿ ಮಾರಣಾಂತಿಕವಾಗಿ ಥಳಿಸಿದ್ದ ಸಂಘಪರಿವಾರದ ಪುಂಡು ಪಡೆಗಳ ಕೃತ್ಯ ಸ್ವಲ್ಪ ಮಟ್ಟಗಿನ

ಡಾ. ವಾಸು

ಪ್ರಚಾರವನ್ನು ಪಡೆದುಕೊಂಡಿತ್ತು. ಅದು ಕರ್ನಾಟಕದ ಇತರೆಡೆಗಳಲ್ಲಿ ಕರಾವಳಿಯ ಪರಿಸ್ಥಿತಿಯ ಬಗ್ಗೆ ಸಣ್ಣ ಆತಂಕ ಉಂಟುಮಾಡಿತ್ತು. ಆದರೆ ಇಂದು ಅವ್ಯಾಹತವಾಗಿ ಪ್ರತಿನಿತ್ಯ ಅಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಭೀಕರ ದಾಳಿಗಳು ಮತ್ತು ಅದರ ಕ್ರೌರ್ಯ ಆದಿ ಉಡುಪಿಯ ಘಟನೆಯನ್ನೂ ಮೀರಿಸುವಂಥಾದ್ದಾಗಿದೆ.

ಟಾಟಾ ಸುಮೋ(!)ದಲ್ಲಿ ಮೂರು ದನಗಳನ್ನು ಸಾಗಿಸುತ್ತಿದ್ದರೆಂದು ಮೂವರು ಮುಸ್ಲಿಂರನ್ನು ಸಜೀವ ದಹನ ಮಾಡಲು ನಡೆಸಿದ ಪ್ರಯತ್ನವೊಂದು ಇತ್ತೀಚಿಗೆ ನಡೆಯಿತು. ಕೆಎಫ್‌ಡಿ ಸಂಘಟನೆಯು ಆಧಾರ ಸಹಿತ ಮುಂದಿಡುತ್ತಿರುವ ಇಂತಹ ಪ್ರಕರಣಗಳು ಕನಿಷ್ಠ 65! ಆದರೆ ಯಾವುದೇ ಪ್ರಕರಣದಲ್ಲೂ ಅಸಲೀ ತಪ್ಪಿತಸ್ಥರ ಮೇಲೆ ಕಠಿಣ ಕ್ರಮಕ್ಕೆ ಸರ್ಕಾರ ಮುಂದಾಗಿಲ್ಲ. ಪೋಲೀಸರು ದೂರು ನೀಡಲು ಬಂದವರ ಮೇಲೇ ತಪ್ಪು ಹೊರೆಸುವ ಸಂದರ್ಭಗಳು ಹಲವಿದ್ದರೆ, ಸ್ವತಃ ಪೋಲೀಸರು ದನ ಸಾಗಿಸುತ್ತಿದ್ದ ಮುಸ್ಲಿಂ ಯುವಕರನ್ನು ಕೊಂದು ಹಾಕಿದಂತಹ ಘಟನೆಗಳೂ ಇಲ್ಲಿ ನಡೆದಿವೆ. ಇವು ಕಳೆದ ಒಂದೂವರೆ ಎರಡು ವರ್ಷಗಳಲ್ಲಿ ಕರಾವಳಿಯಲ್ಲಿ ನಡೆದ ಘಟನಾವಳಿಗಳ ಸ್ಯಾಂಪಲ್.

ಹೀಗಿರುವಾಗ ಅಲ್ಲಿನ ಪರಿಸ್ಥಿತಿಯನ್ನು 'ಗುಜರಾತ್ ಮಾಡಲು' ಕೊರತೆಯಿದ್ದದ್ದು ಒಬ್ಬ ನರೇಂದ್ರ ಮೋದಿಯಷ್ಟೇ. ಕುಮಾರಸ್ವಾಮಿ-ದೇವೇಗೌಡ- ಯಡಿಯೂರಪ್ಪ ನಾಟಕ ಮಂಡಳಿಯಿಂದ ಈಗ ಅದೂ ಪೂರೈಕೆಯಾಗಿದೆ. ಕುಮಾರಸ್ವಾಮಿಯವರ 'ಸೆಕ್ಯುಲರ್' ಸಚಿವ ಸಂಪುಟದಲ್ಲಿ ಮಂತ್ರಿಯಾಗಿ ದ.ಕ. ಜಿಲ್ಲೆಯ ಉಸ್ತುವಾರಿ ಹೊತ್ತಿರುವ ನಾಗರಾಜ ಶೆಟ್ಟಿಯೆಂಬ ಮಹಾಶಯ ಚೆಡ್ಡಿ ಹಟು ಮಂತ್ರಿಯಾದ ಮರುದಿನವೇ ಪತ್ರಿಕಾಗೋಷ್ಠಿಯಲ್ಲಿ 'ನರೇಂದ್ರ ಮೋದಿ ನನ್ನ ಆದರ್ಶ' ಎಂದು ಘೋಷಿಸಿಬಿಟ್ಟ.

ಕರಾವಳಿ ಜಿಲ್ಲೆಗಳ ಮುಸ್ಲಿಂರ ನಡುವೆ ಅಪಾರ ಪ್ರಭಾವವಿರುವ ಕೆಎಫ್‌ಡಿಯ ಸಮಾವೇಶವು ಈ ಹಿನ್ನೆಲೆಯಲ್ಲಿ ನಡೆಯಿತು. ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಂರು ಒಂದೆಡೆ ಸೇರಿದರೇನೇ ಅನುಮಾನದಿಂದ ನೋಡಲಾಗುವುದರಿಂದ ಈ ಸಮಾವೇಶದ ಬಗ್ಗೆಯೂ ಕೆಲವರಲ್ಲಿ ಅಂತಹ ಆತಂಕ ಮೂಡಿತ್ತು. ಇದು ದೊಡ್ಡ ಗಲಭೆಗೆ ಪ್ರಚೋದಿಸಬಹುದೆಂದೂ, ಪಾಕಿಸ್ತಾನದ ಪರ ಘೋಷಣೆಗಳನ್ನು ಕೂಗುತ್ತಾರೆಂದೂ, ಮೆರವಣಿಗೆಯಲ್ಲಿನ ಅಶಿಸ್ತು ಸುತ್ತಮುತ್ತಲಿನ ಆಸ್ತಿಪಾಸ್ತಿಗೆ ಜಖಂ ತರಬಹುದೆಂದೂ ಕೆಲವರು ಹೆದರಿದ್ದರು.

ಆದರೆ ಇಪ್ಪತ್ತು ಸಾವಿರ ಜನರು ಭಾಗವಹಿಸಿದ್ದ ಈ ಸಮಾವೇಶದಲ್ಲಿ ಶಿಸ್ತು, ಸಂಯಮಕ್ಕೆ ಸಂಬಂಧಿಸಿದಂತೆ ಒಂದು ಅತಿ ಸಣ್ಣ ಲೋಪವೂ ನಡೆಯಲಿಲ್ಲ; ಕೆಎಫ್‌ಡಿಯ ತಯಾರಿ ಹೇಗಿತ್ತೆಂದರೆ ಅದು ನಡೆಯಲು ಸಾಧ್ಯವೂ ಇರಲಿಲ್ಲ. ಹಿಂದಿನ ದಿನವೇ ಬಂದಿದ್ದ 500 ಜನ ಯುವಕರು ಅತ್ಯಂತ ಶಿಸ್ತುಬದ್ಧವಾಗಿ ಹಜ್ ಮೈದಾನದಿಂದ ಹೊರಟ ಮೆರವಣಿಗೆಯನ್ನು ಮತ್ತು ಶಿವಾಜಿನಗರ ಮೈದಾನದಲ್ಲಿ ಸಮಾವೇಶವನ್ನು ನಡೆಸಿದರು. ಮೆರವಣಿಗೆಯುದ್ದಕ್ಕೂ ಮೊಳಗಿದ ಪ್ರಮುಖ ಘೋಷಣೆಗಳು ಈ ಕಾರ್ಯಕ್ರಮದ



ಮುಖ್ಯಮಂತ್ರಿಗಳೊಂದಿಗೆ ಕೆ.ಎಫ್.ಡಿ. ನಾಯಕರು



ಸಮಾವೇಶದಲ್ಲಿ ಪ್ರದರ್ಶನವಾದ ಭಿತ್ತಿಪತ್ರ

ಘೋಷಿತ ಉದ್ದೇಶವನ್ನು ಸ್ಪಷ್ಟಪಡಿಸಿದವು. 'ಹಿಂದೂ-ಮುಸ್ಲಿಂರು ಶತ್ರುಗಳಲ್ಲ- ಕೋಮುವಾದಿಗಳು ಬಂಧುಗಳಲ್ಲ', 'ಕರ್ನಾಟಕವು ಗುಜರಾತಲ್ಲ-ಬಾಬಾ ಬುಡನ್ ಗಿರಿ ಅಯೋಧ್ಯೆಯಲ್ಲ','ದಲಿತ ವಿರೋಧಿ- ಮೀಸಲಾತಿ-ವಿರೋಧಿ ಸಂಘಪರಿವಾರಕ್ಕೆ ಧಿಕ್ಕಾರ', 'ಹೆಜಮಾಡಿಯ ವನಿತಾಳನ್ನು ಕೊಂದ RSSಗೆ ಧಿಕ್ಕಾರ', 'ಸಂಘಪರಿವಾರಕ್ಕೆ ಧಿಕ್ಕಾರ', 'ನಾಗರಾಜಶೆಟ್ಟಿಯನ್ನು ಸಂಪುಟದಿಂದ ವಜಾ ಮಾಡಿ....'.

ಈ ಕಾರ್ಯಕ್ರಮಕ್ಕೆ ಮುಸ್ಲಿಂ ಸಮುದಾಯದಲ್ಲಿ ದೊರೆಯುತ್ತಿದ್ದ ಜನ ಬೆಂಬಲವನ್ನು ನೋಡಿ ಹೆದರಿದ ಸರ್ಕಾರ ಒಂದು ವಾರದಷ್ಟು ಮುಂಚೆಯಿಂದ ಇದನ್ನು ತಡೆಯಲು ಎಲ್ಲಾ ಪ್ರಯತ್ನ ನಡೆಸಿತು. ಮೂರು ದಿನಕ್ಕೆ ಮುಂಚೆ ಸ್ವತಃ ಮುಖ್ಯಮಂತ್ರಿಯವರ ಕಚೇರಿಯಿಂದ ಮಾತುಕತೆಗೆ ಆಹ್ವಾನ ಬಂದಿತು. ಪೋಲೀಸ್ ಇಲಾಖೆಯು ಕಾರ್ಯಕ್ರಮ ಬೇಡ, ಮೆರವಣಿಗೆ ಬೇಡ ಇತ್ಯಾದಿ ರಾಜೀ ಸೂತ್ರಗಳನ್ನು ಮುಂದಿಟ್ಟು ಅಡಚಣೆಯೊಡ್ಡಲು ಪ್ರಯತ್ನಿಸಿತು. ಕೆಎಫ್‌ಡಿಯ ನಾಯಕರು ಸಮಾವೇಶದ ನಂತರ ತಮ್ಮ ಹಕ್ಕೊತ್ತಾಯಗಳನ್ನು ಮಂಡಿಸಲು ಬರುತ್ತೇವೆ ಎಂಬ ಸ್ಪಷ್ಟ ಸಂದೇಶವನ್ನು ನೀಡಿದ ಮೇಲೆ ಸರ್ಕಾರ ಸುಮ್ಮನಾಗಬೇಕಾಯಿತು.

ಸಮಾವೇಶದಲ್ಲಿ ಕೆಎಫ್‌ಡಿಯ ರಾಜ್ಯಾಧ್ಯಕ್ಷ ಕೆ.ಎಂ.ಷರೀಫ್ ಮತ್ತು ಉಪಾಧ್ಯಕ್ಷ ಮೌಲಾನಾ ಖಲೀಮುಲ್ಲಾ ಅವರು ಕಾರ್ಯಕ್ರಮದ ಉದ್ದೇಶ ಹಾಗೂ ಒತ್ತಾಯಗಳನ್ನು ಸ್ಪಷ್ಟಮಾತುಗಳಲ್ಲಿ ಮಂಡಿಸಿದರು. ಕರ್ನಾಟಕದ ಸೌಹಾರ್ದ ಪರಂಪರೆಯನ್ನು ಎತ್ತಿಹಿಡಿಯುತ್ತಾ, ತಮಗೆ ಆದರ್ಶ ಮೋದಿಯಲ್ಲ, ಬುದ್ಧ-ಬಸವ-ಅಂಬೇಡ್ಕರ್-ಟಿಪ್ಪುಸುಲ್ತಾನ್ ತಮ್ಮ ಆದರ್ಶ ನಾಯಕರೆಂಬುದನ್ನು ಒತ್ತಿ ಹೇಳಿದರು. ಕರಾವಳಿ ಜಿಲ್ಲೆಯಲ್ಲಿನ ಪರಿಸ್ಥಿತಿಯನ್ನು ಎಳೆಎಳೆಯಾಗಿ ಬಿಡಿಸಿಟ್ಟು, ಸಂಘಪರಿವಾರಕ್ಕೆ ಎಚ್ಚರಿಕೆಯನ್ನು ರವಾನಿಸಿದರು. ಸರ್ಕಾರದ ನಿಷ್ಕ್ರಿಯತೆ ಮತ್ತು ಪೋಲೀಸ್ ಇಲಾಖೆಯ ಶಾಮೀಲುದಾರಿಕೆಯನ್ನು ಬಿಚ್ಚಿಟ್ಟು ತಮ್ಮ ಚಳವಳಿಯು ಕಾನೂನು ಬದ್ಧ ಹಾಗೂ ಸಂವಿಧಾನಿಕ ಚೌಕಟ್ಟಿನಲ್ಲಿರುವುದನ್ನು ಸ್ಪಷ್ಟಪಡಿಸಿದರು.

ಕೆಎಫ್‌ಡಿಯ ಪ್ರಧಾನ ಕಾರ್ಯದರ್ಶಿ ಯಾಸಿರ್ ಅವರು ಮಂಡಿಸಿದ ನಿರ್ಣಯಗಳೂ ಸಹ ಕರ್ನಾಟಕದ ಸೌಹಾರ್ದ ಪರಂಪರೆಯನ್ನು ಎತ್ತಿಹಿಡಿಯುವ, ಮೀಸಲಾತಿ ಪರ ನಿಲ್ಲುವ, ಕರಾವಳಿಯಲ್ಲಿ ಶಾಂತಿ ಸ್ಥಾಪಿಸ ಬಯಸುವ ಸುತ್ತ ಇದ್ದವು.

ಮುಸ್ಲಿಮರು ಮುಂದೆ ಬರುವುದಿಲ್ಲ, ಒಟ್ಟಾಗಿರುವುದಿಲ್ಲ ಎಂಬೆಲ್ಲಾ ಸ್ಟಿರಿಯೋ ಟೈಪ್ ಗ್ರಹಿಕೆಗಳನ್ನು ಆ ನಿರ್ಣಯಗಳು ಸುಳ್ಳಾಗಿಸಿದವು. OBC ಮೀಸಲಾತಿ ಬೆಂಬಲಿಸುವ, ದಲಿತ-ದಮನಿತರೊಂದಿಗೆ ಐಕ್ಯತೆಗಾಗಿ ಶ್ರಮಿಸುವ, ಬಾಬಾಬುಡನ್‌ಗಿರಿಯಲ್ಲಿ ಸೌಹಾರ್ದ ಸಂಸ್ಕೃತಿ ಕಾಪಾಡುವ, ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ನಾಡಪ್ರೇಮಿ ಟಿಪ್ಪು ಸುಲ್ತಾನ್ ಹೆಸರಿಡಲು ಒತ್ತಾಯಿಸಿದ ಕೆಲ ನಿರ್ಣಯಗಳು ಅದಕ್ಕೆ ಉದಾಹರಣೆ.

ಕಾರ್ಯಕ್ರಮದುದ್ದಕ್ಕೂ ನಾಡಿನ ದಮನಿತ ಜನತೆಯೊಂದಿಗೆ ಒಂದಾಗುವ ಅವರ ಆಶಯಗಳು ಭಿತ್ತಿಪತ್ರದಲ್ಲಿ, ಭಾಷಣದಲ್ಲಿ ಅಭಿವ್ಯಕ್ತಗೊಳ್ಳುತ್ತಿತ್ತು.

ಗಡ್ಡ ಬಿಟ್ಟ, ಟೊಪ್ಪಿ ತೊಟ್ಟ ಪ್ರತಿ ಸಾಬಿಯೂ ಉಗ್ರಗಾಮಿಯೆಂಬಂತೆ ಅನುಮಾನ ಸೃಷ್ಟಿಸಲಾಗುತ್ತಿರುವ ಸಂದರ್ಭದಲ್ಲಿ ಅತ್ಯಂತ ಬೃಹತ್ ಸಂಖ್ಯೆಯಲ್ಲಿ ನೆರೆದಿದ್ದ ಆ ಇಡೀ ಸಮಾವೇಶದ ಎಲ್ಲಾ ದಿಕ್ಕುಗಳಿಂದಲೂ ಸಹಜ ಸೌಹಾರ್ದ ಕರ್ನಾಟಕದ ಸಂದೇಶ ಕೇಳಿಬಂತು.

ಕಾರ್ಯಕ್ರಮ ಮುಗಿದ ಮೇಲೆ ಪ್ರೆಸ್‌ಕ್ಲಬ್‌ನ ಮುಂದೆ ಸಿಕ್ಕ ಸುದ್ದಿ ಸಂಸ್ಥೆಯೊಂದರ ಮುಖ್ಯಸ್ಥರ ಹತ್ತಿರ ಈ ಸಮಾವೇಶದ ಬಗ್ಗೆ ಹೇಳಿದಾಗ 'ಎಲ್ಲರೂ ಅಷ್ಟೇ. RSSನವರು ಇವರಿಗೆ ಕಲ್ಲು ಹೊಡೀತಾರೆ, ಇವರು ಬೀದಿಲಿ ಕಲ್ಲು ಹೊಡಿತಾರೆ' ಎಂದು ಒಂದೇ ಮಾತಿನಲ್ಲಿ ತೀರ್ಪು ಕೊಟ್ಟರು. ಒಂದು ರೀತಿಯಲ್ಲಿ ಇದು ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ಸಂಘಪರಿವಾರ ಮೂಡಿಸಿರುವ ಚಿತ್ರಣದ ಅಭಿವ್ಯಕ್ತಿ.

KFD ಯಂತ ಹೊಸ ಭರವಸೆ ಮೂಡಿಸಿರುವ ಸಂಘಟನೆಯ ಮುಂದೆ ಇವೆಲ್ಲವನ್ನೂ ಸುಳ್ಳು ಮಾಡುವ ಹಾಗೂ ಮಿತಿಯನ್ನು ಮೀರುವ ಸವಾಲಿದೆ. ಎಲ್ಲರೊಂದಿಗೆ ಬೆರೆಯುವ ಅವರ ಆಶಯ ಕೃತಿಯಲ್ಲಿ ಮೆಲ್ಲಗೆ ಕಾಣತೊಡಗಿದೆ. ಈ ಬೆಂಗಳೂರು ಸಮಾವೇಶಕ್ಕೆ ಮುನ್ನ ಉಡುಪಿ, ಮಂಗಳೂರು ಮತ್ತು ಬೆಂಗಳೂರುಗಳಲ್ಲಿ ನಡೆದ ಪೂರ್ವಭಾವಿ ಸಭೆಗಳಲ್ಲಿ ದಲಿತ ಸಂಘಟನೆಗಳೂ, ಇತರ ಪ್ರಗತಿಪರರೂ ಭಾಗವಹಿಸಿದ್ದರು. ಅದೇ ರೀತಿ ಬೆಂಗಳೂರಿನ ಮುಖ್ಯ ಸಮಾವೇಶದಲ್ಲೂ, ಅವರ ನಿರ್ಣಯವೊಂದು ಹೇಳಿದ ರೀತಿ "ಇದು ಕೇವಲ ಮುಸ್ಲಿಮರ ಸಮಾವೇಶವಲ್ಲ"ವೆಂಬುದು ಇನ್ನೂ ನಿಚ್ಚಳವಾಗಿ ಕಾಣುವಂತೆ ಇತರ ಪ್ರಗತಿಪರರಿಗೂ ಆಹ್ವಾನ ನೀಡಿದ್ದರೆ ಸಭೆ ಇನ್ನಷ್ಟು ಅರ್ಥಪೂರ್ಣವಾಗಿರುತ್ತಿತ್ತು.

ಕರ್ನಾಟಕದ ಕೋಮು ಸೌಹಾರ್ದ ವೇದಿಕೆಯ ಪ್ರತಿನಿಧಿಗಳು ಮತ್ತು ಇನ್ನಿತರ ಕೆಲ ಗೆಳೆಯರನ್ನು ಬಿಟ್ಟರೆ ಕರ್ನಾಟಕದ ಇನ್ನಾವ ಜನವರ್ಗವೂ ಅಲ್ಲಿ ಕಾಣಲಿಲ್ಲ. ಮೆರವಣಿಗೆಯ ಮಾರ್ಗದಲ್ಲಿ ಮುಕ್ಕಾಲು ಭಾಗದಲ್ಲಿ ಜನಸಂಚಾರವು ಸ್ವಲ್ಪವೂ ಇರದಂತೆ ಪೋಲೀಸರು ನೋಡಿಕೊಂಡಿದ್ದರೆ, ಇನ್ನುಳಿದ ಭಾಗ ಮುಸ್ಲಿಂ ಬಾಹುಳ್ಯವಿರುವ ಶಿವಾಜಿನಗರದ ಪ್ರದೇಶವಾಗಿತ್ತು.

ಇಡೀ ಕಾರ್ಯಕ್ರಮದಲ್ಲಿ ಒಬ್ಬೇ ಒಬ್ಬ ಮಹಿಳೆಯೂ ಇರದಿದ್ದುದು ಎದ್ದು ಕಾಣುತ್ತಿತ್ತು. ಇಂತಹ ಮಹತ್ವಪೂರ್ಣ ಕಾರ್ಯಕ್ರಮದಲ್ಲಿ ತಾವೇ ಮುಂದಾಗಿ ಭಾಗವಹಿಸಬೇಕಾದ್ದು ಕರ್ನಾಟಕದ ಪ್ರಗತಿಪರರೆಲ್ಲರ ಕರ್ತವ್ಯವಾಗಿದ್ದಂತೆಯೇ ಅವರೆಲ್ಲರಿಗೂ ಆಹ್ವಾನಿಸಬೇಕಿದ್ದುದು ಕೆಎಫ್‌ಡಿಯ ಕೆಲಸವೂ ಆಗಿತ್ತು.

ಮಾಧ್ಯಮಗಳು ಹೇಗೂ ಎಂದಿನಂತೆ ಇದನ್ನು ಯಾವುದೋ ದೇಶದಲ್ಲಿ ನಡೆದ ಇನ್ನೊಂದು ಮುಸ್ಲಿಂರ ಪ್ರತ್ಯೇಕ ಕಾರ್ಯಕ್ರಮವೆಂಬಂತೆ ಪರಿಗಣಿಸಿದವು. ಒಂದೆರಡು ಸಾವಿರ ಜನರಿದ್ದರೆ ಸಾಕು ಭಾರಿ ಬೃಹತ್ ಕಾರ್ಯಕ್ರಮ, 50 ಸಾವಿರ ಜನರು ಭಾಗವಹಿಸಿದ್ದರು ಎಂದೆಲ್ಲಾ ಹೇಳಿಕೊಳ್ಳುವ ಸಂಪ್ರದಾಯವಿರುವ ನಮ್ಮಲ್ಲಿ ಸರಿಯಾಗಿ ಇಪ್ಪತ್ತು ಸಾವಿರ ಜನರು ಭಾಗವಹಿಸಿದ್ದ ಈ ಸಮಾವೇಶದ ಬಗ್ಗೆ 'ಕನ್ನಡಪ್ರಭ'ವು 6 ಸಾವಿರ ಮಂದಿ ಯುವಕರು ಭಾಗವಹಿಸಿದ್ದರು ಎಂದು 'ನಿಖರವಾಗಿ' ಬರೆಯಿತು.

ಸಾರಾಂಶದಲ್ಲಿ ಈ ಕಾರ್ಯಕ್ರಮವು ಜನತಾದಳಕ್ಕೆ ಮತ್ತು ಸಂಘಪರಿವಾರದವರಿಗೆ ನಡುಕ ಮೂಡಿಸಿದರೆ, ಸೌಹಾರ್ದ ಕರ್ನಾಟಕ ಕಟ್ಟ ಬಯಸುವವರು ಇನ್ನೂ ಹೆಚ್ಚಿನ ಭರವಸೆಯಿಂದ ಜೊತೆಗೂಡಬಹುದಾದ ಒಂದು ದೊಡ್ಡ ಶಕ್ತಿಯಾಗಿ ಕೆಎಫ್‌ಡಿಯು ರೂಪುಗೊಂಡಿದೆ ಎಂಬುದು ಆಶಾದಾಯಕ ಸಂಗತಿಯಾಗಿದೆ. ■

ದುಃಖದ ದಿನಗಳು ಹಿಂದುಗಟ್ಟಿಕೊಂಡು ಬರುವ ಹಾಗೆ, ಸುಖದ ದಿನಗಳೂ ಸಾಲು ಸಾಲಾಗಿಯೇ ಬರುತ್ತವೆ -ಕೃಷ್ಣಮೂರ್ತಿ ಮರಾಠೆ

ಯಲ್ಲಾರ ಲೈಪಲ್ಲೂ ಇಂತ ಇನ್ಸಿಡೆಂಟಿರತವೆ ಕಣೊ

ಬಯಲು ಸೀಮೆಯ

ಕಟ್ಟೆ ಪುರಾಣ

ತೇವವಾದ ಮಳೆಯಾಗಿ ದನಗಳಿದ್ದವರು ಸಂಭ್ರಮದಿಂದ ಮುಂಗಾರುಕ್ಕೆ ಕೆರೆಯಲು ಓಡಾಡುತ್ತಿದ್ದರೆ, ದನಗಳಿಲ್ಲದ ಉಗ್ರಿ ಟ್ರಾಕ್ಟ್ರಿ ಮಡಗಿದ್ದವನನ್ನು ಹುಡುಕಿ ಕಡೆಗೆ ಅವರೂ ಸಿಗದೆ,

"ಗಿದ್ದನೊ, ವೋಟನೊ ಯಂತವ್ನೊ ಯರಡು ದನಿರ ಬೇಕು ಕಣಯ್ಯ ಮನೆತವ" ಎಂದುಕೊಂಡು ಬಂದ.

"ಈಗೊತ್ತಾಯ್ತ ನಿನಿಗೆ? ಹಾದರಗಿತ್ತಿ ಆಡದ ನೋಡಿ ಗರತಿ ಗಂಡನ ಬುಟ್ಟು ಅಂತ ಆ ವಾಟಸ್ನೆ ದನ ಮಾರಿದ ಅಂತ ನೀನು ಮಾರಿದೆ. ಈಗ ನೋಡು ಯಂಗಾಯ್ತು, ಅವುನೊಂದು ಕರ, ನೀನೊಂದು ಕರ ಕಟ್ಟಿದ್ರೆ ಈಗ ಅನುಸರಿಸಿಗಂಡು ವಲ ಉಳಬವುದಿತ್ತೊ?" ಎಂದು ಜುಮ್ಮಿ ಆಡಿಕೊಂಡಳು.

"ದನವ ಅಂಗೆ ಒಂದೊಂದು ಸಾಕಕ್ಕೆ ಬರದಿಲ್ಲ ಕಣೆ. ಸಾಕಿದ್ರೆ ಜೊತೆ ಸಾಕಬೇಕು ಇಲ್ದಿದ್ರೆ ಹುಮಡಿಕಂಡಿರಬೇಕು."

"ಒಂದೊಂದ್ನೆ ಸಾಕಿದರೇನಾದತೂ?"

"ಅವುನ್ತಯಿರದು ಯಡುಗೋಲಾಗಿ ನನ್ತ ಇರದು ಬಲಗೋಲಾದ್ರೆ ಏನಾಯ್ತದೇಳು?"

"ಏನಾದತೂ? ಅದು ಶರಾಪಿನಂಗಡಿ ಕಡಿಕ್ಕಳುದ್ರೆ ನಿಂದು ಈ ಹೋಟ್ಲು ಕಡಿಕ್ಕಳಿತದೆ" ಎಂದು ಜುಮ್ಮಿ ನಕ್ಕಳು.

"ಅದು ನಿಜ ಅನ್ನು. ಆದ್ರು ಕುಮಾರಸ್ವಾಮಿತರ ಒಂದು ಕರ, ಎಡೂರಪ್ಪನಂತ ಒಂದೆತ್ತ ನಾನೂ, ವಾಟಸ್ನೆ ಸಾಕಬವುದಿತ್ತು."

"ಒಂಟಿ ದನ ಸಾಕಬಾರದು ಒಂಟಿ ಬ್ರಾಂಬ್ರು ಮುಖ ನೋಡಬಾರ್ದು ಅಂತ ಮದ್ಲೆ ಹೇಳಿಲವೆ?" ಎಂದ ಸೀರ.

"ಅದ್ಕೆ ಕಣಮಾವ ದ್ಯಾವೇಗೌಡ್ರು ದತ್ತನ ಮಕ ನೋಡಕ್ಕಾಗದೆ ಅವುನ್ನ ರಾಜ್ಯಸಭೆಗೆ ಕಳುಸ್ತಯಿದ್ದರಂತೆ."

"ದತ್ತ ಯಾರ್ಲ?"

"ದತ್ತ ದ್ಯಾವೇಗೌಡ್ರಿಗೆ ದತ್ತು ಮಗ ಇದ್ದಂಗೆ ಕಣೊ. ದ್ಯಾವೇಗೌಡ್ರು ರಾಜಕೀಯಕ್ಕೆ ಬಂದಾಗ ವಬ್ಬ ಬ್ರಾಂಬ್ರೊನು ಬಾಸಣ ಬರದು ಕೊಡತಿದ್ನಂತೆ ಅದ್ಕೆ ಆಲವೆ ದ್ಯಾವೇಗೌಡ ಈವತ್ತಿಗೂ ಮಾತಾಡಬೇಕಾದ್ರೆ ಶ್ಯಾನುಭೋಗನ ತರ ಮಾತಾಡದು."

"ನಿಜ ಬುಡು, ಆದೇ ನಮ್ಮ ಸ್ರೀಕಂಠಯ್ಯ ನಮ್ಮಂಗೆ ಮಾತಾಡ್ತನೆ" ಎಂದ ಸೀರ.

"ಆ ಕಾಲಕೆ ದ್ಯಾವೇಗೌಡನತ್ರ ಆ ಬ್ರಾಮಣ ಇದ್ರೆ, ಈ ಕಾಲಕೆ ಈ ದತ್ತ ಅವುನೆ. ದ್ಯಾವೇಗೌಡನಿಗೆ ಬ್ರಾಂಬ್ರು ಕಂಡರಾಗದಿಲ್ಲ ಅನ್ನೋರಿಗೆ ಸರಿಯಾದುತ್ರ ಕೊಟ್ಟಂಗೂ ಆಯ್ತು, ಯಲ್ಲಾ ಹಿಕಮತ್ತನೂ ತಿಳಕಂಡಂಗೂ ಆಯ್ತು" ಎಂದ ಉಗ್ರಿ.

"ದ್ಯಾವೇಗೌಡ ಇವತ್ತಿನ ದಿವಸದಲ್ಲಿ ಯಾರ ಕೈಲಾರ ಹೇಳಿಸಿಗಳೊ ಮಟ್ಟುಕಿದ್ದನೇನ್ಲ" ಎಂದ ಕಾಳಮಾವ.

"ಅವುನಿಗಿನ್ನು ಈಗ ಯಪ್ಪತ್ತನಾಕೊರ್ಸಂತಲ್ಲ ಹೇಳು" ಎಂದ ಸೀರ.

"ಇನ್ನೇನು ಯಂಬತ್ತನಾಕು ಅನ್ನಕಂಡಿದ್ದೇನೊ? ಯಸ್ಸೆಂ ಕಿಸ್ನನಿಗಿಂತ ಕಿರಿಯೋನು ದ್ಯಾವೇಗೌಡ ಗೊತ್ತೆ?"

"ಅದೇನಾರ ಆಗ್ಲಿ ಇನ್ನು ಹತ್ತೊರಸ ಅಲ್ಲಾಡದಿಲ್ಲ ಅವುನು."

"ನಿಜಬುಡು. ಈಗ್ಲು ಹಳ್ಳಿವಮ್ಯಾಲೋಗಿ ಬಾಸಣ ಮಾಡ್ತಿನಿ ಅಂತ ಹ್ವಂಟವುನಲ್ಲ ಇದಕೇನೇಳನಾ? ನಮ್ಮ ಕಾಳಮಾವ ಈಗ್ಲೂ ಮೇಣಿ ಹಿಡಕಂಡು ವಲ ಉಳತಿನಿ ಅಂತನಲ್ಲ ಅಂಗಾಯ್ತು ದ್ಯಾವೇಗೌಡನ ಕತೆ" ಎಂದ ಉಗ್ರಿ.

"ನಮ್ಮ ಕಾಳ ದ್ವಡಪ್ಪ ಬದುಕಕ್ಕೆ ಯಂಗೆ ಭೂಮಿ ನಚ್ಚಿದ್ದನೊ ಅಂಗೆ ದ್ಯಾವೇಗೌಡ ರಾಜಕೀಯ ನಂಬ್ಯವುನೆ ಕಣೊ ಉಗ್ರಿ" ಎಂದುಕೊಂಡು ವಾಟಸ್ನೆ ಹಾಜರಾದ.

"ವಲ ಉಳಕ್ಕೇನು ಮಾಡಿದ್ಲ?" ಎಂದಳು ಜುಮ್ಮಿ.

"ಯಲ್ಲಾ ಉತ್ತಗಂಡಾದ ಮ್ಯಾಲೆ ನಾನು ಯಾರವುನಾರ ದನ ಹಿಡಕಂಡು ಉಳತಿನಿ, ಇಲ್ಲ ಅಂದ್ರೆ ನಮ್ಮ ವನ್ನೆನಳ್ಳಿ ಹೂಬಾಲನ ಟ್ಯಾಗುಟ್ರ ತರಿಸಿ ಉಳುಸ್ತಿನಿ" ಎಂದ.

"ಅದ್ಯಾಕವುನ ಟ್ಯಾಗುಟ್ರ ತರುಸ್ತಿ, ಇಲ್ಲೆ ಅವಲ್ಲ ಉಳುಸು."

"ಅವುನು ಫ್ರೀಯಾಗಿ ಉತ್ತು ಕೊಡ್ತನೆ ಕಣಕ್ಕ. ನನ್ನ ಅಭಿಮಾನಿ ಅವುನು."

"ನಿನಿಗೂ ಅಭಿಮಾನಿಗಳಿದ್ದರೆ?"

"ಊ ಕಣಕ್ಕ. ನಾನು ಈ ಊರಿನಲ್ಲಿ ಹಿಂಗಿರಬವುದು, ಬ್ಯಾರೆ ಊರಲ್ಲಿ ತುಂಬ ರೆಸ್ಪೆಕ್ಟದೆ ನನಿಗೆ. ಅದರಲ್ಲೂ ನಮ್ಮ ವನ್ನೆನಳ್ಳಿ ಹೂಬಾಲವುನಲ್ಲ ಅವುನು ನನ್ನ ಕಂಡ್ರೆ ಸಿರಿಯಾಡ್ತನೆ. ಏನು ಮಾಡ್ತಿ, ಅವುನ್ನು ಒಂದು ಬ್ಯಾಡಲಕ್ಕದೆ. ಅದ್ಕೆ ಯಾವಾಗ್ಲು ಕ್ವರಗುತನೆ. ಏನು ಮಾಡಿದ್ರು ಸುಮ್ಮನಿರಸ ಕ್ಯಾಗದಿಲ್ಲ, ಯಾವಾಗಾರ ಸಿಕ್ಕಿದ್ರೆ ನೀನೆ ಸಮಾಧಾನ ಹೇಳಕ್ಕ."

"ನಾನೇನು ಸಮಾಧಾನ ಹೇಳನ್ಲ? ಅದೇನು ಮಾಡಿಕಂಡಿದ್ದನವುನೂ?"

"ಅವುನು ಆ ಕಾಲದಲ್ಲಿ ವಳೆ ನರಸೀಪುರಕ್ಕೋಗಿದ್ನಂತೆ ಕಣಕ್ಕ. ಅಲ್ಲಿ ನಮ್ಮ ಜವರಪ್ಪಾರ ಮಾವ ಒಂದೆಣ್ಣು ತೋರಿದನಂತೆ, ಹುಡುಗಿ ಕಪ್ಪಗವುಳೆ ಅಂತ ಬ್ಯಾಡ ಅಂದು ಬಂದನಂತೆ."

"ಸರಿ ಈಗೇನಂಗೆ ಇದ್ದನೆ, ಬ್ಯಾರೆ ಮದಿವಾಗಿ ಯರುಡು ಮಕ್ಕುಳುಟ್ಟ ಅವು ಆಗ್ಲೆ ಮ್ಯಜಾರಿಟಗೆ ಬಂದವೆ."

"ಆದ್ರು ಈಗಿನ ಸ್ಥಿತಿಯ ಒಪ್ಪಿಗಳಕ್ಕೆ ತಯಾರಿಲ್ಲ ಕಣಕ್ಕ ಆವುನು"

"ಅದ್ಯಾಕ್ಲ?"

"ಆಗ ಹುಡುಗಿ ಸ್ವಲುಪ ಕಪ್ಪಗವುಳೆ ಬ್ಯಾಡ ಅಂದು ಬಂದಿದ್ನಲ್ಲ, ಆ ಹುಡುಗಿ ದ್ಯಾವೇಗೌಡ್ರ ಮಗಳಂತೆ."

"ಸರಿ ಅದಕೇನಂತೆ?"

"ಅವತ್ತು ಒಪ್ಪಿಗಂಡಿದ್ರೆ ಇವತ್ತು ಮಾಜಿ ಪ್ರಧಾನಿ ಅಳಿಯ ಅಂತ ಜನ ರೆಸ್‌ಪೆಕ್ಟ್ ಕೊಡೋರು. ಗೌಡ್ರು ಅಳಿಯನ್ನ ಕೈಬುಡದೆ ಎಮ್ಮೆಲ್ಸಿ ಮಾಡೋರು, ಮಂತ್ರಿ ಮಾಡೋರು. ಅದ್ಯಾವುದೂ ಬ್ಯಾಡ ಅಂದಿದ್ರೆ ರೇವಣ್ಣನಿಗೇಳಿ ಹಾಲ ಡೈರಿ ಅದ್ಯಕ್ಷನ್ನ ಮಾಡೋರು. ಇಲ್ಲ ಡಿಸಿಸಿ ಬ್ಯಾಂಕ್ ಅಧ್ಯಕ್ಷನ್ನ ಮಾಡೋರು, ಅಂತ ಕ್ವರುಗ್ತ ಕುಂತವುನೆ ಕಣಕ್ಕ."

"ಅಯ್ಯೋ ಅದರ ಮಕದ ಮ್ಯಾಲೆ ಮಣ್ಣಾಳಿಯ



ಅದಕೆಲ್ಲೊ ತಲಿ ಕೆಟ್ಟೊಗ್ಯದೆ ಕಂಡ್ಯ."

"ಅಂಗೇನೂ ಇಲ್ಲ ಕಣಕ್ಕ, ಅವತ್ತು ಅಂಗೆ ಮಾಡಿದ್ರೆ ಇವತ್ತು ಹಿಂಗಿರತಿದ್ದೆ ಅಂತ ಒಂದು ಸಣ್ಣ ಕ್ವರಗಿಟಗಂಡವುನೆ ಅಷ್ಟೆ."

"ಅಲ್ಲಾ ಕಣೊ. ಗೌಡನ ಮಗಳು ಮೈನ್ಯರದ್ರೆ. ಆಳುಮಗ ಅಟ್ಟ ಹತ್ತಿ ತಳರ್‍ಯಾಮ ತಕ್ಕಂಡ ಅಂತ ಈ ಗ್ನಾಪಾಳದೋನು ಅವತ್ತು ಅಂಗಂದು, ಇವತ್ತಿಂಗಂದ್ರೆ ಯಾರಾರ ಮಕ್ಕುಗಿಯದಿಲವೆ. ಇನ್ನು ಯಾರೂ ಗೂಸು ಕೊಟ್ಟಲವೆ?" ಎಂದ ಉಗ್ರಿ.

"ಮಿಸ್ಟರ್ ಉಗ್ರಿ ಅಂಗೆ ನೋಡಿದ್ರೆ, ಯಲ್ಲಾರ ಲೈಪಲ್ಲೂ ಇಂತದೊಂದು ಇನ್ಸಿಡೆಂಟಿರತದೆ ಕಣೊ."

"ಇರತದೆ ಸರಿ ಕಣೊ ಅದ ಮರತುಬುಡಬೇಕೊ ... ಮಾತಾಡಿಕಂಡು ತಿರಗಬೇಕೊ ಹೇಳು?"

"ಮಾತಾಡದರಿಂದ ಖುಸಿಯಾಗದಾದ್ರೆ ಯಾ... ಮಾತಾಡಬಾರದು?"

"ಇವುನಿಗೆ ಖುಷಿಯಾಗಬವುದು ಬ್ಯಾರ್‍ಯೋರಿ... ಬೇಜಾರಾಗದಿಲದೆ?"

"ಎಜ್ಜಾಟ್ಲಿ ಕರಟ್."

"ಇವುನಿಂಗನ್ನದು ಹ್ಯಂಗದಪ್ಪ ಅಂದ್ರೇ, ನ... ಆಗೊಂದು ಸತಿ ನನಿಗೂ ಹುಲಿಗೂ ನಿಶ್ಚಿತಾರ್ಥ ಆಗಿತ್ತು... ಅನ್ನಂಗದೆ."

"ಲೈ ತಡಿರ್ಲ, ತಲಿಯಲ್ಲ ಮಾತಾಡಬ್ಯಾಡಿ" ಎಂದ... ಕಾಳಮಾವ ಗದರಿದ ನಂತರ ಏನನ್ನೋ ಗಾಡವಾಗಿ ಆಲೋಚಿಸಿ,

"ದ್ವಡ್ಡ ಮನುಸ್ರ ಸಮಂದ, ಬೀಗತನ, ಸವಾಸದಿಂದ ... ಬ್ಯಲೆ ಸಿಗತದೆ ಅಂತ ತಿಳಕಂಡಿದ್ದಿರಲ್ಲಾ ನಿಮ್ಮಂ... ಬ್ಯರಕೆ ಸೂಳೆಮಕ್ಕಳ ನಾನೆಲ್ಲೂ ನೋಡಲಿಲ್ಲ..."

"ಇದ್ಯಾಕ್ ದ್ವಡಪ್ಪ ಇದ್ಕಿದ್ದಂಗ... ರಾಂಗಾದೆ?"

"ನಿಮ್ಮ ಮಾತ ಕೇಳಿ ರಾಂಗಾಗದೆ ತ... ಅಲ್ಲಾಡಸಕ್ಯಾದತೇನ್ಲ? ಯಮ್ಮೆಲ್ಲೆಗಳು ಮಂತ್ರಿ... ಗಳು ಬಂದ್ರೆ ಅವುರತ್ತುಕೋಗಿ ಹಲ್ಲು ಕಿಸಗಂಡು ಕೈಯೊಡ್ತಿರಲ್ಲಾ ಆ ಊರೊರಗದ... ಗುಡ್ಯಾಯ್ಕಂಡವುರಲ್ಲ ಅವುರಿಗಿರೊ ಬ್ಯ... ನಿಮಿಗಿದ್ದತಿರ್ಲ?"

"ಸಾರಿ ದ್ವಡಪ್ಪ, ನಾನು ಗಮನಿಸಿರಲಿಲ್ಲ... ಅವುರು ಯಲ್ಲಾ ಊರೊರಗೂ ಇರತದ... ಯಾರಬಂದ್ರೂ ಅವುರೆದ್ರಿಗೆ ಬರದಿಲ್ಲ, ಕೈಲ... ಕೇಳದಿಲ್ಲ, ಕಾಸು ಕೇಳದಿಲ್ಲ, ನಮಸ್ಕಾ... ಮಾಡದಿಲ್ಲ. ರಿಯಲಿ ಗ್ರೇಟ್ ಜಂಟ... ಮ್ಯಾನುಗಳವುರು."

"ನಾನು ನೋಡಿದ್ದೀನಿ ಕಣಮಾವ, ಸೂ... ದಬ್ಬಳ ಕರಿಮಣಿ ಮಾರಕ್ಕೆ ಅಂತ ಹೆಂಗುಸು... ಬತ್ತರೆ, ಗಂಡುಸ್ರು ಏನೇನು ಮಾಡ್ತರೊ ಏನೊ... ಅಂತು ಯಾವುದ್ಕೂ ಬರದಿಲ್ಲ ಅವುರು..." ಎಂದಳು ಜುಮ್ಮಿ.

"ಸ್ವಸಂತ್ರ ಜನ ಬುಡವುರು" ಎಂದ ಸೀ...

"ಏನು ಬ್ಯಾಡಪ್ಪ ಒಂದಳ್ಳಿ ಕುಂಚಿ... ಜೀವಸಯಿತ ಹಿಡಿತರವುರು, ನರಿ ಹಿಡಿತ... ನೀವಿಡಿರಿ ನೋಡನ ನಿಮ್ಮ ಕೈಲಾದತೆ?"

"ಇಂಪಾಜಿಬಲ್ ದ್ವಡಪ್ಪ."

"ಅಂಥೋರೆದ್ರಿಗೆ ನೀವ್ಯಲ್ಲ ಯಾವ ಶ್ಯಾಟನಾಯ್ಕ... ನಿಮ್ಮದೂ ಒಂದು ಜೀವನವೆ."

"ಸರಿ ದ್ವಡಪ್ಪ ನಾನು ಅವುರಂಗಾಗ್ತೆ, ಅಂಗಾ... ನಿನ್ನ ಮನಸಿಗೆ ಸಂತೋಸವೆ?"

"ನೀವು ಅಂಗಾಗದು ಬ್ಯಾಡ. ಒಂದು ಸಟೀಗವ್ರ... ನೋಡಿ ಮರಿಯಾದಿಯಾಗಿ ಬದುಕದ ಕಲ್ತುಗೊ... ಅಂದೆ."

" !?"

–ಬಿ. ಚಂದ್ರೇಗೌಡ

Zero Hour ಮುನ್ನಿ

1. **ಜೆಡಿ(ಎಸ್) ಮಹಿಳಾ ಘಟಕ ಕುರಿತ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ?**

a) ಹೊರೆ ಹೊರಲಷ್ಟೇ ಮಹಿಳೆ!
b) ಈ ಘಟಕದಲ್ಲಿರುವವರೆಲ್ಲ ಪ್ರತಿಭಾನ್ವಿತರೇ
c) ಪ್ರಫುಲ್ಲಾ ಮಧುಕರ್, ಲೀಲಾವತಿ ಪ್ರಸಾದ್, ಬಿ.ಟಿ. ಲಲಿತಾನಾಯಕರನ್ನೆಲ್ಲ ಗಂಡೆದೆಯ ರಾಜಕಾರಣಿಗಳು ಎಂದು ದೇವೇಗೌಡರು ಭ್ರಮಿಸಿರುವುದರಿಂದ ಅವರಿಗೆ ಯಾವುದೇ ಸ್ಥಾನಮಾನಗಳಿಲ್ಲ.
d) ಸದ್ಯದಲ್ಲೇ ಎಂ.ಪಿ. ಪ್ರಕಾಶ್ ಈ ಘಟಕಕ್ಕೆ ಅಧ್ಯಕ್ಷರಾಗಲಿದ್ದಾರೆ.


2. **ಮೊಟ್ಟ ಮೊದಲಿಗೆ ಮೇನಕಾ ಗಾಂಧಿಯವರ 'ಸಂಜಯ್‌ಮಂಚ್' ಏರಿದ ಕರ್ನಾಟಕದ ತೇನ್‌ಸಿಂಗ್ ಯಾರು?**

a) ದೇವರಾಜ್ ಅರ್ಸ್ b) ರಾಮಕೃಷ್ಣ ಹೆಗಡೆ
c) ಉಪಾಳ ಗೂಳಪ್ಪ d) ಜೆ.ಎಚ್. ಪಟೇಲ್

3. **"'ಜ್ಯೂಲಿ'ಯಲ್ಲಿನ ರಮ್ಮಾ ಪಪ್ಪಿ ಸೀನ್ ನೋಡಿದ ರಮ್ಮಾ ಪಪ್ಪಿ ಬ್ರ್ಯಾಂದಿ ಪುಲಕಗೊಂಡಿತು...." ಈ ಸಿನಿಗನ್ನಡವನ್ನು ತಿಳಿಗೊಳಿಸಿ ಬರೆಯಿರಿ**


a) ರಮ್ ನೋಡಿ ಬ್ರ್ಯಾಂದಿ ಖುಷಿಯಾಯ್ತು.
b) ರಮ್, ಬ್ರ್ಯಾಂದಿ ಕಾಕ್‌ಟೇಲ್
c) ರಮ್ಯಳ ಪಪ್ಪಿ (ಕಿಸ್ಸಿಂಗ್) ಸೀನ್ ನೋಡಿದ ಅವಳ ಮುದ್ದಿನ ಪಪ್ಪಿ (ನಾಯಿಮರಿ) 'ಬ್ರ್ಯಾಂದಿ'ಗೆ ಥ್ರಿಲ್ ಆಯ್ತು.
d) ನಿರ್ದೇಶಕಿ ಪೂರ್ಣಿಮಾಗೇ ಈ ಪ್ರಶ್ನೆ ಅರ್ಥ ಆಗಲ್ಲ; ನಮಗೇಕೆ ಬಿಡಿ....
e) (c) & (d) ಎರಡೂ ಸರಿ

4. **ಸತ್ಯಕತೆ ಆಧರಿಸಿದ ಈ ಚಿತ್ರ ಯಾವುದು?**



a) ಅಪೂರ್ವ ಸಹೋದರರು!
b) ಜೋಡಿ
c) ಜೀವಕ್ಕೆ ಜೀವ
d) ಕೋತಿರಾಮ

5. **ಈ ಚಿತ್ರ ಏನನ್ನು ಸೂಚಿಸುತ್ತದೆ?**



a) ಜಾತಿ ಮತ ಮರೆತ ಸಹಭೋಜನ
b) ಸಮ್ಮಿಶ್ರ ಭೋಜನ
c) ನ್ಯಾಷನಲ್ ಲೆವೆಲ್ ಆಟಗಾರನಿಂದ ಸ್ಟೇಟ್ ಲೆವೆಲ್ ಆಟಗಾರರಿಗೆ ಮೇಯುವ ಕೋಚಿಂಗ್
d) ಕಿತ್ತಾಟದಲ್ಲೂ ಸಹಭೋಜನ

ಉತ್ತರಗಳು: 1.b 2.c 3.e 4.a 5.c

ದುಃಖಿಗಳು ಇಲ್ಲದ ಸ್ಥಳ ಜಗತ್ತಿನಲ್ಲಿ ಎಲ್ಲಿದೆ? - ವರ್ಜಿಲ್

ಅರ್ಥಪೂರ್ಣ ಭೇಟಿ

ಬೆಳಗ್ಗೆ ಹಿತವಾಗಿತ್ತು. ಸಾಮಾನ್ಯವಾಗಿ ನಾನು ಆಫೀಸಿಗೆ ಬೆಳಗ್ಗೆಯೇ ಬಂದು ಕ್ಷಣ ಕಾಲ ಇದ್ದು ಅಲ್ಲಿಂದ ಹೊರಡುವುದು ಅಭ್ಯಾಸ. ಎಷ್ಟೇ ಗಲಾಟೆ ಇರಲಿ, ಗಾಂಧಿಬಜಾರಿನ ಗದ್ದಲ ಎಷ್ಟೆ ಇರಲಿ; ಆಫೀಸಲ್ಲೇ ಕೂತು ಬರೆದರೇ ನೆಮ್ಮದಿ. ಅವತ್ತು ಬರೆಯುವುದು ಏನೂ ಇರಲಿಲ್ಲ. ಎದ್ದು ಒಂದೆರಡು ಪುಸ್ತಕ ಕಾರಿನಲ್ಲಿ ಹಾಕಿಕೊಂಡು ಹೊರಟೆ. ಉಪಚಾರಿಕವಾಗಿ ಆಫೀಸಲ್ಲಿದ್ದ ಮಿತ್ರ ಕೇಳಿದ,

"ಎಲ್ಲಿಗೆ?"


"ಇಲ್ಲೇ ಯಾರನ್ನೋ ಅರ್ಜೆಂಟಾಗಿ ನೋಡಬೇಕು-ಮಧ್ಯಾಹ್ನ ಬರ್ತೇನೆ" ಎಂದು ಸ್ಟಾರ್ಟ್ ಮಾಡಿದೆ. ತುಂಬ ತ್ವರೆಯ ಕೆಲಸ.

ಅವತ್ತು ಯುಗಾದಿ. ತೆಳ್ಳನೆಯ ಮೋಡಗಳು. ಹೊತ್ತು ಮೇಲೇರಿರಲಿಲ್ಲ, ರಾತ್ರಿಯೆಲ್ಲ ಮರಗಟ್ಟಿದ ಹಿತವಾದ ಗಾಳಿ. ಇದು ಮಾಗಿಯಲ್ಲ, ಇದು ಬಲಿತ ಬೇಸಿಗೆಯಲ್ಲ, ಇದು ಮಳೆಗಾಲವಲ್ಲ, ಕೇವಲ ಸಂದಿಗ್ಧದ ಬೆಳಗ್ಗೆ. ಹಿಂದಿನ ದಿನ ತೋರಣ, ಹೂವು, ಹಣ್ಣು ತರಕಾರಿಗಳನ್ನು ಮಾರಿಕೊಂಡು ಭಾರ ಕಳೆದುಕೊಂಡ ರಸ್ತೆಗಳು. ಹಬ್ಬದ ಬೆಳಗ್ಗೆ, ಹತ್ತು ಕಿಲೋ ಮೀಟರ್; ಹದಿನೈದು..... ಉತ್ತರ ದಿಕ್ಕಿನಲ್ಲಿ ನಾನು ಎರಡು ವರ್ಷದ ಹಿಂದೆ ನೋಡಿದ್ದ ಜಾಗ. ದಾರಿ ತಪ್ಪಿದೆ. ನಿಂತು ಕೆಲವರನ್ನು ವಿಚಾರಿಸಿದೆ. "ಆ ಜಾಗ ಇನ್ನೂ ದೂರ-ರೈಲು ಹಳಿ ದಾಟಿ ಒಂದೆರಡು ಕಿಲೋಮೀಟರ್ ಹೋಗಿ" ಅಂದರು. ಹೋಗುತ್ತಿದ್ದಂತೆ ಎಂದೋ ನೋಡಿದ ರಸ್ತೆ, ಮನೆಗಳು ನೆನಪಾಗತೊಡಗಿದವು. ಆಮೇಲೆ ಬಯಲು. ತಿರುವಿಗೆ ಬಂದು ಸರಿಯಾದ ರಸ್ತೆ ಹಿಡಿದು ಹೊರಟೆ. ಕಾರು ನಿಲ್ಲಿಸಿದೆ. ಗಮ್ಮನೆಯ ವಾಸನೆ. ಹೀಚು, ಚಿಗುರಿನ ವಾಸನೆ. ಎತ್ತರದ ಸ್ಥಳಕ್ಕೆ ಬಂದು ನೋಡಿದೆ-ಕೇವಲ ಹದಿನೈದು ವರ್ಷದ, ಸ್ವಚ್ಛ ಕೋಮಲ ಕಾಂಡಗಳ ಸಾವಿರ ಮಾವಿನ ಮರಗಳು. ಕೃಷಿ ವಿಶ್ವ ವಿದ್ಯಾನಿಲಯದ ತೋಟ. ಕಾವಲುಗಾರ ಸ್ವಾಗತಿಸಿದ. ಮರದಿಂದ ಮರಕ್ಕೆ ಹೋದೆ. ಕೆಲವು ಮಲ್ಲಿಕಾ, ಕೆಲವು ಬಾದಾಮಿ ಮಾವಿನ ಮರಗಳು. ಚಿಗುರಿ ತಿಂಗಳ ಹಿಂದೆ ಬಿಟ್ಟಿದ್ದ ಹೀಚುಗಳ ಗೊಂಚಲನ್ನು ಎದೆಯಲ್ಲಿಟ್ಟುಕೊಂಡ ನಾಲ್ಕು ಆಳೆತ್ತರದ, ಹತ್ತು ಹಸುಗಳ ಗಾತ್ರದ ಮರಗಳು, ಅಲ್ಲೇ ನಿಂತು ಕಾವಲುಗಾರನೊಂದಿಗೆ ಮಾತಾಡಿದೆ. ಈ ವರ್ಷ ತೊಂಭತ್ತು ಸಾವಿರಕ್ಕೆ ಗಿಡಗಳನ್ನು ಗುತ್ತಿಗೆ ಕೊಟ್ಟಿದ್ದಾರಂತೆ. ಬೇಲಿ ಇಲ್ಲ, ಮರಗಳನ್ನು ಕಾಯುವುದು ಕಷ್ಟ. ಯಾರಿಗೂ ಈ ಮರಗಳ ಚಿಂತೆಯೇ ಇಲ್ಲ, ಸರಿಯಾಗಿ ನೋಡಿಕೊಂಡರೆ ಈ ಮರಗಳಿಂದ ಕನಿಷ್ಠ ಐದು ಲಕ್ಷ ವರಮಾನ ಬರುತ್ತದೆ. ಆದರೆ ಅದೆಲ್ಲ ಯಾರಿಗೆ ಬೇಕು?



ಎಳೆ ಮರಗಳ ಪಠಾಲಂ ಎದುರು ಆನಂದದಿಂದ ನಿಂತಿದ್ದೆ, ಮಾವಿನ ಕಮರು ವ್ಯಕ್ತಿತ್ವವನ್ನೆಲ್ಲ ಆವರಿಸಿತ್ತು.

ನಾನು ಅಲ್ಲಿಗೆ ಸುಮ್ಮನೇ ಹೋಗುವ ಮುಂಚೆ ಹೀಗೆ ಮರಗಳನ್ನು ನೋಡುವುದಕ್ಕೆ ಹೋಗುತ್ತಿರುವುದಾಗಿ ಹೇಳಿದ್ದರೆ ನಗುತ್ತಿದ್ದರು. ಆದ್ದರಿಂದ ಇಲ್ಲಿ ಬರೆದಿದ್ದೇನೆ. ■



ಏಪ್ರಿಲ್ 3, 1988

ಪೆನ್ನು ಖಡ್ಗವಾದರೆ?



ಈ ಭೀಮಸೇನ್ ಜೋಷಿ ಎಷ್ಟು ವಿಚಿತ್ರ ಮನುಷ್ಯ-ತೀರಿಕೊಂಡ ಮಹಾಸಂಗೀತಗಾರ ಟಿ.ಆರ್. ಮಹಾಲಿಂಗಂ ತರಹವೇ. ನಾನು ಎಂದೋ ಕುದುರೆ ಜೂಜಿಗೆ ಹೋಗುತ್ತಿದ್ದಾಗ ಈ ಮಹಾಲಿಂಗಂ ಮಂಕಿಟೋಪಿ ಹಾಕಿಕೊಂಡು ಬುಕ್ಕಿಗಳ ಹತ್ತಿರ ದುಡ್ಡು ಕಟ್ಟಲು ಹಾರಾಡುತ್ತಿದ್ದುದನ್ನು, ತನ್ನ ಮೆಚ್ಚಿನ ಕುದುರೆ ಸೋತೊಡನೆ ಗೂಳಿಗಿ ಹಾರಾಡುತ್ತಿದ್ದುದನ್ನು ನೋಡಿದ್ದೆ. ಇವರನ್ನು ಕೋರಿಸಿ ಪರಿಚಿತರು ಪ್ರೀತಿಯಿಂದ, ವ್ಯಂಗ್ಯದಿಂದ ನಗುತ್ತಿದ್ದರು. ಭೀಮಸೇನ್ ಜೋಷಿ ಅದ್ಭುತ ಹಾಡುಗಾರರೆಂದು ಇಲ್ಲಿ ನಾನು ಹೊಗಳಬೇಕಿಲ್ಲ - ಈತ ಸಂಗೀತವನ್ನು ಮದ್ಯಪಾನವನ್ನು ತೆಗೆದುಕೊಳ್ಳುವ ಆರೋಗ್ಯವಂತ ರೀತಿಗೆ ಸೋಜಿಗವೆನ್ನಿಸುತ್ತದೆ. ಸಂಗೀತ ನೀಡುವವರಂತೆಯೇ ಕೇಳುವವರೂ ಸ್ವಲ್ಪವೇ ಸ್ವಲ್ಪ ತಿಕ್ಕಲುಗಳು - ಎಂಬುದನ್ನು ಎಲ್ಲರೂ ಬಲ್ಲರು. ಜೋಷಿ ದೀಪಕಾ ರಾಗದಿಂದ ದೀಪ ಹಚ್ಚಿಸುವ ಮೇಘ ಮಲ್ಹಾರ ರಾಗದಿಂದ ಮಳೆ ಬರಿಸುವ ಬಗ್ಗೆ ತಮಾಷೆ ಮಾಡಿದ್ದಾರೆ. ದೀಪಕಾ ರಾಗ ದೀಪ ಹಚ್ಚಿಸುವುದಾದರೆ ಈ ಹಾಡಿನಿಂದ ಊರೆಲ್ಲ ಹತ್ತಿಕೊಂಡು ಉರಿಯುತ್ತಿತ್ತು - ಮಳೆಗಾಲದಲ್ಲಿ ಹಾಡಿದರೆ ಮಾತ್ರ ಆಕಸ್ಮಾತ್ ಮಳೆಯಾಗುವ ಸಂಭವವಿದೆ ಎಂದು ತಮಾಷೆ ಮಾಡಿದೆ.

ಸಂಗೀತದಿಂದ ಮನಸ್ಸಿನ ದೀಪ ಹತ್ತೀತು, ಆಕಾಶ ಒಣಗಿದ ದಿನಗಳಲ್ಲಿ ಕೂಡ ಮೇಘ ಮಲ್ಹಾರ ಮನಸ್ಸಿನ ಒಳ ಪದರಗಳನ್ನು ತೇವಗೊಳಿಸಬಹುದು.

ಬರೆಯುವುದರಿಂದ? ಬರೆಯುವುದರಿಂದ ಟೇಬಲ್ ಮೇಲಿನ ಧೂಳು ಕೂಡ ಏಳುವುದಿಲ್ಲ - ಆದರೆ.... ಲೇಖನಿಯನ್ನು ಖಡ್ಗಕ್ಕೆ ಹೋಲಿಸುವುದು ಅಷ್ಟು ತಪ್ಪಲ್ಲ, ಅಲ್ಲವೆ?

ಪೆನ್ನನ್ನು ನಿಜಕ್ಕೂ ಖಡ್ಗವೆಂದು, ಲಟ್ಟಣಿಗೆ ಎಂದು ಬಳಸಿದರೆ ಎಷ್ಟು ಅಪಾಯ!


ಒಂದು ತಮಾಷೆ

ಎದುರಿಗಿದ್ದ ಜೋಕ್‌ಗಳನ್ನು ನೋಡುತ್ತಿದ್ದೆ. ಕೆಲವು ಜಡವಾಗಿದ್ದವು, ಕೆಲವು ತೀರಾ ಬಿಸಿಯಾಗಿದ್ದವು, ಕೆಲವು ಕ್ಲಿಷ್ಟವಾಗಿದ್ದವು. ಒಂದು ಸೊಗಸಾಗಿತ್ತು! ವಸಂತ ಕಾಲ, ಹೆಣ್ಣು ಅಳಿಲು ಮರದ ಟೊಂಗೆಯ ಮೇಲೆ ಓಡುತ್ತಿತ್ತು; ಸಂಭ್ರಮದಿಂದ ಆಟವಾಡುತ್ತಿತ್ತು. ಅದರ ಆಟ ಕಾಮದ ಕರೆಯಂತೆ ಕೂಡ ಇತ್ತು. ಗಂಡು ಅಳಿಲು ಮರದ ಬುಡದಲ್ಲಿತ್ತು. ಮರ ಹತ್ತಲಾಗದೆ ಒದ್ದಾಡುತ್ತಿತ್ತು. ಹೆಣ್ಣು ಸನ್ನೆ ಮಾಡಿ ಕರೆಯುತ್ತಲೇ ಇತ್ತು. ಇದನ್ನು ನೋಡಿದ ಒಬ್ಬ ಮನುಷ್ಯ ಹೆಣ್ಣಿನ ಇಂಗಿತ ಅರ್ಥ ಮಾಡಿಕೊಂಡ. ಗಂಡಿಗೆ, "ಯಾಕೋ ಮರಿ ಹಿಗಾದ್ತೀ, ನಿನ್ನ ಗೆಳತಿ ಕರೀತಿರೋದು ಕೇಳಿಸ್ತಿಲ್ಲವೆ?" ಅಂದ.



ಅದಕ್ಕೆ, ಗಂಡು ಅಳಿಲು ತನ್ನ ಚಿಕ್ಕ ಸುಮಧುರ ಸ್ವರದಲ್ಲಿ ಹೇಳಿತು, "ಸುಮ್ನಿರಿ, ನಿಮಗೆ ತಿಳಿಯೋಲ್ಲ, ಕಾಮೋದ್ರೇಕವಾದಾಗ ಮರ ಹತ್ತೋದು ಎಷ್ಟು ಕಷ್ಟ ಅನ್ನೋದು ಗಂಡು ಅಳಿಲಿಗೆ ಮಾತ್ರ ಗೊತ್ತು." ●

ಅಂತರಂಗದ ಚೆಲುವೆಗೂ-ಬಹಿರಂಗದ ಚೆಲುವೆಗೂ ವ್ಯತ್ಯಾಸವೇನು?



.ಎಸ್. ಇಮ್ಮಾನುವೇಲ, ದೇವದುರ್ಗ
ಹೆಣ್ಣಿಗೆ ಶೃಂಗಾರ ಮಾಡಿದಂತೆಲ್ಲಾ ಅಂದ ಹೆಚ್ಚುತ್ತದೆ. ಹೆಣಕ್ಕೆ ಶೃಂಗಾರ ಮಾಡಿದಂತೆಲ್ಲಾ...?
* ಪ್ರಮೋದ್ ಮಹಾಜನನ ಅಪಕೀರ್ತಿ ಹೆಚ್ಚಾದಂತಾಗುತ್ತದೆ, ಹುಷಾರ್

ಇಂದಿರಾ ಶ್ರೀಧರ್, ದಾವಣಗೆರೆ
ಸಿದ್ರಾಮಯ್ಯ ಸರ್ಕಾರದ ಲೋಪಗಳನ್ನು ಟೀಕಿಸದೆ ಸದಾ ದೇವೇಗೌಡ್ರನ್ನೇ ಬಯ್ತಾ ವೃಥಾ ಕಾಲಹರಣ ಮಾಡ್ತಿದ್ದಾರಲ್ಲ?
* ಬಾವಿಯಲ್ಲಿರೋ ಕಪ್ಪೆ ಕತೆ ನಿಮಗೆ ಗೊತ್ತಿದ್ದರೂ ಈ ಪ್ರಶ್ನೆ ಕೇಳ್ತೀರಲ್ಲ.

ಚಂದ್ರ ಕೊಪ್ಪಲು, ಶಿವಮೊಗ್ಗ
ದೇವೇಗೌಡ್ರಿಗೆ ವಾಟಾಳ್ ಟೋಪಿ, ಕನ್ನಡಕ ಹಾಕಿದರೆ ಹೇಗಿರುತ್ತೆ....?!
* ಕರ್ನಾಟಕದ ಕರುಣಾನಿಧಿ ತರಹ ಕಾಣ್ತಾರೆ.

ವಿತಾ ಮಧುಸೂದನ್, ದಾವಣಗೆರೆ
ರಾಜ್‌ಕುಮಾರ್ ಸ್ವರ್ಗದಲ್ಲಿ 'ಗಂಧದ ಗುಡಿ ಭಾಗ-3'ರ ತಯಾರಿಕೆಯಲ್ಲಿ ಮಗ್ನರಾಗಿರುವಾಗ ಲಂಕೇಶ್ ಏನ್ಮಾಡ್ತಿದ್ದಾರೆ?
* "ಗಂಧ ಇಲ್ಲ, ಗುಡಿ ಬೇಡ, ಬನ್ರೀ ಇಸ್ಪೀಟ್ ಆಡಿ" ಅಂದರಂತೆ.

ಸಿ. ಹಾಲಸ್ವಾಮಿ, ಬೆಂಗಳೂರು
ರವಿ ಬೆಳೆಗರೆ ಗಡ್ಡ ಯಾಕೆ ತೆಗೆಸುವುದಿಲ್ಲಾ?
* ಪುರುಸೊತ್ತೂ ಇಲ್ಲ, ಓ ಮನಸ್ಸೂ ಇಲ್ಲವಂತೆ.

ಎಂ. ಶಿವಸ್ವಾಮಿ, ಬಸವೇಶ್ವರನಗರ
'TATA' ಹೇಳಿದವನಿಗೆ 'BATA' ತೋರಿಸಿದಳಲ್ಲ?
* ಮರುಕ್ಷಣವೇ ಇನ್ನೊಬ್ಬನ 'Bio-Data' ಕೇಳಿದಳಂತೆ, ಬಿಡ್ರಿ!

ಬಾನಂದೂರು ಮಂಜುಳಾ, ದೇವದುರ್ಗ
'ನಗ್ನತೆಯು ಮುಗ್ಧತೆ ಹಾಗೂ ಪ್ರಬುದ್ಧತೆಯ ರೂಪ' ಎಂದು ಎಂ.ಎಫ್. ಹುಸೇನ್ ಹೇಳಿದ್ದಾರಲ್ಲ?
* ಶ್ರವಣಬೆಳಗೊಳದಲ್ಲಿ ನಡೆದ ಮಹಾಮಸ್ತಕಾಭಿಷೇಕಕ್ಕೆ ಅವರ ಪ್ರತಿಕ್ರಿಯೆ ಕಣ್ರೀ ಅದು.

ಕೆ. ಶ್ರೀನಿವಾಸ್, ಮಂಡ್ಯ
ಕುಮಾರಸ್ವಾಮಿಗೆ ದೇವೇಗೌಡ್ರು ಫಾದರ್ರೋ, ಅಥವಾ God ಫಾದರ್ರೋ!?
* ರೇವಣ್ಣನಿಗಂತೂ **'Ghost ಫಾದರ್'!**

ಕೆ.ಬಿ. ಸುಕನ್ಯಾ ನಾಗರಾಜ, ಕೆಂಕೆರೆ
ಪ್ರೀತಿಯ ಸ್ಪರ್ಶದಲ್ಲಿ ಹಿಂಸೆ ಕರಗುತ್ತದೆಯೇ?
* ಪ್ರೀತಿಗೆ ಹತ್ತು ಮುಖ, ಹಿಂಸೆಗೆ ನೂರು ಮುಖ.

ಕೆ. ಶ್ರೀನಿವಾಸ್, ಮಂಡ್ಯ
ಕೋ-ಜಾ ಸರ್ಕಾರದ ಅತಿ ಪ್ರಾಮಾಣಿಕ ವ್ಯಕ್ತಿ ಯಾರು?
* ತನ್ನ ಹೇಡಿತನವನ್ನು ಒಪ್ಪಿಕೊಂಡ ಎಂ.ಪಿ. ಪ್ರಕಾಶ್.

ಪಿ.ಎನ್. ಶ್ರೀವತ್ಸ, ಬೆಂಗಳೂರು
ರವಿಕೆಗಳಿಗೂ ಹುಕ್ ಬದಲು ಜಿಪ್ ಇದ್ದಿದ್ದರೆ ಚೆನ್ನಿತ್ತಲ್ಲವೇ.......?!
* ತಾಳಿದವನು ಬಾಳಿಯಾನು, ಶ್ರೀವತ್ಸರವರೇ.

ಬಹುಮಾನಿತ ಪ್ರಶ್ನೆಗಳು

ಬಸವರಾಜ ಹೂಗಾರ್, ಸವದತ್ತಿ
ಅಂತರಂಗದ ಚೆಲುವೆಗೂ-ಬಹಿರಂಗದ ಚೆಲುವೆಗೂ ವ್ಯತ್ಯಾಸವೇನು?
* ನಂದಿತಾ ದಾಸ್‌ಗೂ, ಮಲ್ಲಿಕಾ ಶೆರಾವತ್‌ಗೂ ಇರುವಷ್ಟು ವ್ಯತ್ಯಾಸ.

ಎಂ. ನಿಸರ್ಗ, ದಾವಣಗೆರೆ
ಮಧುರ ಯುದ್ಧಿಗೆ ವಯಾಗ್ರ ಮಾತ್ರೆಯು ಚಲಪವೇಕೆ?
* 'ಶೋಭಾಯಾತ್ರೆ'ಯನ್ನು ಯಶಸ್ವಿ ಮಾಡಲು....

ಮುಂದಿನ ವಾರದಿಂದ

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಹದಿನೈದು ವರ್ಷಗಳಿಂದ ಪತ್ರಿಕೆಯನ್ನು ಓದುತ್ತಾ, ಪ್ರತಿವಾರ 'ಕಣ್ಣಾಮುಚ್ಚಾಲೆ'ಗೆ ಪ್ರಶ್ನೆಗಳನ್ನು ಕಳುಹಿಸುವ 'ಲಂಕೇಶ್' ಮಿತ್ರ ಬಸವರಾಜ್ ಬೆಸ್ತರ್‌ರವರು ಒಂದು ಸಲಹೆಯನ್ನು ಕಳುಹಿಸಿದ್ದಾರೆ. ಅದೇನೆಂದರೆ ಪ್ರತಿವಾರ ನಾವು ಕೂಡ ಓದುಗರಿಗೆ ಒಂದು ಪ್ರಶ್ನೆಯನ್ನು ಕೇಳಿ ಅದಕ್ಕೆ ಬಂದ ಉತ್ತಮ ಉತ್ತರಕ್ಕೆ ಬಹುಮಾನ ನೀಡುವುದು. ಇದು ನಿಜವಾಗಲೂ ಉತ್ತಮ ಸಲಹೆ. ಬೆಸ್ತರ್‌ರವರಿಗೆ ನಮ್ಮ ಧನ್ಯವಾದಗಳನ್ನು ಸೂಚಿಸುತ್ತಾ ಈ ವಾರದ ಪ್ರಶ್ನೆಯನ್ನು ಇಲ್ಲಿ ನೀಡುತ್ತಿದ್ದೇವೆ.

ಪ್ರಶ್ನೆ: ಅರ್ಜುನ, ಏಕಲವ್ಯರ ನಡುವೆ ಮೆರಿಟ್ ಸೀಟ್ ಯಾರದು. ಪೇಮೆಂಟ್ ಸೀಟ್ ಯಾರದು?

ನಿಮ್ಮ ಉತ್ತರವನ್ನು ಚುಟುಕಾಗಿ ಕಳುಹಿಸಿ! ಪ್ರಶ್ನೆಗಳನ್ನು ಕಳುಹಿಸುವ ಕಾರ್ಡಿನಲ್ಲೇ ಉತ್ತರವನ್ನು ನೀಡಬಹುದು.

ಧೀ ತುಂಟಿ!

ಶೆರ್ಲಾಕ್ ಹೋಮ್ಸ್ ಎಂಬ ಪ್ರಸಿದ್ಧ ಪತ್ತೆದಾರ ಡಾ. ವ್ಯಾಟ್ಸನ್ ಎಂಬ ತನ್ನ ಗೆಳೆಯನನ್ನು ನೋಡಿ ತಣ್ಣಗೆ ಹೇಳಿದ: 'ಡಾ. ವ್ಯಾಟ್ಸನ್, ಇವತ್ತು ಹಸಿರು ಕಾಚಾ ಹಾಕಿಕೊಂಡು ಬಂದಿದ್ದೀ, ಅಲ್ಲವೇ?'

'ಅರೆ! ಆಶ್ಚರ್ಯ! ಅದು ನಿನಗೆ ಹೇಗೆ ಗೊತ್ತಾಯಿತು ಹೋಮ್ಸ್?' ಎಂದು ಡಾ. ವ್ಯಾಟ್ಸನ್ ನಿಬ್ಬೆರಗಾಗಿ ಕೇಳಿದ.

'ಅತ್ಯಂತ ಸರಳ ವಿಷಯ, ಡಾ. ವ್ಯಾಟ್ಸನ್.... ನೀನು ಪ್ಯಾಂಟನ್ನೇ ಹಾಕಿಕೊಂಡಿಲ್ಲ!' ಎಂದು ಶೆರ್ಲಾಕ್ ಹೋಮ್ಸ್ ಹೇಳಿದ.



ಸತ್ಯಮಂಗಲ ಕಾಡಿನಲ್ಲಿ ಸತ್ತು ಬದುಕಿದವನು

ಆತ ಬದುಕಿದ್ದೇ ಒಂದು ಪವಾಡ! ವೀರಪ್ಪನ್ ಅಡಗುತಾಣವಾಗಿದ್ದ ಸತ್ಯಮಂಗಲ ಕಾಡಿನಲ್ಲಿ ಸತತ ನಾಲ್ಕು ದಿನಗಳ ಕಾಲ ಪ್ರಜ್ಞೆಯಿಲ್ಲದೇ ಬಿದ್ದಿದ್ದ ಗಾಂಧಿ ಕೃಷಿ ವಿಶ್ವವಿದ್ಯಾಲಯದ ಫೀಲ್ಡ್ ಆಫೀಸರ್ ಎಚ್.ಎಸ್. ಕೆಂಚಯ್ಯನ ಕತೆಯನ್ನು ಪೋಲೀಸರೇಕೆ ಮುಚ್ಚುತ್ತಿದ್ದಾರೆ?



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೆಂಚಯ್ಯ

ಸದ್ಯ ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಮಲಗಿರುವ ಆತನ ಮೈಯಿಂದ ವಿಷವಿನ್ನೂ ಇಳಿದಿಲ್ಲ. ಚುಚ್ಚಿದ ಇಂಜೆಕ್ಷನ್ನಿನ ಸೂಜಿಯ ಗುರುತಿನ್ನೂ ಮೈಯಲ್ಲೇ ಇದೆ. ಎಲ್ಲಿಯ ಬೆಂಗಳೂರು ಎಲ್ಲಿಯ ಸತ್ಯಮಂಗಲ ಕಾಡು? ಹೀಗೇ ಶುರುವಾಗುವ ಪ್ರಶ್ನೆಗಳೆಲ್ಲ ಅಂತಿಮವಾಗಿ ಬೆಂಗಳೂರಿನ ಪರಮ ಕುಖ್ಯಾತ ಲ್ಯಾಂಡ್ ಮಾಫಿಯಾ ಒಂದರ ಕಾರಸ್ಥಾನವನ್ನೂ, ಅದಕ್ಕೆ ಪೋಲೀಸರ ನಿಷ್ಕ್ರಿಯ ಬೆಂಬಲವನ್ನೂ ಬಯಲು ಗೊಳಿಸುತ್ತವೆ.

ಹೆಬ್ಬಾಳದ ಗಾಂಧಿ ಕೃಷಿ ವಿಶ್ವ ವಿದ್ಯಾಲಯದ ಫೀಲ್ಡ್ ಆಫೀಸರ್ ಕೆಂಚಯ್ಯನವರನ್ನು ಅಪಹರಿಸಿ ಆತ ಸತ್ತಿರಬೇಕೆಂದು ಭಾವಿಸಿ ಸತ್ಯಮಂಗಲ ಕಾಡಿಗೆ ಎಸೆದು ಬಂದವರು ವಿದ್ಯಾರಣ್ಯ ಪುರದ ಕುಖ್ಯಾತ ಭೂಕಂಟಕರಾದ ಚಲ್ಲಮುತ್ತು, ನಾಗಭೂಷಣ ಮತ್ತು ನರಸಿಂಹಮೂರ್ತಿ. ಇದೇ ಮೇ ಹನ್ನೊಂದರ ಸಂಜೆ ಕೆಂಚಯ್ಯನವರನ್ನು ಅಪಹರಿಸಲಾಗಿತ್ತು. ಹಾಗೇ ಕಾರಿಗೆ ಹಾಕಿಕೊಂಡು ಅವರಿಗೆ ವಿಷದ ಇಂಜೆಕ್ಷನ್ ಚುಚ್ಚಲಾಗಿತ್ತು. ಅವರ ಬಳಿಯಿದ್ದ ದುಡ್ಡು ಮತ್ತು ಚಿನ್ನಾಭರಣಗಳನ್ನು ದೋಚಿದ ಪಾತಕಿಗಳು ಅವರನ್ನು ಸತ್ಯಮಂಗಲ ಕಾಡಿಗೊಯ್ದು ಅಲ್ಲಿದ್ದ ಬಂಡೆಯೊಂದರ ಮೇಲೆ ಎಸೆದಿದ್ದರು. ಗುರುತು ಸಿಗದಿರಲಿ ಎಂದು ಮೈಮೇಲಿದ್ದ ಬಟ್ಟೆಗಳನ್ನೆಲ್ಲ ತೆಗೆದಿದ್ದರು. ಚುಚ್ಚಿದ ಇಂಜೆಕ್ಷನ್ನಿನ ವಿಷಕ್ಕೆ ಕೆಂಚಯ್ಯ ಬದುಕುಳಿಯುವುದೇ ದುಸ್ಸಾಧ್ಯವಾಗಿತ್ತು. ಹಾಗೊಮ್ಮೆ ಬದುಕಿದ್ದರೂ ಕಾಡು ಪ್ರಾಣಿಗಳು ತಿಂದು ಮುಗಿಸುತ್ತವೆ ಎಂದೇ ಲೆಕ್ಕ ಹಾಕಿದ್ದರು. ಹಾಗಿದ್ದೂ ಬದುಕಿ ಬಂದ ಕೆಂಚಯ್ಯನ ಕತೆಯೇ ರೋಮಾಂಚಕ!



ಚಲ್ಲಮುತ್ತು

ಬೆಂಗಳೂರಿನ ಲ್ಯಾಂಡ್ ಮಾಫಿಯಾಗಳ ಪೈಕಿ ವಿದ್ಯಾರಣ್ಯಪುರದ ಎಚ್‌ಎಂಟಿ ಲೇಔಟಿನ ಚಲ್ಲಮುತ್ತು ಮತ್ತು ಸುಭೇದಾರ್ ಪಾಳ್ಯದ ನಾಗಭೂಷಣ ಇಬ್ಬರೂ ಪರಮ ಪಾಖಂಡಿಗಳೇ. ಆ ಕಾಲದಿಂದಲೂ ಇವರಿಬ್ಬರಿಗೆ ಜೊತೆಯಾಗಿದ್ದ ಕೆಂಚಯ್ಯ ತೀರ ದುರುಳನೇನಲ್ಲ. ಇವರಷ್ಟೇ ಅಲ್ಲದೇ ನಕಲಿ ದಲಿತ ನರಸಿಂಹಮೂರ್ತಿ ಎಂಬಾತನೂ ಇದೇ ತಂಡದ ಸದಸ್ಯ. ಇಂಥಾ ದುಷ್ಟ ಚತುಷ್ಟಯರ ಮಧ್ಯೆ ಶುರುವಾದ ಸಣ್ಣ ಜಗಳವೊಂದು ಅಂತಿಮವಾಗಿ ಕೆಂಚಯ್ಯನ ಪ್ರಾಣಕ್ಕೇ ಮುಳುವಾಗಿತ್ತು.



ನಾಗಭೂಷಣ್

ಬಹುಶಃ ಕೆಂಚಯ್ಯನೂ ನಿಯತ್ತು ಕೆಟ್ಟು ಚಲ್ಲಮುತ್ತು ಪಾಪಕ್ಕೆ ಪಾಲುದಾರನಾಗಿದ್ದರೆ ಈ ಗತಿ ಬರುತ್ತಿರಲಿಲ್ಲ ವೇನೊ!

ಮೂಲತಃ ತಮಿಳುನಾಡಿನ ಚಲ್ಲಮುತ್ತು ವಿದ್ಯಾರಣ್ಯಪುರದ SMAK ಕಂಪ್ಯೂಟರ್ಸ್‌ನ ಮಾಲೀಕ. ಯಶವಂತಪುರ ಮತ್ತು ಜಾಲಹಳ್ಳಿ ಪೋಲೀಸ್ ಠಾಣೆಗಳಲ್ಲಿ ಈತನ ವಿರುದ್ಧ ಕಂಪ್ಯೂಟರ್ ಕದ್ದ ಕೇಸುಗಳಿವೆ. ಈತನಿಗೆ ಯಶವಂತಪುರ ಸುಭೇದಾರ್ ಪಾಳ್ಯದ ನಾಗಭೂಷಣನೇ ನೆಲಗಳ್ಳತನದ ಗುರು. ತಹಶೀಲ್ದಾರ್, ವಿಲೇಜ್ ಅಕೌಂಟೆಂಟ್, ಜಿಲ್ಲಾಧಿಕಾರಿಗಳ ನಕಲಿ ರಬ್ಬರ್‌ಸ್ಟಾಂಪ್ ಮಾಡಿಟ್ಟುಕೊಂಡು ಅವರ ಸಹಿ ಫೋರ್ಜರಿ ಮಾಡಿಯೇ ಹಕ್ಕುಪತ್ರ ಸೃಷ್ಟಿಸಿ ದುಡ್ಡು ದೋಚಿದ್ದಾರೆ. ಇವರಿಗೆ ಅಗತ್ಯ ಬಿದ್ದಾಗಲೆಲ್ಲ ದಲಿತ ಲೀಡರ್ ಎಂದು ಬಳಕೆಯಾಗುವವನು ಇದೇ ವಿದ್ಯಾರಣ್ಯಪುರದ ನರಸಿಂಹ ಮೂರ್ತಿ. ಗೌಡಗೆರೆ ಪುರುಷೋತ್ತಮನೆಂಬ ಹಗಲು ಕುಡುಕನೊಬ್ಬ ಈತನಿಗೆ ಪುಡಿ ಪತ್ರಿಕೆಯೊಂದರ ವರದಿಗಾರನೆಂಬ ಐಡೆಂಟಿಟಿ ಕಾರ್ಡ್ ಬೇರೆ ಕೊಟ್ಟಿದ್ದಾನೆ. ಗಂಗಮ್ಮನ ಗುಡಿ ಪೋಲೀಸ್ ಠಾಣೆಯಲ್ಲಿ ಈತನ ವಿರುದ್ಧ ಗಂಧದ ಸ್ಮಗ್ಲಿಂಗ್ ಕೇಸಿದೆ.

ತಮ್ಮ ಕಾರಿನ ಮೇಲೆ PRESS ಎಂದು ಭಯಂಕರವಾಗಿ ಬರೆಸಿಕೊಂಡೇ ನೆಲಗಳ್ಳತನಕ್ಕಿಳಿದ ಈ ತಂಡದ ವಿರುದ್ಧ ತಿರುಗಿ ಬಿದ್ದವನು ಹೆಬ್ಬಾಳದ ಗಾಂಧಿ ಕೃಷಿ ವಿಶ್ವವಿದ್ಯಾಲಯದ ಫೀಲ್ಡ್ ಆಫೀಸರ್ ಕೆಂಚಯ್ಯ. ವಿದ್ಯಾರಣ್ಯಪುರದ ದುರ್ಗಾದೇವಿ ದೇವಸ್ಥಾನದ ಬಳಿಯಿದ್ದ ತನ್ನ ಸ್ನೇಹಿತ ನರಸಿಂಹನ್ ಎಂಬಾತನ ಸೈಟನ್ನು ಬೋಗಸ್ ದಾಖಲೆ ಸೃಷ್ಟಿಸಿ ಚಲ್ಲಮುತ್ತು ಗ್ಯಾಂಗ್ ಮಾರಿಕೊಂಡಾಗ ಕೆಂಚಯ್ಯ ತಿರುಗಿಬಿದ್ದ. ಇದೇ ಹೊತ್ತಿಗೆ ಚಲ್ಲಮುತ್ತು ಮತ್ತು ನಾಗಭೂಷಣ ಸೇರಿಕೊಂಡು ವಿದ್ಯಾರಣ್ಯಪುರಂ ಮೇನ್‌ರಸ್ತೆಯಲ್ಲಿದ್ದ ರಂಗಸ್ವಾಮಿ ಎಂಬ ಮತ್ತೊಬ್ಬ ವಂಚಕನ ಮನೆ ಬೀಗ ಒಡೆದು ಅದರೊಳಗೆ ಸೇರಿಕೊಂಡರು. ರಂಗಸ್ವಾಮಿ ತನ್ನ ಮನೆಯನ್ನು ಐದಾರು ಜನಕ್ಕೆ ಮಾರಿದ್ದ. ಆದರೆ ಯಾರೊಬ್ಬರಿಗೂ ಮನೆ ಬಿಟ್ಟುಕೊಟ್ಟಿರಲಿಲ್ಲ. ಕೊನೆಕೊನೆಗೆ ರಂಗಸ್ವಾಮಿಯನ್ನು ಮನೆಬಿಟ್ಟು ಓಡಿಸಲು ಮೇಲ್ಮಹಡಿ ಯಲ್ಲಿದ್ದ ಆತನ ಮನೆಯ ಸಾಮಾನು ಗಳನ್ನೆಲ್ಲ ಚಲ್ಲಮುತ್ತು ಕದ್ದುಬಿಟ್ಟ. ಕೆಂಚಯ್ಯನೇ ಕದ್ದಿದ್ದಾನೆಂದು ಪುಕಾರೆಬ್ಬಿಸಿದ್ದ. ಆದರೆ ಕೆಂಚಯ್ಯ ಲೋಕಲ್ ಲೀಡರುಗಳನ್ನು ಸೇರಿಸಿ ಚಲ್ಲಮುತ್ತು ಮತ್ತು ನಾಗಭೂಷಣರೇ ಕದ್ದು ತನ್ನ ಮೇಲೆ ಹಾಕಿದ್ದಾರೆಂದು ಸಿಸಿಬಿಗೆ ದೂರುಕೊಟ್ಟ.

ವಿದ್ಯಾರಣ್ಯಪುರದ ಇನ್ಸ್‌ಪೆಕ್ಟರ್ ಸೊಲಭೇಶ್ವರಪ್ಪ ಈ ಹೊತ್ತಿಗಾಗಲೇ ಚಲ್ಲಮುತ್ತು ಜೊತೆ ಕೈಜೋಡಿಸಿ ದ್ದರಿಂದ ಸಿಸಿಬಿಯ ಎಸಿಪಿ ಚಂದ್ರಶೇಖರ್ ಹೊಸಕೇರಿ ಮತ್ತು ಇನ್ಸ್‌ಪೆಕ್ಟರ್ ವೀರಭದ್ರೇಗೌಡ ಇದರ ತನಿಖೆಗಿಳಿದರು. ಕದ್ದ ಮಾಲಿನ ಬೆಲೆ ಮೂರು ಲಕ್ಷವನ್ನು ಇದೇ ಮೇ ಇಪ್ಪತ್ನಾಲ್ಕಕ್ಕೆ ರಂಗಸ್ವಾಮಿಗೆ ಕೊಡು ತ್ತೇವೆಂದು ಒಪ್ಪಿಕೊಂಡರು. ಅಷ್ಟರ ಒಳಗೆ ರಂಗಸ್ವಾಮಿ ಯನ್ನೇ ಮುಗಿಸುವುದು ಚಲ್ಲಮುತ್ತು ಹುನ್ನಾರವಾಗಿ ತ್ತೇನೊ. ವಿದ್ಯಾರಣ್ಯಪುರದ ಇನ್ಸ್‌ಪೆಕ್ಟರ್ ಸೊಲಭೇಶ್ವರಪ್ಪನೇ ಪಾತಕಿಗಳ ಬೆನ್ನಿಗಿದ್ದುದ್ದರಿಂದ ರಂಗಸ್ವಾಮಿ ಹುಷಾರಾದ. ಯಾವತ್ತು ರಂಗಸ್ವಾಮಿ ಸಿಗಲಿಲ್ಲವೋ ಆತನಿಗೆ ಬೆಂಬಲವಾಗಿದ್ದ ಕೆಂಚಯ್ಯನನ್ನೇ ಮುಗಿಸಲು ನಿರ್ಧರಿಸಿದ್ದಾರೆ.

ಕೆಂಚಯ್ಯನ ಮೇಲೆ ಚಲ್ಲಮುತ್ತು ಗ್ಯಾಂಗಿಗೆ ಅಂಥಾ ಜಿದ್ದಿರಲು ಮತ್ತೊಂದು ಘಟನೆ ಕಾರಣವಾಯಿತು. ಇಲ್ಲಿಗೆ ಒಂದೂವರೆ ತಿಂಗಳ ಹಿಂದೆ ವಿದ್ಯಾರಣ್ಯಪುರದ ಯಾವುದೋ ಸೈಟ್ ಒಂದಕ್ಕೆ ಚಲ್ಲಮುತ್ತು ಕಾಂಪೌಂಡ್ ಹಾಕಲು ಹೋದಾಗ ಅದಕ್ಕೆ ಕೆಂಚಯ್ಯ ಅಡ್ಡಗಾಲಿಟ್ಟಿದ್ದ. ಆಗ ಚಲ್ಲಮುತ್ತು ತನ್ನ ತಲೆಗೆ ರಿವಾಲ್ವರ್ ಇಟ್ಟು ಕೊಲೆ ಬೆದರಿಕೆ ಹಾಕಿದ್ದರ ವಿರುದ್ಧ ಕೆಂಚಯ್ಯ ವಿದ್ಯಾರಣ್ಯಪುರ ಪೋಲೀಸ್ ಠಾಣೆಗೆ ದೂರು ಕೊಟ್ಟನಾದರೂ ಅದನ್ನು ಇನ್ಸ್‌ಪೆಕ್ಟರ್ ಸೊಲಭೇಶ್ವರಪ್ಪನೇ ನಿಂತು ಮುಚ್ಚಿ ಹಾಕಿದ್ದ!


ಚಲ್ಲಮುತ್ತು ಎಂಬ ವಿಷದ ಇಂಜೆಕ್ಷನ್

ರಂಗಸ್ವಾಮಿಗೆ ಕೊಡಬೇಕಿದ್ದ ಮೂರು ಲಕ್ಷವನ್ನು ಕೆಂಚಯ್ಯನೇ ಹೊಡೆದುಕೊಂಡು ಪರಾರಿಯಾಗಿದ್ದಾನೆಂದು ಕತೆ ಕಟ್ಟಿ ಕೆಂಚಯ್ಯನನ್ನೇ ಮುಗಿಸಿಬಿಡಲು ನಿರ್ಧರಿಸಿದ ಚಲ್ಲಮುತ್ತು ಗ್ಯಾಂಗ್ ಮೇ ಹನ್ನೊಂದರ ಸಂಜೆ ನಾಲ್ಕೂವರೆಯ ಹೊತ್ತಿಗೆ ಕೆಂಚಯ್ಯನ ಬೇಟೆ ಆರಂಭಿಸಿದೆ. ನಾಗಭೂಷಣನೇ ಫೋನ್ ಮಾಡಿ ಎಂ.ಎಸ್. ಪಾಳ್ಯಕ್ಕೆ ಕರೆದಿದ್ದಾನೆ. ಆ ಹೊತ್ತಿಗೆ ಕೆಂಚಯ್ಯನ ಬಳಿ ಅರವತ್ತು ಸಾವಿರ ರೂಪಾಯಿ ದುಡ್ಡಿತ್ತು. KA 05 P 2587 ನಂಬರಿನ ಕೆಂಪು ಮಾರುತಿ ವ್ಯಾನಿನಲ್ಲಿ ಕೆಂಚಯ್ಯನನ್ನು ಕೂಡ್ರಿಸಿಕೊಂಡಿದ್ದೇ ಹೆಸರಘಟ್ಟದ ಡೈರಿ ಫಾರಂ ಬಳಿ ಬಂದಿದ್ದಾರೆ. ಅಲ್ಲಿ ನರಸಿಂಹಮೂರ್ತಿ ವ್ಯಾನಿಗೆ ಹತ್ತಿದ್ದಾನೆ.

ರಾ. ಸೋಮನಾಥ್

ನಾಗಭೂಷಣ ವ್ಯಾನ್ ಓಡಿಸುತ್ತಿದ್ದರೆ ಕೆಂಚಯ್ಯನನ್ನು ಮಧ್ಯೆ ಕೂಡ್ರಿಸಿಕೊಂಡಿದ್ದ ಚಲ್ಲಮುತ್ತು ಏಕಾಏಕಿ ತಬ್ಬಿ ಹಿಡಿದಿದ್ದಾನೆ. ತಕ್ಷಣವೇ ಮತ್ತೊಂದು ಬಗಲಲ್ಲಿ ಕೂತಿದ್ದ ನರಸಿಂಹಮೂರ್ತಿ ಇಂಜೆಕ್ಷನ್ ಚುಚ್ಚಿದ್ದಾನೆ. ಸಾಕಷ್ಟು ಕೊಸರಾಡಿದ ಕೆಂಚಯ್ಯನಿಗೆ ಇದ್ದಕ್ಕಿದ್ದಂತೆ ಪ್ರಜ್ಞೆ ತಪ್ಪಿದೆ. ಅದು ವಿಷದ ಇಂಜೆಕ್ಷನ್ನೋ ಅಥವಾ ಅನಸ್ತೇಷಿಯಾನೋ ಯಾರಿಗೆ ಗೊತ್ತು?

ವ್ಯಾನು ಸೀದಾ ಚಾಮರಾಜನಗರದತ್ತ ಓಡಿದೆ. ತಮಿಳುನಾಡಿನ ಗಡಿ ದಾಟಿ ಸತ್ಯಮಂಗಲ ಕಾಡನ್ನು ಹೊಕ್ಕಿದೆ. ಅದು ಅರೆಪಾಳ್ಯದ ದಟ್ಟ ಕಾಡು. ವೀರಪ್ಪನ್ ಬದುಕಿದ್ದಾಗ ಆತನ ಅಚ್ಚುಮೆಚ್ಚಿನ ಅಡಗುತಾಣವಾಗಿತ್ತು. ಆ ರಾತ್ರಿ ಎಚ್ಚರ ತಪ್ಪಿ ಮಲಗಿದ್ದ ಕೆಂಚಯ್ಯನನ್ನು ಕಾಡಿನ ಬಂಡೆಯೊಂದರ ಮೇಲೆ ಹಾಕಿದ್ದಾರೆ. ಹೆಣ ಸಿಕ್ಕರೂ ಗುರುತು ಸಿಗದಿರಲಿ ಎಂದು ಮೈಮೇಲಿದ್ದ ಬಟ್ಟೆಯನ್ನೆಲ್ಲಾ ತೆಗೆದಿದ್ದಾರೆ. ಬಹುಶಃ ಕೆಂಚಯ್ಯನನ್ನು ಬೆಳಿಗ್ಗೆಯ ಹೊತ್ತಿಗೆ ಕಾಡು ಪ್ರಾಣಿಗಳು ತಿಂದಿರುತ್ತವೆ ಬೆಳಕಿಗೆ ಬಾರದ ವಿಚಿತ್ರ ಕತೆ! ಅಥವಾ ಮಧ್ಯಾಹ್ನದ ಹೊತ್ತಿಗೆಲ್ಲಾ ರಣ ಹದ್ದುಗಳು ಮುಕ್ಕುತ್ತವೇ ಎಂದೇ ಪಾತಕಿಗಳು ಲೆಕ್ಕ ಹಾಕಿದ್ದರು. ಹಾಗೊಮ್ಮೆ ಹೆಣದ ಪಳೆಯುಳಿಕೆಗಳು ಸಿಕ್ಕರೂ ಆ ಹೊತ್ತಿಗೆ ಅನಸ್ತೇಷಿಯಾ ಪ್ರಭಾವ ಮಾಯವಾಗಿ ಕಾಡು ಪ್ರಾಣಿಗಳೇ ಕೊಂದವೆಂದು ಪೋಲೀಸರು ಕೇಸು ಮುಚ್ಚುತ್ತಾರೆ. ಕಾಡು ಪ್ರಾಣಿಗಳು ತಿನ್ನುವುದರಿಂದ ಹೆಣದ ಗುರುತೂ ಸಿಕ್ಕದು! ಇದು ಚಲ್ಲಮುತ್ತು ಗ್ಯಾಂಗಿನ ಲೆಕ್ಕಾಚಾರವಾಗಿತ್ತು.



ಸೋಲಬೇಶ್ವರಪ್ಪ

ಕಾಡಿಂದ ಬಂತು ಬೆತ್ತಲೆ ಜೀವ

ಆದರೆ ವಿಧಿ ಬೇರೆಯದನ್ನೇ ಬಗೆದಿತ್ತು. ಮೇ ಹದಿನಾರರ ಬೆಳಿಗ್ಗೆ ದೂರದ ಯಾವುದೋ ಮಸೀದಿಯಿಂದ 'ಅಲ್ಲಾಹ್' ಕೂಗಿನ ಸದ್ದು ಕೆಂಚಯ್ಯನ ಕಿವಿಗೆ ಬೀಳುವ ಹೊತ್ತಿಗೆ ಆತನಿಗೆ ಎಚ್ಚರವಾಗಿತ್ತು. ಮೇ ಹನ್ನೊಂದರ ರಾತ್ರಿಯಿಂದ ಮೇ ಹದಿನಾರರ ಬೆಳಿಗ್ಗೆಯ ತನಕ ಸತತ ಐದು ದಿನಗಳ ಕಾಲ ಬೆತ್ತಲೆ ಹೆಣದಂತೆ ಬಿದ್ದಿದ್ದ ಕೆಂಚಯ್ಯನನ್ನು ಕಾಡು ಪ್ರಾಣಿಗಳು ಮುಟ್ಟಲೇ ಇಲ್ಲ. ಜೀವವಿತ್ತಾದ್ದರಿಂದ ಹದ್ದುಗಳೂ ಬರಲಿಲ್ಲ. ಮೈತುಂಬ ತರಚಿದ ಗಾಯಗಳಾಗಿ... ಹುಳು ಹುಪ್ಪಟೆಗಳು ಕಚ್ಚಿದ ಗುರುತುಗಳಿದ್ದವು. ... ಐದಕ್ಕೆ ಎಚ್ಚರವಾಗಿದ್ದೇ ಹಾಗೇ ತೆವಳಿಕೊಂಡು ಕಾ... ಕಾಲು ದಾರಿಯೊಂದನ್ನು ಹಿಡಿದು ಕೆಂಚ... ಸತ್ಯಮಂಗಲ ಚಾಮರಾಜನಗರ ರಸ್ತೆಯ... ಬಂದಿದ್ದಾನೆ. ಐದು ದಿನದಿಂದ ಅನ್ನಾಹಾರವಿಲ್ಲದ್ದರಿ... ಎದ್ದು ನಿಲ್ಲುವುದಕ್ಕೂ ಆಗದಷ್ಟು ನಿತ್ರಾಣನಾ... ಅಂಡರ್‌ವೇರ್ ಕೂಡ ಇರಲಿಲ್ಲ, ಹುಚ್ಚನಂತೆ ಕಾಣು...


ಯಾರೋ ತಿಂದು ಎಸೆ... ಬಾಳೆಹಣ್ಣಿನ ಸಿಪ್ಪೆ ಕಂಡಿದ್ದೇ ಅದ... ಎತ್ತಿ ಬಾಯಿಗೆ ಹಾಕಿಕೊಂಡ. ಕಾ... ತೊರೆಯೊಂದರ ನೀರು ಕುಡಿದ. ಯಾರೋ ಬಾ...ನೊಬ್ಬ ದನಗಳನ್ನು ಹೊಡೆದುಕೊಂಡು ಹೋಗು... ಆತನಿಗೆ ಚಾಮರಾಜನಗರದ ದಿಕ್ಕು ಕೇಳಿಕೊಂ... ತೆವಳುತ್ತಾ ಹತ್ತು ಮೈಲಿ ಬೆತ್ತಲೆಯಾಗೇ ನಡ... ಯಾರೋ ಹುಚ್ಚನಿರಬೇಕು ಎಂದುಕೊಂಡು ಯಾ... ಲಾರಿ ನಿಲ್ಲಿಸಲಿಲ್ಲ. ಕೆಲವರು ಹಣ್ಣು ತಿಂದಿ ಎಸ... ಹೋದರು. ಕೊನೆಗೆ ಮಣಿ ಎಂಬ ಲಾರಿ ಚಾಲಕನೆ... ಲಾರಿ ನಿಲ್ಲಿಸಿ ಸತ್ಯಮಂಗಲ ಕಾ... ಅರೆಪಾಳ್ಯದಲ್ಲಿದ್ದ ಟೀ ಅಂಗಡಿಯೊಂ... ಬಳಿ ಆತನನ್ನು ಇಳಿಸಿ ಹೋದ. ... ಕನ್ನಡಿಗರಾದ ಪ್ರಭುಸ್ವಾಮಿ ... ಲಿಂಗಾಯಿತರ ಟೀ ಅಂಗಡಿ. ಅ... ಬಟ್ಟೆ ಕೊಟ್ಟಿದ್ದಾರೆ. ಕತೆ ಕೇಳಿ... ಸತ್ಯಮಂಗಲ ಪೋಲೀಸರಿಗೆ ಫೋ... ಮಾಡಿದ್ದಾರೆ.

ಸತ್ಯಮಂಗಲ ಪೋಲೀಸರು ಬ... ಕೆಂಚಯ್ಯನನ್ನು ಕರೆದೊಯ್ದು ಅ... ಬೆಂಗಳೂರಿನ ವಿದ್ಯಾರಣ್ಯಪುರಂ ಪೋ... ರನ್ನು ಕರೆಸಿಕೊಂಡು ಕೆಂಚಯ್ಯನ... ಒಪ್ಪಿಸಿದ್ದಾರೆ. ವಿದ್ಯಾರಣ್ಯಪುರ ಪೋಲೀ... ಆತನನ್ನು ಕರೆತಂದು ಕೆ.ಸಿ. ಜನರ... ಆಸ್ಪತ್ರೆಗೆ ಸೇರಿಸಿದ್ದಾರೆ. ... ಸುದ್ದಿಯಾಗಬೇಕಿತ್ತು. ಹೋಗಲಿ ಈ... ಪಾತಕಿಗಳನ್ನಾದರೂ ಬಂಧಿಸಬೇಕಿತ್ತು. ದುರಂತವೆಂ... ಈ ಬಗ್ಗೆ ವಿದ್ಯಾರಣ್ಯ ಪುರದ ಇನ್ಸ್‌ಪೆಕ್... ಸೊಲಭೇಶ್ವರಪ್ಪನನ್ನು ಕೇಳಿದರೆ 'ಅಲ್ರೀ ಯಾರಾ... ಸುಮ್ ಸುಮ್ನೇ ಈ ರೀತಿ ಮಾಡ್ತಾರೇನ್ರೀ? ಇವ... ಏನಾದ್ರೂ ಗೋಲ್‌ಮಾಲ್ ಮಾಡಿರಬೇಕು. ಅದ... ಈ ರೀತಿ ಮಾಡಿದ್ದಾರೆ. ಎಲ್ಲರೂ ಒಂದೇ ದೋ... ಕಳ್ಳರು....!' ಎಂದು ತಿಪ್ಪೆ ಸಾರಿಸುತ್ತಿದ್ದಾನೆ.

ಹಕೀಕತ್ತೇನೆಂದರೆ ಈ ಪ್ರಕರಣದಲ್ಲಿ ಇನ್ಸ್‌ಪೆ... ಸೊಲಭೇಶ್ವರಪ್ಪ ಎಷ್ಟನೇ ಆರೋಪಿ? ಪಾತಕಿ ಚಲ್ಲಮು... ಗ್ಯಾಂಗಿನ ಜೊತೆ ಆತನನ್ನೂ ಜೈಲಿಗೆ ಹಾಕುವವರ್ಯಾ... ಕಮಿಷನರ್ ಅಜಯ್‌ಕುಮಾರ್ ಸಿಂಗ್ ಇ... ಸುಮ್ಮನಿದ್ದಾರೇಕೆ?

ವೀರಪ್ಪನ್ ಅರಣ್ಯದಲ್ಲಿ ಹಳೇ ಪಾತಕಿ ಚಲ್ಲಮುತ್ತು

ಚಲ್ಲಮುತ್ತು, ನಾಗಭೂಷಣ ಮತ್ತು ನರಸಿಂಹಮೂರ್ತಿ ತ್ರಿಮೂರ್ತಿಗಳಿಂದು ಲ್ಯಾಂಡ್ ಹೊಡೆದೇ ಕೋಟ್ಯಾಧಿಪತಿಗಳು. ಪ್ರಾರಂಭದಲ್ಲಿ ಯಲಹಂಕದ ಮಾರುತಿನಗರದ ಮೂವತ್ತು ಸೈಟುಗಳನ್ನು ಬೋಗಸ್ ಮಾಡಿ ಕಂಡಕಂಡವರಿಗೆ ಟೋಪಿ ಯಿಟ್ಟರು. ಆನಂತರ ವಿದ್ಯಾರಣ್ಯಪುರದ ಆಕಾಶ್ ಲೇಔಟನಲ್ಲಿ ಖಾಲಿಯಿದ್ದ ಸೈಟುಗಳನ್ನು ತೋರಿಸಿ ಇದೇ ಆಂಜನೇಯ ಲೇಔಟ್ ಎಂದು ಇಪ್ಪತ್ತು ಜನಕ್ಕೆ ಮಾರಿ ಅದೇ ಜಾಗಕ್ಕೆ ಮತ್ತೆ ಸ್ವಾಗತ್ ಲೇಔಟ್ ಎಂದು ಹೆಸರು ಕೊಟ್ಟು ಇನ್ನಷ್ಟು ಜನಕ್ಕೆ ಯಾಮಾರಿಸಿದರು. ಬನಶಂಕರಿಯಲ್ಲಿ ಸತ್ತ ಮುದುಕನೊಬ್ಬನ ಸೈಟಿಗೆ ತನ್ನ ಮಾವನನ್ನೇ ತೋರಿಸಿ ನಾಗಭೂಷಣ ಮಾರಿ ಹಾಕಿದ್ದ.




ವಿದ್ಯಾರಣ್ಯಪುರ ಮತ್ತು ಗಂಗಮ್ಮನ ಗುಡಿ ಪೋಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಮ್ಮಿಯೆಂದರೂ ಐವತ್ತು ಇಂಥ ಕೇಸುಗಳಿರುವ ಚಲ್ಲಮುತ್ತು ಗ್ಯಾಂಗಿ... ಬೆನ್ನೆಲುಬಾಗಿರುವವರು ಶಿವಾಜಿನಗರದ ಅಲಿಜಾನ... ಮತ್ತು ಗುಲಾಬ್ ಎಂಬ ಹಳೇ ಪಾತಕಿಗಳು... ಇವರಿಬ್ಬರೂ ಶಿವಾಜಿನಗರದ ಡಾನ್ ಇಪ್ತಿಯಾ... ಪೈಲ್ವಾನನ ಬಂಟರು. ಇಲ್ಲಿಗೆ ನಾಲ್ಕು... ವರ್ಷದ ಹಿಂದೆ ಸಾಲ ಕೊಟ್ಟಿ... ಗಾಂಧಿನಗರದ ಮಾರ್ವಾಡಿಯೊ... ವಸೂಲಿಗೆ ಬಂದಾಗ ಆತನನ್ನು ಇದೇ... ರೀತಿ ಹೊಡೆದು ಕೊಳ್ಳೆಗಾಲ... ವೀರಪ್ಪನ್ ನೆಲೆಯಾದ ರಾಮಾಪುರ... ಕಾಡಿನಲ್ಲಿ ಚಲ್ಲಮುತ್ತು ಎಸೆದು... ಬಂದಿದ್ದ. ಆ ಕೇಸು ಕೂಡ ಯಶವಂ... ಪುರ ಪೋಲೀಸ್ ಠಾಣೆ ಯಲ್ಲಿದೆ... ಹೀಗೆ ಬೆಂಗಳೂರಿನಿಂದ... ಹೊತ್ತೊಯ್ದು ವೀರಪ್ಪನ್ ಕಾಡಿ... ಎಸೆದು ಬರುವುದು ಆತನ ಹಳೆ... ಚಾಳಿ. ಇಂಥ ಪಾತಕಿಯನ್ನು ಈಗಲೂ ಪೋಲೀಸರೇ ರಕ್ಷಿಸುತ್ತಿದ್ದಾರೆಂದರೆ ಬೆಂಗಳೂರಿನ ಪೋಲೀಸ್ ವ್ಯವಸ್ಥೆ ಇನ್ನೆಷ್ಟು ಎಕ್ಕುಟ್ಟಿರಬೇಡ?

ದುಃಖವನ್ನು ಧಾರಾಳವಾಗಿ ಮೊದಲು ಪರಿಹರಿಸುವುದೇ ಸುಖಕ್ಕೆ ಆಧಾರ -ಕುವೆಂಪು

ನಾಗಾರ್ಜುನ, ತದಡಿ ಪ್ರಾಜೆಕ್ಟ್

ನೀರು ಕದಡಿದ ಚೆಡ್ಡಿ ಸ್ವಾಮಿಗಳು !



ಪ್ರಾಣ ತ್ಯಾಗಕ್ಕೂ ಸಿದ್ಧ ಎಂದು ಮೊನ್ನೆ ತಾನೇ ಹಾರಾಡಿದ್ದವು ಚೆಡ್ಡಿ ಸ್ವಾಮಿಗಳು. ಈಗ ಸರ್ಕಾರದಲ್ಲಿರುವ ಚೆಡ್ಡಿ ಪಕ್ಷಕ್ಕೆ ಡೈವ್ ಹೊಡೆದು ಮುಖ ಮರೆಸಿಕೊಂಡಿವೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ ತದಡಿಯಲ್ಲಿ ಸ್ಥಾಪಿಸಲುದ್ದೇಶಿಸಿರುವ ಉಷ್ಣ ವಿದ್ಯುತ್ ಘಟಕಕ್ಕೆ ಮೊದಲಿಂದಲೂ ಜನರ ಪ್ರತಿರೋಧ ವ್ಯಕ್ತವಾಗುತ್ತಲೇ ಇದೆ. ಹಾಗೆಯೇ ಉಡುಪಿ ಬಳಿ ನಂದಿಕೂರ್‌ನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ನಾಗಾರ್ಜುನ್ ವಿದ್ಯುತ್ ಘಟಕಕ್ಕೂ ಪರಿಸರವಾದಿಗಳ ವಿರೋಧವಿದೆ. ಅಧಿಕಾರದಲ್ಲಿ ಇಲ್ಲದಿದ್ದಾಗ 'ಪರಿಸರ ಪರಿಸರ' ಎಂದು ಬೊಬ್ಬೆ ಹೊಡೆದ ಚೆಡ್ಡಿಗಳ ನಾಯಕರೀಗ ದೈತ್ಯ ಕಂಪನಿಗಳ ಪರ ನಿಂತಿದ್ದಾರೆ. ಬಿಜೆಪಿ ಬಾಬಾಗಳೆಂದೇ (ಕು)ಖ್ಯಾತರಾಗಿರುವ ಪೇಜಾವರ ಸ್ವಾಮಿ, ರಾಘವೇಶ್ವರಭಾರತಿ ಸ್ವಾಮಿಗಳು ಇನ್ನೊಂದಿಷ್ಟು ಮರಿ ಚೆಡ್ಡಿ ಸ್ವಾಮಿಗಳೊಂದಿಗೆ ಈಗ್ಗೆ ತಿಂಗಳ ಹಿಂದಷ್ಟೇ ತದಡಿಯಲ್ಲಿ ಸಮಾವೇಶ ಮಾಡಿ 'ಪ್ರಾಣತ್ಯಾಗ'ದ ಮಾತಾಡಿ ಹೋದವರು ಈಗ ಸಮಾವೇಶ ಮರೆತು ಚೆಡ್ಡಿ ವೇಷದಲ್ಲಿ ಮರೆಯಾಗಿದ್ದಾರೆ.

ಮೇ 20 ರಂದು ತದಡಿ, ನಾಗಾರ್ಜುನ ಯೋಜನೆಗಳ ಕುರಿತು ಸಮಾಲೋಚಿಸಲು ಮುಖ್ಯಮಂತ್ರಿ ಕರೆದಿದ್ದ ಸಭೆಗೆ ಗೈರು ಹಾಜರಾಗುವುದರ ಮೂಲಕ ಈ ಹಾರವ ಸ್ವಾಮಿಗಳು ತಾವು 'ಹಾರುಬೂದಿ'ಯಲ್ಲಿ ಮುಚ್ಚಿ ಹೋಗಿರುವುದನ್ನು ಸಾಬೀತು ಮಾಡಿವೆ.

ಯಡಿಯೂರಪ್ಪ, ವಿ.ಎಸ್. ಆಚಾರ್ಯರೆಲ್ಲ ಈಗ ಕುಮಾರಸ್ವಾಮಿಯ ಹಿಂದೆ ನಿಂತು ಎರಡೂ ಯೋಜನೆಗಳನ್ನು ಬೆಂಬಲಿಸುತ್ತಿರುವುದನ್ನು ಕಂಡು ಖುಷಿಗೊಂಡಿರುವ ಪೇಜಾವರ ಸ್ವಾಮಿ, ಬಿಜೆಪಿಗೆ ಇರುಸುಮುರುಸು ಮಾಡಬಾರದೆಂದು ಇತರ ಹಾರವಸ್ವಾಮಿಗಳಿಗೆ ಗುಪ್ತ ಸಂದೇಶ ಕಳಿಸಿದ್ದರಿಂದ ಎಲ್ಲ ಚೆಡ್ಡಿ ಸ್ವಾಮಿಗಳೂ ಸಿ.ಎಂ. ಮೀಟಿಂಗ್‌ಗೆ ಹಾಜರಾಗದೇ ವಿದ್ಯುತ್ ಸ್ಥಾವರಗಳ ಪರ ನಿಂತು, ಕರಾವಳಿ ಪರಿಸರದ ಮೇಲೆ ನಡೆಯುತ್ತಿರುವ ಅತ್ಯಾಚಾರಕ್ಕೆ ಪರೋಕ್ಷ ಬೆಂಬಲ ನೀಡಿವೆ.

4 ಸಾವಿರ ಮೆ. ವ್ಯಾಟ್ ವಿದ್ಯುತ್ ಉತ್ಪಾದಿಸಲು 16 ಸಾವಿರ ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಬೇಕೆಂದಿರುವ ತದಡಿ ವಿದ್ಯುತ್ ಘಟಕದಿಂದ ಪಶ್ಚಿಮ ಘಟ್ಟ ತತ್ತರಿಸಿ ಹೋಗಲಿದೆ.

ಉತ್ತರ ಕನ್ನಡದಲ್ಲಿ 'ವೃಕ್ಷ ಲಕ್ಷ' ಎಂಬ ಪರಿಸರ ಸಂಘಟನೆ ನಡೆಸುವ ಚೆಡ್ಡಿಗಳು ಯಾವ ಹೋರಾಟವನ್ನೂ ಒಂದು ತಾರ್ಕಿಕ ಅಂತ್ಯಕ್ಕೆ ಒಯ್ಯಲಿಲ್ಲ. ಹೋರಾಟಗಳನ್ನು ನಡು ನೀರಿನಲ್ಲಿ ಮುಳುಗಿಸುವುದೇ ಅವರ ನಿತ್ಯ ಚಾಳಿ.

ಈಗ ಹಾರವಸ್ವಾಮಿಗಳೂ ತಮ್ಮ ಸೋಗಲಾಡಿತನ ಮರೆದು ಜನರಿಂದ, ಪರಿಸರವಾದಿಗಳಿಂದ ಉಗಿಸಿಕೊಳ್ಳುತ್ತಿವೆ. ಚೆಡ್ಡಿ ಸ್ವಾಮಿಗಳೀಗ ಪರಿಸರ'ವ್ಯಾಧಿ'ಗಳು!

-ಮಲ್ಲಿ

ಎಂ.ಪಿ.ಪ್ರಕಾಶ್ ಬಗ್ಗೆ ನಿಮಗೇನು ಗೊತ್ತದ್ರಿ

ಬಿಸಿದ ಕರಡಿ ಬಡಾವಣೆಗೆ ನುಗ್ಗಿದಂತೆ ಈಶ್ವರಪ್ಪನೆಂಬ ಮಂತ್ರಿ ಮಂಡ್ಯದ ಮಾದೇಗೌಡರ ಮನೆಗೆ ನುಗ್ಗಿದ್ದರಂತಲ್ಲಾ, ಮಗನ ಅಭ್ಯುದಯಕ್ಕಾಗಿ ಎಸ್.ಎಂ. ಕೃಷ್ಣರಿಗೆ ತಮ್ಮ ದಕ್ಷ, ಪ್ರಾಮಾಣಿಕ ರಾಜಕಾರಣವನ್ನೇ ಪತ್ತೆಯಿಟ್ಟು ಮೂಲೆ ಸೇರಿದ್ದ ಮಾದೇಗೌಡರು, ಈಶ್ವರಪ್ಪನನ್ನು ಹಿಡಿದುಕೊಂಡು ಮುದ್ದಾಡಿ "ಏನೀಶ್ವರಪ್ಪ, ಕುಲಗೆಟ್ಟು ಬಂದಿದ್ದೀನಿ ಕೂಡಿಕೊ ಚಿಗಪ್ಪ ಅನ್ನಂಗೆ ನನ್ನ ಮನಿಗೆ ಬಂದ್ಯಲ್ಲಾ" ಎಂದರಂತಲ್ಲಾ, ಅದಕ್ಕೆ ಈಶ್ವರಪ್ಪ "ಏನಿಲ್ಲ ಗೌಡ್ರೆ ನಾನು ಬುದ್ಧಿ ಬಂದಾಗ್ಲಿಂದ ಆರೆಸ್ಸೆಸ್ಸಲ್ಲಿ ಇದ್ದುಕೊಂಡು ಕವಾಯ್ತು ಮಾಡಿಕೊಂಡು ಕಾಲಹಾಕಿಬುಟ್ಟೆ. ಆನಂತರ ಸಾಬರು, ದಲಿತ್ರು, ಹಿಂದುಳದೋರನ್ನ ಒಳಗೊಳಗೇ ದ್ವೇಷ ಮಾಡಿಕಂಡು ದಿನ ದೂಡಿಬುಟ್ಟೆ. ಮುಂದೆನೂ ಇಂತವೇ ದೇಶ ಸೇವೆ ಮಾಡಿಕೊಂಡು ಒಂದಿಷ್ಟು ಆಸ್ತಿ ಮಾಡಿಕೊಂಡು ಕಾಲ ಹಾಕಿಬುಡೋಣ ಅಂತ ಇದ್ದೆ, ನನ್ನ ಯಾವ ಜನ್ಮದ ಪುಣ್ಯನೊ, ದಿಢೀರಂತ ನೀರಿಗೆ ದುಮಿಕಿದಂಗೆ ನೀರಾವರಿ ಮಂತ್ರಿಯಾಗಿಬುಟ್ಟೆ. ಅದರ ಬಗ್ಗೆ ಏನೂ ಗೊತ್ತಿಲ್ಲ, ಹೇಗಿದ್ರು ನೀವು ಕಾವೇರಿ ನದಿ ಪಕ್ಕದಲ್ಲೇ ಇರದರಿಂದ ಸ್ವಲ್ಪ ಗೈಡ್ ಮಾಡ್ತಿರ" ಎನ್ನಲಾಗಿ, ಮಾದೇಗೌಡರು ಮೈದುಂಬಿಕೊಂಡು "ಅಯ್ಯೋ, ಅದಕೇನಂತೆ ಬಾ ಈಶ್ವರಪ್ಪ, ನೀನು ಪೋನ್ ಮಾಡಿದ್ರೆ ಸಾಕು ಕಾವೇರಿಯ ಯಂಗೆ ಹ್ಯಾಂಡ್ಲು ಮಾಡಬೇಕು ಅಂತ ಹೇಳಿ ಕೊಡ್ತಿನಿ" ಅಂದರಂತಲ್ಲಾ, ಥೂತ್ತೇರಿ!



****

ಅವುದುಗಚ್ಚೆ ತೆವಳುತ್ತಲೇ ಕುಮಾರಸ್ವಾಮಿ ಕುರ್ಚಿಯ ಪಕ್ಕ ಬಂದು ಕುಳಿತ ದೇವೇಗೌಡರು "ಇನ್ನು ಯಾರ ಟೀಕೆಗೂ ಉತ್ತರ ಕೊಡುವುದಿಲ್ಲ" ಎಂದರಂತಲ್ಲಾ, ನೆರೆದಿದ್ದ ಪತ್ರಕರ್ತರು "ಯಾರು ಟೀಕೆ ಮಾಡ್ತರೆ ಸಾರ್?" ಎಂದು ಪ್ರಶ್ನೆ ಎಸೆದಾಗ "ಯಾರಾದರೂ ಟೀಕೆ ಮಾಡಲಿ. ಬೇಕಾದರೆ ಇದು ಅಪ್ಪ ಮಗನ ಸರ್ಕಾರ ಎನ್ನಲಿ. ಅಂಥವರಿಗೆ ನೇರ ಉತ್ತರ ಕೊಡದೆ 'ತಮಿಳುನಾಡಿನ ಬಗ್ಗೆ ಏನು ಹೇಳ್ತೀರಿ?' ಎಂದು ಕೈ ಸನ್ನೆ ಮಾಡುವುದು ಬಿಟ್ಟರೆ ಬಾಯನ್ನೇ ಬಿಡುವುದಿಲ್ಲ, ಇನ್ನೇನಿದ್ದರೂ ಗಾಣದ ಎತ್ತಿನಂತೆ ಇಡೀ ಕರ್ನಾಟಕವನ್ನು ಸುತ್ತುತ್ತೇನೆ" ಎಂದರಂತಲ್ಲಾ, "ಕರ್ನಾಟಕವನ್ನು ಮತ್ತೆ ಸುತ್ತುವ ಅಗತ್ಯವಿದೆಯಾ ಸಾರ್?" ಎಂದು ಪತ್ರಕರ್ತರು ಪ್ರಶ್ನಿಸಲಾಗಿ, "ಹೌದು ನನ್ನ ಮಗ ಮಾಡಿದ್ದ ಕೆಲಸದ ಬಗ್ಗೆ, ನನ್ನ ಬಗ್ಗೆ ಜನರಿಗೆ ತಿಳಿವಳಿಕೆ ಹೇಳಬೇಕಾಗಿದೆ. ಒಂದು ತಪ್ಪು ಸಂದೇಶವನ್ನು ಸರಿಮಾಡಬೇಕಿದೆ" ಎಂದರಂತಲ್ಲಾ, "ತಪ್ಪು ಸಂದೇಶ ಯಾವುದು ಸಾರ್? ಎಲ್ಲಾ ಸರಿಯಾಗೇ ನಡೆದುಕೊಂಡೇ ಹೋಗ್ತಿದೆಯಲ್ಲಾ...." ಎಂದು ಪತ್ರಕರ್ತರು ಮತ್ತೂ ಪ್ರಶ್ನಿಸಬೇಕೆಂದು ಯೋಚಿಸುತ್ತಿರಬೇಕಾದರೆ, ಅವರ ಮುಖವನ್ನು ಗ್ರಹಿಸಿದ ಗೌಡರು "ನಮ್ಮ ಕುಮಾರ 'ತಂದೆಯವರ ಆಶೀರ್ವಾದ ಮತ್ತು ಆದೇಶದಂತೆ ನಡೆದುಕೊಂಡಿದ್ದೇನೆ' ಎಂದುಬಿಟ್ಟಿದ್ದಾನೆ. ಆದರೆ ನಾನು ಅನುಭವಿಸಿದ ಕಷ್ಟ ನನಗೇ ಗೊತ್ತು. ಅದನ್ನ ಈಗ ಜನರಿಗೆ ವಿವರಿಸಿ ಹೇಳಬೇಕಿದೆ" ಎಂದು ಮೂಗಿಗೆ ಬೆರಳಿಟ್ಟು ಕಣ್ಮುಚ್ಚಿದರಂತಲ್ಲಾ, ಥೂತ್ತೇರಿ!!



****

"ಎಂ.ಪಿ. ಪ್ರಕಾಶ್ ಮೈಕ್ ಸಿಕ್ಕಿದ್ರೆ ಚೆನ್ನಾಗಿ ಮಾತನಾಡ್ತರೇ ವರತು, ಪಾರ್ಟಿ ಸಂಘಟನೆ ಮಾಡಲ್ಲ, ಅವರ ಕಲೆ, ಸಾಹಿತ್ಯ, ಸಂಗೀತದ ಅಭಿರುಚಿಯಿಂದ ಪಾರ್ಟಿಗೇನೂ ಉಪಯೋಗವಾಗಲ್ಲ" ಎಂದು ಕುಮಾರಸ್ವಾಮಿ ಸಂಪುಟದ ದುಷ್ಟ ಚತುಷ್ಟಯರು ಮಾತನಾಡಿಕೊಂಡರೆಂಬ ಸುದ್ದಿ ನಮಗೆ ತಲುಪಿತಲ್ಲಾ, ಈ ಬಗ್ಗೆ ಕುಮಾರಸ್ವಾಮಿ ಎಡಬಲದಲ್ಲಿರುವ ಯಾವುದಾದರೂ ಮಂತ್ರಿಯನ್ನು ಕೇಳಿದರೆ ಹೇಗೆಂದು ಫೋನ್ ಮಾಡಿದರೆ, ಕುಮಾರಣ್ಣನ ಎಡಗೈ ತರದ ಮಂತ್ರಿಯೊಂದು ಸಿಕ್ಕೇಬಿಡಬೇಕೆ!

"ಹಲೋ ಸಾರ್, ನಾನು ಯಾಹೂ ಅಂತ ಸಾರ್."

"ಯಾಹೂ ಅಂದ್ರೆ ನೀವೇನು ಪ್ರಪಂಚಕ್ಕೆಲ್ಲಾ ಗೊತ್ತೇನ್ರಿ? ಯಾರೂ ಅಂತ ಸರಿಯಾಗೇಳ್ರಿ."

"ತಾವ್ಯಾರು ಸಾರ್?"

"ನಾನು ಮಿನಿಸ್ಟ್ರು ಕಂಡ್ರಿ."

"ನಮಸ್ಕಾರ ಸಾರ್, ನನಗೆ ನೀವೇ ಬೇಕಿತ್ತು ಸಾರ್. ನಾನು ನಿಮ್ಮ ಹಿತೈಷಿ, ಅಂದ್ರೆ ಪತ್ರಕರ್ತ."

"ಯಾವ ಪತ್ರಿಕೆ?"

"ಗೌರಿ ಲಂಕೇಶ್ ಪತ್ರಿಕೆ ಸರ್."

"ನಮ್ಮ ಚೆನ್ನಿಗಪ್ಪನ ಮ್ಯಾಲ್ಯಾಕೆ ಅಂಗೆ ಬರದಿದ್ದಿರಲ್ಲಾ?"

"ಇನ್ನು ಬರಿಯದು ಬೇಕಾದಷ್ಟಿದೆ ಸಾರ್."

"ಇದ್ಯಲ್ಲ ದಳ್ಳಿದಲ್ಲ, ಈಗ್ಲೆ ಹೇಳಿರತಿನಿ."

"ಗುಂಡೂರಾಯನ ಕಾಲದಿಂದ ನಿಮ್ಮ ತರದೋರನ್ನ ನೋಡದ್ದೀವಿ. ಅಂತ ಎಂ.ಪಿ. ಪ್ರಕಾಶರನ್ನೇ ಟೀಕೆ ಮಾಡ್ತಿರಿ. ನಿಮ್ಮದ್ದಾಪ ಲೆಕ್ಕ ಹೇಳಿ?"

"ಪ್ರಕಾಶ್ ಮ್ಯಾಲೆ ಏನಾರ ಬರಕಳಿ, ನಾವೇನು ಕೇಳಲ್ಲ."

"ಯಾಕೆ ಪ್ರಕಾಶ್ ನಿಮ್ಮ ಪಾರ್ಟಿಲಿಲ್ಲವೆ?"

"ಇದಾರೆ, ಇದ್ರು ಅವುರ ಮಾರ್ಗನೆ ಬ್ಯಾರೆ. ನಾಟಗ, ಸಾಯಿತ್ಯ, ಕಲೆ ತಗಂಡು ನಾವೇನು ಮಾಡದ್ರಿ? ಅದರಿಂದ ಪಾರ್ಟಿ ಕಟ್ಟಕಾಗ್ತದೆ? ಈ ಟೈಮಲ್ಲಿ ಸಂಘಟನೆ, ಹೋರಾಟ ಭಾಳ ಮುಖ್ಯ ಕಂಡ್ರಿ."

"ಪ್ರಕಾಶ್ ಬಗ್ಗೆ ನಿಮಗೊತ್ತಿಲ್ಲ ಅಂತ ಕಾಣ್ತದೆ."

"ನಮಿಗೊತ್ತಿಲ್ಲ ಅನ್ನಕ್ಕೋಗಬ್ಯಾಡಿ. ಅವುರು ನನ್ನಂಗೆ ಮಂತ್ರಿಯಾಗಿದ್ದು ಈಗ ಪಾರ್ಟಿ ಪ್ರೆಸಿಡೆಂಟ್ ಆಗ್ಯವರೆ. ಅದೂ ಗೌಡ್ರು ಮಾಡೋವತ್ತಿಗೆ ಆಗ್ಯವರೆ. ಅವುರ ಕ್ಯಪಾಸಿಟಿ ನೋಡಿ ಈಗ ಗೌಡ್ರು ಪಕ್ಷದ ಸಂಘಟನೆ ಮಾಡಕ್ಕೆ ಹ್ವಂಟವರೆ."

"ಅಂದ್ರೆ ಪ್ರಕಾಶ್‌ಗೂ ಗೇಟ್ ಪಾಸ್ ಕೊಡ್ತಿರಾ?"

"ನಾವು ಇದುವರೆಗೂ ಯಾರಿಗೂ ಗೇಟ್ ಪಾಸ್ ಕೊಟ್ಟಿಲ್ಲ ಕಂಡ್ರಿ. ಅವರೇ ತಿಳಕಂಡು ಹೋಗಬೇಕು. ಬರೋರು ಬರಬವುದು, ಹೋಗೋರು ಹೋಗಬವುದು."

"ನೀವನ್ನೊ ಮಾತು ಪ್ರಕಾಶ್‌ಗೂ ಅನ್ವಯಿಸುತ್ತ?"

"ನನ್ನನ್ನೂ ಸೇರಿಸಿ ಯಲ್ಲಾರಿಗೂ ಅನ್ವಯಿಸುತ್ತೆ ಕಂಡ್ರಿ."

"ಪ್ರಕಾಶರಂತ ಬುದ್ಧಿಜೀವಿಯಿಂದ ನಿಮ್ಮ ಪಾರ್ಟಿಗೊಂದು ಬೆಲೆ ಬಂದಿದೆ ಗೊತ್ತಾ?"

"ಅಯ್ಯೋ ಜಂಗಮನೆಂದ್ರಿ ಜಾಣೆ ಆದ್ರೆ ಜಗಕ್ಕೆ ಬಂದ ಭಾಗ್ಯ ಏನು ಅನ್ನಂಗೆ ಈಗ ಬುದ್ಧಿಗಿಂತ ಮುಂದಿನ ಚುನಾವಣೆಲಿ ದಳ ಗೆಲ್ಲಂಗೆ ಮಾಡಬೇಕು ಕಂಡ್ರಿ. ಅಂತ ಹೋರಾಟ ಪ್ರಕಾಶರಲ್ಲಿ ಇದ್ದತೆ ಅಂತ ನೋಡಬೇಕಾಗ್ಯದೆ."

"ಮಿಸ್ಟರ್ ಇವುರೆ, ಪ್ರಕಾಶ್ ಬಗ್ಗೆ ನಿಮಗೊತ್ತಿಲ್ಲ ಅಂತ ಕಾಣ್ತದೆ. ನೀವು ಹುಟ್ಟೊದಕ್ಕೂ ಮೊದ್ಲು ಅವುರು ಸೊಂಡೂರು ರೈತರನ್ನು ಸಂಘಟಿಸಿ ಹೋರಾಡಿದ್ರು, ಈ ರಾಷ್ಟ್ರದ ಹೋರಾಟಗಾರರನೆಲ್ಲಾ ಅಲ್ಲದೆ ಇಲ್ಲಿನ ಲಂಕೇಶ್, ತೇಜಸ್ವಿ, ನಂಜುಂಡಸ್ವಾಮಿ, ರಾಮದಾಸರನೆಲ್ಲಾ ಕರೆಸಿ ಸಭೆ ಮಾಡಿ ಸಮಾಜವಾದಿ ಸಂಘಟನೆ ಬೆಳೆಸಿದ್ರು."

"ಹೌದೇನ್ರಿ?"

"ಹೌದು ಕಂಡ್ರಿ. ನೀವು ಆದಿ ಚುಂಚನಗಿರಿ ಶಾಲೆಲಿ ಓದಿ ಪಾಸು ಅನ್ನಿಸಿಕೊಂಡು ಮನಿಗೆ ಬಂದ್ರಿ. ಅವುರು ಪೂನಾದವರಿಗೂ ಹೋಗಿ ಲಾ ಓದಿ ಬಂದವುರೆ."

"ಅಲ್ಲಿಗಂಟ ಯಾಕೋದ್ರು? ಇಲ್ಲೆ ಓದಬವುದಿತ್ತಲ್ಲ."

"ಅವುರ ತಂದೆನು ಎಮ್ಮೆಲ್ಲೆ ಆಗಿದ್ರು, ಗೊತ್ತ ನಿಮಗೆ?"

"ಇಲ್ಲ, ಯಾರವುರು?"

"ಮ, ಮ, ಪಾಟೀಲರು ಅಂತ. ಮಗನಿಗೆ ಒಳ್ಳೆ ಶಿಕ್ಷಣ ಸಿಗಲಿ ಅಂತ ಪೂನಾಕ್ಕೆ ಕಳಿಸಿ ಓದಿಸಿ ಲಾಯರ್ ಮಾಡಿದ್ರು. ಪ್ರಕಾಶ್ ರಾಜಕಾರಣದ ಜೊತೆಗೆ ಕಲೆ, ಸಾಹಿತ್ಯ ಸಂಗೀತದ ಬಗ್ಗೆ ಒಳ್ಳೆ ಅಭಿರುಚಿ ಬೆಳೆಸಿಕೊಂಡಿರೋದ್ರಿಂದ ಒಂದೊಂದು ಸತಿ ನಿಮ್ಮ ದಳದ ರಾಜಕಾರಣನೆ ಅವುರಿಗೆ ಕ್ಷುದ್ರವಾಗಿ ಕಾಣುತ್ತೆ. ನೀವೆಲ್ಲಾ ದೇವೇಗೌಡರ ಸುತ್ತ ಕುಳತಗೊಂಡು ಮಾತನಾಡದು ನೋಡಿದ್ರೆ ರಾಜಕೀಯದಿಂದ ನಿವೃತ್ತಿಯಾಗಿ ರಂಗಾಯಣ ಶುರು ಮಾಡ್ಲ ಅನ್ನಸುತ್ತೆ ಕಂಡ್ರಿ ಅವುರಿಗೆ."

"ರಂಗಾಯಣ ಅಂದ್ರೇನು?"

"ಮೈಸೂರಿಗೋಯ್ತಿರಲ್ಲ? ಕಲಾಭವನದ ಹಿಂಭಾಗಕ್ಕೋಗಿ ಕೇಳಿ. ರಂಗಾಯಣ ಅಂದ್ರೇನು ಅಂತ ಹೇಳ್ತರೆ."

"ಅಲ್ಲಿಗ್ಯಾಕೊಯ್ತರೆ ಪ್ರಕಾಶ್?"

"ಅಲ್ಲಿಗೋಗಲ್ಲ. ಪ್ರಕಾಶ್ ಮೈಕ್ ಸಿಕ್ಕಿದ್ರೆ ಮಾತ್ರ ಚೆನ್ನಾಗಿ ಮಾತಾಡ್ತರೆ, ಸಂಘಟನೆ ಆಗಲ್ಲ ಅಂದಿದ್ದಿರಲ್ಲಾ, ಅವುರು ಮನಸ್ಸು ಮಾಡಿದ್ರೆ ನೀವೆಲ್ಲಾ ಕಡೆ ಸಾಲಿಗೋಗೊ ತರ ಸಂಘಟನೆ ಮಾಡಬಲ್ಲರು. ಅದೂ ಅಲ್ಲದೆ, ನೀವು ನಾಲ್ಕೈದು ಜನ ಏನಿದ್ದೀರಿ, ನೀವೆಲ್ಲಾ ನಿಭಾಯಿಸ್ತಾಯಿರೊ ಅಷ್ಟೂ ಖಾತೆಗಳನ್ನ ಒಬ್ಬರೆ ಸರಾಗವಾಗಿ ನೋಡಿಕಳೊ ಶಕ್ತಿಯಿದೆ ಅವರಲ್ಲಿ."

"ಅಂಗಂತೀರಾ?"

"ಊ ಮತ್ತೆ, ಅದ್ಕೆ ದೇವೇಗೌಡ್ರು ಅವುರನ್ನ ಮಂತ್ರಿ ಮಾಡದೆ ದಿವಂಗತ ತಿಪ್ಪಣ್ಣನ ಜಾಗಕ್ಕೆ ಕೂರಿಸಿರದು."

"ಥೂತ್ತೇರಿ!!!"

-ಯಾಹೂ

ಜೀವನದ ಸಮರಾಂಗಣದಲ್ಲಿ ತಪ್ಪೆಂಬ ಧೂಳು ಬೀಳುವುದು ಸಹಜ -ಸ್ವಾಮಿ ವಿವೇಕಾನಂದ

ಚಾನೆಲ್ ಸಮರ

ETV ರವಿ ಔಟ್?



'ಹಾಯ್... ಹಲೋ... ಗುಡ್ ಈವನಿಂಗ್ ಮೈ ಡಿಯರ್ ಫ್ರೆಂಡ್ಸ್' ಎಂದು ದಿನಾಲು ಈಟಿವಿ ವೀಕ್ಷಕರನ್ನು ಮಾತನಾಡಿಸುತ್ತಿದ್ದ ರವಿ ಬೆಳಗೆರೆ ಹಾಗೂ ಈಟಿವಿ ನಂಟು ಮುರಿದು ಬೀಳುವ ಹಂತ ತಲುಪಿದೆ.

ಇದು ಜಗಳವಲ್ಲ! ಈಗೊ ಕ್ಲಾಷೂ ಅಲ್ಲ!! ಅಥವಾ ಕ್ರೈಂ ಡೈರಿ ಪ್ರೋಗ್ರಾಂನ ಪಾಪುಲಾರಿಟಿ ಬಿದ್ದು ಹೋಯಿತು ಎಂಬುದಕ್ಕೂ ಅಲ್ಲ!!!


ಬದಲಾಗಿ.....

'ನೀ ನನಗಿದ್ದರೆ ಮಾತ್ರ ನಾ ನಿನಗಿರ್ತೀನಿ' ಎಂಬ ಈಟಿವಿಯವರ ದಿಮ್ಯಾಂಡು. ಅಂದರೆ ತಮ್ಮ ಕೆಲಸವನ್ನೇ ರವಿ ಪ್ರಿಯಾರಿಟಿ ಮಾಡಿಕೊಳ್ಳಬೇಕು ಎಂಬ ಒತ್ತಡ ಈಟಿವಿ ಮ್ಯಾನೇಜ್‌ಮೆಂಟಿನದ್ದು. ಆದರೆ ಐದು ರವಿ ಬೆಳಗೆರೆಗಳು ಮಾಡಬೇಕಾದ ಬೆಟ್ಟದಷ್ಟು ಕೆಲಸಗಳನ್ನು ಒಬ್ಬನೇ ರವಿ ಬೆಳಗೆರೆ ಮೈ ಮೇಲೆಳೆದುಕೊಂಡಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಇದರಿಂದಾಗಿ ಎಲ್ಲವನ್ನೂ ಸಮಯಕ್ಕೆ ಸರಿಯಾಗಿ, ಪರಿಣಾಮಕಾರಿಯಾಗಿ ನಿಭಾಯಿಸಲಿಕ್ಕಾಗದೆ ಉಂಟಾಗಿರುವ ಕ್ರೈಸಿಸ್ ಇದು. ಸದ್ಯಕ್ಕೆ ಬೆಳಗೆರೆಯ 'ಕ್ರೈಂ ಡೈರಿ' ಪ್ರೋಗ್ರಾಂ ಈ ಬಿಕ್ಕಟ್ಟಿನಲ್ಲಿ ಸಿಕ್ಕುಬಿದ್ದಿದೆ. 'ರವಿ ಬೆಳಗೆರೆ ಈಟಿವಿಯಿಂದ ಔಟ್ ಅಂತೆ, ಆ ಜಾಗಕ್ಕೆ 'ಭಾನಾಮತಿ' ಖ್ಯಾತಿಯ ಶಶಿಧರ್ ಭಟ್ ಬರ್ತಾರಂತೆ' ಎಂಬ ರೂಮರ್ ಈಗ ಹಬ್ಬಲಿಕ್ಕೆ ಇದೇ ಕಾರಣವಾಗಿದೆ.

ಬಳಿದಾಳೆ ಈಶ

ನೀವು ಪ್ರತಿ ರಾತ್ರಿ ಹತ್ತು ಗಂಟೆಗೆ ಈಟಿವಿಯಲ್ಲಿ ಪ್ರಸಾರವಾಗುವ 'ಕ್ರೈಂ ಡೈರಿ' ವೀಕ್ಷಕರಾಗಿದ್ದರೆ ಒಂದೆರಡು ವಿಚಾರಗಳನ್ನಾದರೂ ಗಮನಿಸಿರುತ್ತೀರಿ. ಅದು ಒಂದೇ ಎಪಿಸೋಡು ಮತ್ತೆಮತ್ತೆ ರಿಪೀಟ್ ಆಗುವ ವಿಚಾರ. ಉದಾಹರಣೆಗೆ ಹೇಳಬೇಕೆಂದರೆ ಕೊಲೆ ಆರೋಪಿ ಗುಲ್ಬರ್ಗಾದ ಪದ್ಮಾವತಿ ಗುತ್ತೇದಾರ್ ಎಪಿಸೋಡು ಈಗಾಗಲೇ ಮೂರು ಬಾರಿ ರಿಪೀಟ್ ಆಗಿದೆ ಎಂದು ವೀಕ್ಷಕ ದೊರೆ ಗೊಣಗಾಡಿಕೊಂಡಿದ್ದು ಈಟಿವಿ ಮಾಲೀಕರಿಗೆ . ಗೊತ್ತಾಗಿತ್ತು. ಯಾರೋ ಸ್ವಾಮೀಜಿ ಮುಖಕ್ಕೇ ನಾಗರಹಾವು ಒಂದು ಸಾರಿ ಅಪ್ಪಳಿಸುವ ಇನ್ನೊಂದು ಎಪಿಸೋಡು ಹಲಬಾರಿ ಟೆಲಿಕಾಸ್ಟ್ ಆಗಿತ್ತು. ಚಾಮರಾಜಪೇಟೆಯ ಮಿಡಲ್‌ಕ್ಲಾಸ್ ಹೆಂಗಸೊಬ್ಬಳ ಮೈಮೇಲೆ ದೇವರು ಬಂದು ಅವಳು ನಡುರಸ್ತೆಯಲ್ಲೇ ದೆವ್ವದಂತೆ ಡ್ಯಾನ್ಸ್ ಮಾಡುವ, ಆದರೆ ರವಿಯ ಮಜಾ ನಿರೂಪಣೆಯಿದ್ದ ಒಂದೇ ಪ್ರೋಗ್ರಾಮೂ ಕೂಡಾ ರಿಪೀಟ್ ಆಗಿತ್ತು, ನೆನಪಿಸಿಕೊಂಡು ಹುಡುಕಿದರೆ ಕಳೆದ ಒಂದೇ ವರ್ಷದಲ್ಲಿ ರವಿಯ 'ಕ್ರೈಂ ಡೈರಿ'ಯ ಹಳೇ ಪುಟಗಳೇ ನಾಳಿನ ಹೊಸ ಪುಟಗಳನ್ನೂ ತುಂಬಿರುವ ಘಟನೆಗಳು ಇನ್ನೂ ಸಿಗಬಹುದೇನೊ. ಆದರೆ ದಿನದ ಇಪ್ಪತ್ತನಾಲ್ಕು ಗಂಟೆಗಳೂ ಟೆಲಿಕಾಸ್ಟ್ ಆಗುವ ಚಾನೆಲ್‌ಗಳಿಗೆ ಬಕಾಸುರನ ಹಸಿವಿರುತ್ತದೆ. ಒಂದು ಸಿನಿಮಾ ಹಾಕಿದರೆ ಅವತ್ತಿನ ಮೂರು ಗಂಟೆ ಹೇಗೋ ಖರ್ಚಾಗುತ್ತದೆ. ಆದರೆ ಸೀರಿಯಲ್ಲೂ, ಹೊಸ ರುಚಿ ಅಡುಗೆ, ಕ್ರೈಂ ಡೈರಿ ತರದವುಗಳ ಲೈಫು ಬರೇ ಮುವತ್ತು ನಿಮಿಷ. ನೆನ್ನೆಯ ಅಡುಗೆಯನ್ನೇ ನಾಳಿನ ಹೊಸ ರುಚಿ ಎಂದು ಬಡಿಸಲು ಹೋದರೆ ವೀಕ್ಷಕ ದೊರೆ ಒಪ್ಪಲಾರ. ಒಮ್ಮೆ ನೋಡುಗ ಬೇಸರಗೊಂಡು ಚಾನೆಲ್ ಬದಲಾಯಿಸಿದರೆ ಅಂತಾ ಕಾರ್ಯಕ್ರಮಕ್ಕೆ ಜಾಹಿರಾತುದಾರ ಬರಲ್ಲ. ಜಾಹೀರಾತು ಬರದಿದ್ದರೆ ಚಾನೆಲ್‌ನವರ 'ದುಡ್ಡಿನ ಕನಾಲ್' (ಕಾಲುವೆ) ಒಣಗಿ ತಿಜೋರಿ ತುಂಬಲ್ಲ.

ಹೀಗಿರುತ್ತದೆ ಈ ಟಿವಿ ಎಂಬ ಬಕಾಸುರನ ಹಸಿವು-ಹಾವಳಿ. ಇವೆಲ್ಲಾ ಪರಸ್ಪರ ಅವಲಂಬಿತ ಅಂಶಗಳು.



ಬಾಲಕೃಷ್ಣ ಕಾಕತ್ಕರ್

> ಇದು ಜಗಳವಲ್ಲ! ಈಗೊ ಕ್ಲಾಷೂ ಅಲ್ಲ!! ಅಥವಾ ಕ್ರೈಂ ಡೈರಿ ಪ್ರೋಗ್ರಾಂನ ಪಾಪುಲಾರಿಟಿ ಬಿದ್ದು ಹೋಯಿತು ಎಂಬುದಕ್ಕೂ ಅಲ್ಲ!!! ಬದಲಾಗಿ.....

ಅವರ್ನ ಬಿಟ್, ಇವರ್ನ ಬಿಟ್, ಇನ್ನಾರು?

ಬಾಲಕೃಷ್ಣ ಕಾಕತ್ಕರ್ ಮೊದಲಿಗೆ ಈಟಿವಿಯಲ್ಲಿ ಚಾಲೂ ಮಾಡಿದ್ದ 'ಕ್ರೈಂ ಡೈರಿ' ಮಿಂಚಿನ ವೇಗದಲ್ಲಿ ಪಾಪುಲರ್ ಆಗಿದ್ದ ಕಾರ್ಯಕ್ರಮ. ಇದು ಅತೀ ಬೇಗನೆ, ಈಟಿವಿಗೆ ಬೇಕಿದ್ದ ರಾಶಿರಾಶಿ ವೀಕ್ಷಕರನ್ನು ಲಕ್ಷ ಲಕ್ಷ ಜಾಹೀರಾತು ದುಡ್ಡನ್ನು ಗಳಿಸಲು ಶುರು ಮಾಡಿದಾಗ ಕಾಕತ್ಕರ್‌ಗೂ ಮ್ಯಾನೇಜ್‌ಮೆಂಟಿಗೂ ದುಡ್ಡಿನ ವಿಚಾರದಲ್ಲಿ ಜಗಳ ಬಂದಿತ್ತು. 'ಹೇಗೂ ಕ್ರೈಂ ಡೈರಿ ಚೆನ್ನಾಗಿ ದುಡೀತಿದೆ, ನನಗೊಂದಿಷ್ಟು ಜಾಸ್ತಿ ಕೊಡಿ' ಎಂದು ಕಾಕತ್ಕರ್ ಕೇಳಿದಾಗ ಈಟಿವಿ ಜನ 'ಆಗಲ್ಲ' ಎಂದು ಬಿಟ್ಟಿದ್ದರು. ಆಗಲೇ 'ಕ್ರೈಂ ಡೈರಿ' ರವಿ ಬೆಳಗೆರೆ ಕೈಗೆ ಬಂತು. ಕಾಕತ್ಕರ್ ಉದಯ ಟಿವಿಗೆ ಹೋಗಿ 'ಕ್ರೈಂ ಸ್ಟೋರಿ' ಚಾಲೂ ಮಾಡಿದರು.

ಕ್ರೈಂ ಡೈರಿಯಲ್ಲಿ ರವಿ ಬೆಳಗೆರೆ ಜೊತೆ ಶೃಂಗೇಶ್, ಸುನೀಲ್ ಹೆಗ್ಗರವಳ್ಳಿ ಇದ್ದರೆ 'ಕ್ರೈಂ ಸ್ಟೋರಿ'ಯ ಕಾಕತ್ಕರ್ ಟೀಂನಲ್ಲಿ ರಾ. ಪ್ರವೀಣ್, ಬಿ. ನಾರಾಯಣ ಮತ್ತಿತರರಿದ್ದರು. ಈ ತಂಡಗಳು ಕಳೆದ ಕೆಲ ವರ್ಷಗಳಲ್ಲಿ ಕರ್ನಾಟಕದ ಮೂಲೆ ಮಡುಕುಗಳನ್ನೊಂದೂ ಬಿಡದೆ ಜಾಲಾಡಿ ಕೊಲೆ, ರೇಪು, ಮೋಸ, ಮಾಫಿಯಾ, ಹಲ್ಕಾ ಸ್ವಾಮಿಗಳು ಹೀಗೆ ನೂರಾರು ಕ್ರೈಂ ಕತೆಗಳನ್ನು ಶೂಟ್ ಮಾಡಿ ಕನ್ನಡಿಗರಿಗೆ ಪ್ರತಿ ದಿನ 'ನಾನ್‌ವೆಜ್' ರಾತ್ರಿಯೂಟ ಬಡಿಸಿದ್ದಾರೆ. ಇದರಲ್ಲಿ ಅಳು ಬರಿಸುವಂತವು, ವ್ಯಥೆ ತರುವಂತವು, ಮಾನವೀಯತೆ, ತಿಳುವಳಿಕೆ ಮೂಡಿಸುವಂತವು ಇದ್ದಂತೆಯೇ ತೀರಾ ಹಸಿ ಹಿಂಸೆ ಕ್ರೌರ್ಯದ ಘಟನೆಗಳೂ ಬಂದು ಹೋಗಿವೆ. ಜನ ಇತ್ತೀಚೆಗೆ ಎಷ್ಟು ಸಿನಿಕರಾಗತೊಡಗಿದ್ದಾರೆಂದರೆ ಒಂದು ಅನಾಹುತ ನಡೆದು ಹೆಣ ಬಿದ್ದರೆ 'ಅರ್ಜೆಂಟಾಗಿ ಕ್ರೈಂ ಡೈರಿ, ಕ್ರೈಂ ಸ್ಟೋರಿಯವರನ್ನು ಕರೀರಿ' ಎನ್ನುವ ಹಂತಕ್ಕೆ ತಲುಪಿದ್ದಾರೆ. ಈ ಮೊದಲೆಲ್ಲಾ ಇದೇ ಜನ 'ಮೊದಲು ಪೋಲೀಸರ್ನ ಕರೀರಿ' ಎನ್ನುತ್ತಿದ್ದರು.

ಇರಲಿ.....

ನಾಳೆ ಒಂದು ವೇಳೆ ರವಿ ಬೆಳಗೆರೆ ಜಾಗಕ್ಕೆ ಶಶಿಧರ್ ಭಟ್ ಬಂದರೂ ಹೀಗೇ ಇರುತ್ತಾ, ಇಲ್ಲಾ ವ್ಯತ್ಯಾಸ ಕಾಣಿಸಬಹುದೇ ಎನ್ನಲು ಕಾದು ನೋಡಬೇಕಷ್ಟೇ. ಆದರೆ ಟಿವಿ ಚಾನೆಲ್‌ಗಳಿಗೆ ಪ್ರತಿದಿನ ಇಂಥಾ ಕ್ರೈಂ ಘಟನೆಗಳ ಎಪಿಸೋಡು ಮಾಡಿಕೊಡಬೇಕೆಂದರೆ ಒಂದೋ ಅಂತಾ ಘಟನೆಗಳು ನಡೆಯಬೇಕು, ಅವು ಮುಂದೆ ಕೋರ್ಟ್ ವಿಚಾರಣೆಗೋ ಪೋಲೀಸ್ ತನಿಖೆಗೋ ಅಡಚಣೆ ಉಂಟು ಮಾಡುವಂತಿರಬಾರದು, ಎಪಿಸೋಡು ರೆಡಿ ಮಾಡುವವರು ತಾವೇ ಜಡ್ಜ್‌ಮೆಂಟ್ ಹೇಳುವಂತಿರಬಾರದು ಎಂದೆಲ್ಲಾ ರಗಳೆಗಳಿರುತ್ತವೆ.

ಇದೆಲ್ಲದಕ್ಕಿಂತಾ ಮುಖ್ಯವಾಗಿ ದಿನಾ ಅರ್ಧ ಗಂಟೆಯ ಟಿವಿ ಎಪಿಸೋಡು ರೆಡಿ ಮಾಡಿಕೊಡುವವರು ಕನಿಷ್ಠ ಅರ್ಧ ದಿನವಾದರೂ ಅದರಲ್ಲಿ ಮುಳುಗೇಳಬೇಕಾಗುತ್ತದೆ. ಕಾಕತ್ಕರ್‌ಗೆ ಕ್ರೈಂ ಸ್ಟೋರಿಯ ಒಂದೇ ಕಮಿಟ್‌ಮೆಂಟ್ ಇರೋದರಿಂದ ಅವರು ಅದನ್ನು ಆರಾಮಾಗಿ ನಿಭಾಯಿಸುತ್ತಿದ್ದಾರೆ. ಆದರೆ ರವಿ ಬೆಳಗೆರೆ ಪರಿಸ್ಥಿತಿ ಅಷ್ಟು ಸಲೀಸಾಗಿಲ್ಲ. ಹಾಯ್ ಬೆಂಗಳೂರು ಪತ್ರಿಕೆ, ಅದರಲ್ಲಿ ಕನಿಷ್ಠ ಆರೆಂಟು ಪುಟಗಳ ಬರವಣಿಗೆ, ಪ್ರಾರ್ಥನಾ ಸ್ಕೂಲ್, ಮಕ್ಕಳ ಫ್ರೀಡಂ ಡೇ ಪೆರೇಡೂ, ಬೋರ್ ಹೊಡೆಸುತ್ತಿರುವ 'ಮುಕ್ತಾ' ಸೀರಿಯಲ್‌ನಲ್ಲಿ ಜಡ್ಜ್ ಡ್ಯೂಟಿ, ಈ ಮಧ್ಯೆ ಒಂದೆರಡು ಸಿನಿಮಾಗಳಲ್ಲಿ ನಟನೆ, ಡಿಮ್ಯಾಂಡ್ ಇರುವ ಮಾಸಿಕ 'ಓ ಮನಸೇ' ತರಲಾರದಷ್ಟು ಬ್ಯುಸಿ, ರವಿಯ ಖಾಯಂ ಕೆಲಸ ಈಪಾಟಿ....!

ಇದರ ಜೊತೆಯಲ್ಲಿ ಫೇಲಾದವರಿಗಾಗಿ ಕಾಲೇಜು, ಏಡ್ಸ್ ರೋಗಿಗಳಿಗೊಂದು ಆಸ್ಪತ್ರೆ ಕನಸು, ಮೂರು ತಿಂಗಳಿಗೊಂದು ಪುಸ್ತಕ ಹೆರುವ ಸೊಗಸು... ಇಷ್ಟು ಸಾಲದೆಂಬಂತೆ ವಾರಕ್ಕೊಮ್ಮೆ ವಿಜಯ ಕರ್ನಾಟಕದಲ್ಲಿ ಕಾಲಂ ಬರೆಯುವ ಆಟ, ಇವೆಲ್ಲಕ್ಕೂ ಕಳಶವಿಟ್ಟಂತೆ ದಿನಾ ಕ್ರೈಂ ಸೀರಿಯಲ್ ಮಾಡಿಕೊಡಲೇ ಬೇಕಾದ ಓಟ....

ಎಂಥಾ ಶಕ್ತಿಶಾಲಿ, ದಕ್ಷ ಮನುಷ್ಯನಾದರೂ ಕಂಗಾಲಾಗಲೇಬೇಕಾದಷ್ಟು ರಾಶಿ ಕೆಲಸವಿದು. ಈ ಗಡಿಬಿಡಿಯಲ್ಲೇ ಈಟಿವಿಯ ಕ್ರೈಂ ಡೈರಿಯ ಕೆಲವು ಎಪಿಸೋಡ್‌ಗಳನ್ನು ರವಿ ರಿಪೀಟ್ ಮಾಡಿದ್ದಾರೆ. ಅಷ್ಟೇ ಅಲ್ಲ ಹಾಯ್‌ನ ಮೂರನೇ ಪುಟದಲ್ಲಿ ಪ್ರಕಟವಾದ ಬಾಟಮ್ ಐಟಂಗಳೇ ಮುಂದೊಂದು ದಿನ ವಿಜಯ ಕರ್ನಾಟಕದ ಕಾಲಂಗಳಾಗಿ ಪ್ರಿಂಟಾಗಿರುವುದೂ ಉಂಟು.

ರವಿ ಬೆಳಗೆರೆಗೂ ಈಟಿವಿಗೂ ಸಮಸ್ಯೆ ಹುಟ್ಟಿಕೊಂಡಿರುವುದು ಈ ವಿಚಾರದಲ್ಲೇನೆ. ಒಬ್ಬ ಮನುಷ್ಯ ಎಷ್ಟೇ ಪ್ರತಿಭಾವಂತನಿರಬಹುದು, ಹಗಲು-ರಾತ್ರಿ ದುಡಿಯುವ ಉತ್ಸಾಹವೂ ಇದ್ದಿರಬಹುದು ಜನರಿಗೆ ಮೊಗೆ ಮೊಗೆದು ಕೊಡಲು ಸಮುದ್ರದಷ್ಟು ವಿಷಯಗಳೂ ಇರಬಹುದು, ಆತನ ಕೈಲಿರುವ ಪಾತ್ರೆಯೂ ಅಕ್ಷಯ ಪಾತ್ರೆಯೇ ಆಗಿರಬಹುದು.

ಆದರೆ, ಅವನ್ನೆಲ್ಲಾ ಅತ್ತಲಿಂದ ಎತ್ತಿ ಇತ್ತ ಕಡೆಗೆ ದಾಟಿಸುವುದು 'ಕೈ' ತಾನೆ, ಅದಕ್ಕೆ ಸುಸ್ತಾಗದಿರುತ್ತದೆಯೇ?

ಚಾನೆಲ್ ಸಮರ ಶುರು

ಕನ್ನಡದಲ್ಲೀಗ ಹೊಸ ಟಿವಿ ಚಾನೆಲ್‌ಗಳ ಭರ್ತಿ ಭರಾಟೆ.

ಸನ್ ನೆಟ್‌ವರ್ಕಿನ ಉದಯ, ಉಷೆ, U2, ರಾಮೋಜಿರಾಯರ ಈಟಿವಿ ಈಗಾಗಲೇ ಬುಡಭದ್ರ ಮಾಡಿಕೊಂಡಿವೆ. ಈಗ ತಾನೆ ಝೀ ಟಿವಿ ಬಂದಿದೆ. ಇನ್ನೇನು ಚಾನೆಲ್ 9 ತೆರೆ ಮೇಲೇರಲಿದೆ. ಮುಖ್ಯಮಂತ್ರಿ ಕುಮಾರಸ್ವಾಮಿಗಳ ಕನ್ನಡ ಕಸ್ತೂರಿ ನವೆಂಬರ್‌ನಲ್ಲಿ ಅಂತಾ ತೀರ್ಮಾನವಾಗಿದೆ. ಇದರ ಜೊತೆಗೆ ಸ್ಟಾರ್ ಟಿವಿಯವರೊಂದು, ಸೋನಿಯದೊಂದು ಚಾನಲ್ ಶುರು ಅಂತೆ ಎಂಬ ಸುದ್ದಿಗಳಿವೆ. ಕರ್ನಾಟಕದ ಜಾಹಿರಾತು ಮಾರ್ಕೆಟ್ ನಾನ್ನೂರು ಕೋಟಿ ರೂಪಾಯಿಗಳಷ್ಟಿದೆ ಎಂಬುದೇ ಈ ಚಾನೆಲ್ ಭರಾಟೆಗೆ ಮೂಲ ಪ್ರೇರಣೆ. ಇದರ ಲಾಭ-ನಷ್ಟಗಳ ಲೆಕ್ಕಾಚಾರಗಳೇನೇ ಇರಲಿ ಇಷ್ಟು ಹೊಸ ಚಾನೆಲ್‌ಗಳು ನಿಜಕ್ಕೂ ಶುರುವಾಗಿಯೇ ಬಿಟ್ಟರೆ ಜರ್ನಲಿಸಂ ಕಲಿತವರಿಗೆ, ಅನುಭವಿಗಳಿಗೆ, ಹೊಸಹೊಸ ಐಡಿಯಾ ಇರುವವರಿಗಂತೂ ಒಳ್ಳೇ ಛಾನ್ಸ್ ಅಷ್ಟೆ.

ಶಶಿಧರ್ ಭಟ್ ಎಂಟ್ರಿ ಯಾವಾಗ

'ಈ ವಾರದಲ್ಲಿ ಕನ್‌ಫರ್ಮ್ ಆಗುತ್ತೆ' ಎನ್ನುತ್ತಿದ್ದಾರೆ ಶಶಿಧರ್ ಭಟ್. ಈಟಿವಿ ಮ್ಯಾನೇಜ್‌ಮೆಂಟ್ ಹಾಗೂ ಅದೇ ಚಾನೆಲ್ಲಿನಲ್ಲಿ 'ಭಾನಾಮತಿ' ಪ್ರೋಗ್ರಾಂ ಮಾಡುತ್ತಿರುವ ಶಶಿಧರ್ ಭಟ್ ನಡುವೆ ಈಗಾಗಲೇ ಎರಡು ಸುತ್ತಿನ ಮಾತುಕತೆ ಆಗಿದೆ. ಒಂದು ವೇಳೆ ಇನ್ನು ಮುಂದೆ 'ಕ್ರೈಂ ಡೈರಿ' ರವಿ ಬೆಳಗೆರೆ ಕೈಲಿರುವುದಿಲ್ಲ ಎಂದು ಅಖೈರಾಗಿ ತೀರ್ಮಾನವಾಗಿ ಹೋದರೆ ಅದರ ಮಾರನೇ ದಿನವೇ ಶಶಿಧರ್ ಭಟ್ ಎಂಟ್ರಿ ತೆಗೆದುಕೊಳ್ಳುವುದು ಗ್ಯಾರಂಟಿ. ಅವರ ಜೊತೆ 'ಭಾನಾಮತಿ'ಗೆ ಚಿತ್ರದುರ್ಗದಲ್ಲಿ ಚಳ್ಳಕೆರೆ ಬಸವರಾಜ್, ಶಿವಮೊಗ್ಗದ ರಾಜೇಶ್ ಕಾಮತ್, ಕೊಪ್ಪಳದಲ್ಲಿ ಅಲ್ಲಾ ಗಿರಿರಾಜ, ತುಮಕೂರಿನಲ್ಲಿ ಆರಾಧ್ಯ ಕೆಲಸ ಮಾಡುತ್ತಿದ್ದು ಸಾಕಷ್ಟು ಅನುಭವಿಗಳ ಟೀಂ ಎನಿಸಿಕೊಂಡಿದ್ದಾರೆ. ಜೊತೆಗೆ ಶಶಿಧರ್ ಭಟ್‌ಗೆ ತಮ್ಮದೇ ಸ್ಟುಡಿಯೋ ಸಹ ಇದೆ. ಈಗ್ಗೆ 2 ವರ್ಷಗಳ ಹಿಂದೆ 'ಭಾನಾಮತಿ' ಶುರುವಾದಾಗ ಆ ತರದ ಟಿವಿ ಪ್ರೋಗ್ರಾಂ ಅದೊಂದೇ ಆಗಿತ್ತು, ನಂತರ ಝೀ ಟೀವಿ 'ಮಾನೋ ಯಾ ನಾ ಮಾನೋ', ಇನ್ನೊಂದು ಚಾನೆಲ್‌ನವರು 'ಕಾಲ್ ಕಪೂಲ್' ಎಂಬಿತ್ಯಾದಿ ಅದೇ ಕಾನ್ಸೆಪ್ಟಿನ ಪ್ರೋಗ್ರಾಂ ಶುರು ಮಾಡಿದ್ದರು. ಶಶಿಧರ್ ಭಟ್‌ರ ಪ್ರೋಗ್ರಾಂಗಳ ಪೈಕಿ ಮೈಸೂರು ಗಡಿಯಲ್ಲಿ ನಡೆಯುವ 'ಬಲಿಹಬ್ಬ', ಗಾಣಗಾಪುರದಲ್ಲಿ ಮಹಿಳಾ ಭಕ್ತರು ದೇವರಿಗೇ ಹೀನಾಮಾನ ಬೈಯುವ ಎಪಿಸೋಡುಗಳು ಜನರ ಕಣ್ಣು ತೆರೆಸುವಂತಿದ್ದವು.



ಮೂಢನಂಬಿಕೆ, ಕಂದಾಚಾರಗಳ ಒಳಹೊಕ್ಕು, ಅದಕ್ಕೊಂದು ಮಾನವೀಯತೆಯ, ವೈಚಾರಿಕತೆಯ ಒಳನೋಟ ನೀಡುತ್ತಿದ್ದರು ಭಟ್.

ಈ ಮಧ್ಯೆ ಈಟಿವಿಯೊಂದಿಗೆ ಸಂಬಂಧ ಸರಿಮಾಡಿಕೊಳ್ಳಲು ರವಿ ಬೆಳಗೆರೆ ಮತ್ತೆ ಯತ್ನಿಸುತ್ತಿರುವ ರೂಮರ್ ಸಹ ಇದೆ. ಕೊನೆಗೆ ಅದಾಗದೇ ಹೋದರೆ....


ರವಿ, ಹೊಸದಾಗಿ ಶುರುವಾಗಿರುವ ಝೀ ಕನ್ನಡ ಚಾನಲ್‌ಗೆ ಹೋಗುತ್ತಾ... ರಂತೆ!

ಬುದ್ಧ ನಕ್ಕಿದ್ದಾ... ಖರ್ಗೆ ಮುಕ್ಕಿದ್ದಾ...

ನ್ನೆ ಮೇ 13 ರಂದು ಗುಲ್ಬರ್ಗಾದಲ್ಲಿ ಬೌದ್ಧ ಎಂಬ ಅತ್ಯಾಧುನಿಕ ಹೈಟೆಕ್ ಕಟ್ಟಡವೊಂದನ್ನು [illegible] ಲಾಮಾ [illegible] ಉದ್ಘಾಟಿಸಿದ್ದಾರೆ. [illegible]ನಿಂದ ದುಬಾರಿ ಬುದ್ಧ export ಆಗುವು [illegible]. ಖರ್ಗೆಯವರು ಬುದ್ಧನನ್ನು ತಮ್ಮ [illegible] ಬೌದ್ಧ ವಿಹಾರದಲ್ಲಿ ಬಂಧಿಸಿಟ್ಟು [illegible] ಹೇಸರುಗಳಲ್ಲಿ ಮಿಂಚಲಿದ್ದಾರೆ. ಸರ್ಕಾರಿ [illegible] ಸೇರಿದ ನೀರಾವರಿ ಇಲಾಖೆ ಇಂಜಿನಿ[illegible] ಹಡಬೆ ಹಣವನ್ನು ಬುದ್ಧನ ಪಾದಕ್ಕೆ [illegible] ಸುರಿದ್ದರೆ ಖರ್ಗೆ ಖುಷಿಗೊಂಡು ನಗುತ್ತಿದ್ದಾರೆ. ಹೈದರಾಬಾದ್ ಕರ್ನಾಟಕದ ನೀರಾವರಿ [illegible]ನೆಗಳು ನೆನೆಗುದಿಗೆ ಬೀಳುತ್ತಲೇ ಇರುತ್ತವೆ. [illegible]ಬದು ಅಧೋಗತಿಗಿಳಿದು ಜನ ಗೋವಾಕ್ಕೋ, [illegible]ರಿಗೋ ಗುಳೆ ಹೋಗುತ್ತಲೇ ಇರುತ್ತಾರೆ. ಕ್ರೂರ ಸನ್ನಿವೇಶದಲ್ಲಿ ಕೋಟ್ಯಂತರ ಹಣ ಮಾಡಿ ಖರ್ಗೆ ಸಾಹೇಬರು ಬೃಹತ್ ಬೌದ್ಧ [illegible] ನಿರ್ಮಿಸಿದ್ದಾರೆ.

ಬುದ್ಧನಿಗೇ ಪರ್ಸೆಂಟೇಜೆ?

[illegible]ನಸೇವೆಯೊಂದನ್ನು ಬಿಟ್ಟು ಎಲ್ಲವನ್ನೂ ವ್ಯವಸ್ಥಿತ[illegible] ಮಾಡುವ ಖರ್ಗೆ ಇಲ್ಲೂ ತಮ್ಮ 'ದಕ್ಷತೆ' [illegible]ದ್ದಾರೆ. ತಮ್ಮ ಕುಟುಂಬದ ಸದಸ್ಯರೇ ತುಂಬಿರುವ [illegible] ವಿಹಾರ ಟ್ರಸ್ಟ್' ರಚಿಸಿರುವ ಖರ್ಗೆ ಬುದ್ಧನ [illegible] ಭೂಮಿ ಕಬಳಿಸಲು ಯೋಜನೆ ರೂಪಿಸಿ[illegible]ಯಾಗಿದ್ದಾರೆ. ಎಲ್ಲವನ್ನೂ ಸ್ವಹಿತಾಸಕ್ತಿಗೋಸ್ಕರವೇ [illegible]ತ್ತಾ ಬಂದಿರುವ ಖರ್ಗೆ [illegible]ರಿಗೆ ಬುದ್ಧನೂ ಬಂಡ[illegible]. ಬುದ್ಧನ ಹೆಸರಲ್ಲಿ ಸರ್ಕಾರಿ [illegible] ಗಿಟ್ಟಿಸಿಕೊಳ್ಳುವುದೇ ಏಕೈಕ [illegible] ಹುನ್ನಾರವಿಲ್ಲಿ. [illegible] ಜಿಲ್ಲಾಡಳಿತದಿಂದ 250




ಯೋಜನೆಗಳೂ ಹಳ್ಳ ಹಿಡಿಯುವಂತೆ ಮಾಡಿಬಿಟ್ಟರು. ಈ ರುದ್ರಯ್ಯ ಎಂಬ ಭ್ರಷ್ಟನಿಗೆ ನಾಲ್ಕೈದು ಇನ್‌ಚಾರ್ಜ್ ಹುದ್ದೆಗಳಿವೆ. ಅಸಿಸ್ಟೆಂಟ್ ಕಮಿಷನರ್ ರಮೇಶ್ ಬೇಗಾರನೂ ಖರ್ಗೆಯ ಕಳ್ಳಮರಿಯೇ. ಕಾಲುವೆಗಳ ನಿರ್ವಹಣೆಗೆಂದು ಪ್ರತಿ ವರ್ಷ ಬಿಡುಗಡೆಯಾಗುವ ನಿಧಿಯನ್ನು ಖರ್ಗೆಯ ದುಷ್ಟಪಡೆ ಗುಳುಂ ಮಾಡುತ್ತಲೇ ಇದೆ. ಜಲಸಂಪನ್ಮೂಲ ಸಚಿವರಾಗಿದ್ದಾಗ ಖರ್ಗೆ "ಮೇಂಟೆನೆನ್ಸ್ ವರ್ಕ್ ಏನೂ ಮಾಡಬ್ಯಾಡ್ರಿ... ಸುಮ್ನೆ ವೋಚರ್ ಹಾಕಿ, ಬಿಲ್ ಎತ್ತಿ... ನಿಮ್ ಪಾಲಿಂದು ನೀವ್ ತೊಗೊಂಡು ಉಳಿದಿದ್ ರೊಕ್ಕಾನೆಲ್ಲ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಕೊಟ್ ಬಿಡ್ರಿ" ಎಂದು ಇಂಜಿನಿಯರ್‌ಗಳಿಗೆ ಆದೇಶ ನೀಡಿ ಇಡೀ ಹೈದರಾಬಾದ್ ಕರ್ನಾಟಕದ ರೈತರ ಹೊಟ್ಟೆಗೆ ಕಲ್ಲು ಹಾಕಿಬಿಟ್ಟಿದ್ದಾರೆ. ಸಚಿವನೇ ಎಂಜಲಿಗೆ ಬಾಯಿ ತೆರೆದು ಬೇಡುತ್ತಿರುವಾಗ ಕಳ್ಳ ಕುಲದ ಇಂಜಿನಿಯರ್‌ಗಳು ಅದ್ಹೇಗೆ ಸುಮ್ಮನಿರುತ್ತವೆ ಹೇಳಿ? ಕಾಲುವೆಗಳ ದುರಸ್ತಿ ಮಾಡದೆಯೇ ವೋಚರ್ ಹರಿದು ಬಿಲ್ ಎತ್ತಿದರು, ಕೆರೆಗಳ ಹೂಳು ತೆಗೆಸದೇ ಅಲ್ಲೂ ಸಾಕಷ್ಟು ನೀರು ಕುಡಿದರು. ಇತ್ತೀಚೆಗೆ ಈ ರೀತಿ ಹಡಬೆ ಸಂಪತ್ತು ಮಾಡಿದ ಇಂಜಿನಿಯರ್ ಮಲ್ಲಿಕಾರ್ಜುನ ಸಂಗಾವಿಯೊಬ್ಬನನ್ನಷ್ಟೇ ಸಸ್ಪೆಂಡ್ ಮಾಡಿ ಉಳಿದವರಿಗೆ 'ಆಶ್ರಯ' ನೀಡಲಾಗಿದೆ. ಖರ್ಗೆಯವರ ಆದೇಶದಂತೆ ಆರ್. ರುದ್ರಯ್ಯನೆಂಬ ಕಳ್ಳರ ಕಳ್ಳನ ಕೈಗೆ

ಮುಂದಿನ ಕುತಂತ್ರಗಳೇನು ಖರ್ಗೆ?

ಈಗ [illegible] ಎತ್ತಿರುವ ಬೌದ್ಧ ವಿಹಾರಧಾಮ ನೋಡಿದರೆ [illegible] ಇಡೀ ದಕ್ಷಿಣ ಭಾರತದಲ್ಲೇ ಇದು ಎರಡನೇ ದೊಡ್ಡ ವಿಶಿಷ್ಟ ಆರ್ಕಿಟೆಕ್ಚರ್ ಬಿಲ್ಡಿಂಗ್ ಅಂತೆ! ಅತ್ಯಂತ ವಿಶಾಲ ಸಭಾಂಗಣ, ಧ್ಯಾನ ಕೇಂದ್ರ, ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆ ಹೊಂದಿರುವ ಇಲ್ಲಿ ಮುಂದೇನು ಮಾಡಲಿದ್ದಾರೆ ಎಂದು ನಿಮಗೆ ಕುತೂಹಲವೆ? ಆದರೆ ಗುಲ್ಬರ್ಗಾದ ಜನರಿಗೆ ಈಗಲೇ ಗೊತ್ತಾಗಿದೆ: ಇಲ್ಲೊಂದು ಸಿದ್ಧಾರ್ಥ ಎಜುಕೇಷನ್ ಟ್ರಸ್ಟ್ ಏಳುತ್ತದೆ, ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕಾಲೇಜು ಶುರುವಾಗುತ್ತದೆ. ಸರ್ಕಾರದ ಇಡೀ ಭೂಮಿ ಖರ್ಗೆ ಪಾಲಾಗುತ್ತದೆ.

ಈಗಾಗಲೇ ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿ ಮೂಲಕ ಗುಲ್ಬರ್ಗಾದ ಗಾರ್ಡನ್ ಜಾಗಗಳನ್ನೆಲ್ಲ ಕಬಳಿಸಿ ಕಾಲೇಜುಗಳನ್ನು ಕಟ್ಟಿರುವ ಖರ್ಗೆ, ನಗರದ ಮಧ್ಯಭಾಗದಲ್ಲಿದ್ದ ಪ್ರತಿಷ್ಠಿತ ಸರ್ಕಾರಿ ಪದವಿ ಕಾಲೇಜನ್ನು ನಗರದಿಂದ ಹೊರಕ್ಕೆ 3 ಕಿ.ಮೀ. ದೂರದ ಕುಸನೂರಿಗೆ ವರ್ಗಾಯಿಸಿ, ನಗರ ಮಧ್ಯಭಾಗದಲ್ಲಿ ತಮ್ಮ ಜೂನಿಯರ್ ಕಾಲೇಜ್, ಲಾ ಕಾಲೇಜ್ ಎಬ್ಬಿಸಿದ್ದಾರೆ.

ಈಗ ಬುದ್ಧನ ಹೆಸರಲ್ಲಿ 250 ಎಕರೆ ಜಾಗವನ್ನೇ ಸ್ವಾಹಾ ಮಾಡಿ ತಮ್ಮ ಕಬಳಿಕೆಯ ವೃತ್ತಾಂತಕ್ಕೆ ಹೊಸ ಅಧ್ಯಾಯ ಬರೆದುಕೊಂಡಿದ್ದಾರೆ ಖರ್ಗೆಜೀ!



ಭೂಮಿಯನ್ನು ಟ್ರಸ್ಟ್ ಹೆಸರಿನಲ್ಲಿ ಲೀಸ್‌ಗೆ [illegible], ಆ ಜಾಗದಲ್ಲಿ ಭವ್ಯ ಬೌದ್ಧ ವಿಹಾರ ಕಟ್ಟಿಸಿದ್ದಾರೆ. [illegible], ನಿರ್ಮಾಣದಲ್ಲಿ ಭವ್ಯವಾಗಿರುವ ಈ ಕಟ್ಟಡ [illegible] ಭ್ರಷ್ಟ ಇಂಜಿನಿಯರ್‌ಗಳ ಪಾಪದ ಹಣದಿಂದ! [illegible]ವರಿ ಕಾಲುವೆಗಳಲ್ಲಿನ ಹೂಳನ್ನು ಎತ್ತದೇ ಹಣ [illegible]ರುವ ನೀರಾವರಿ ಇಲಾಖೆಯ ಇಂಜಿನಿಯರ್‌ಗಳೆಲ್ಲ ಆದೇಶ (ಉಪದೇಶ!)ದಂತೆ ಬೌದ್ಧ ವಿಹಾರ [illegible]ಣಕ್ಕೆ, ಜನಸಾಮಾನ್ಯರಿಂದ ದೋಚಿದ ಹಣ ಚೆಲ್ಲಿದ್ದಾರೆ.

[illegible]ಂಗಳೂರಲ್ಲಿ ಪೊಲೀಸ್ ವರ್ಗಾವರ್ಗಿಯಲ್ಲಿ ರಾಶಿ [illegible]ದುಡ್ಡು ಮಾಡಿದ ಖರ್ಗೆ ಅಳಿಯ ರಾಧಾಕೃಷ್ಣನೇ [illegible] ಸಿದ್ಧಾರ್ಥ ವಿಹಾರ ಟ್ರಸ್ಟ್‌ನ ಸಂಚಾಲಕ! [illegible]. ಕೃಷ್ಣನ ಕಾಲದಲ್ಲಿ ಸಣ್ಣ ನೀರಾವರಿ ಮಂತ್ರಿಸ್ಥ[illegible] ಸಿಂಗ್ ಆಡಳಿತದಲ್ಲಿ ಜಲಸಂಪನ್ಮೂಲ ಸಚಿವಗಿರಿ [illegible] ಖರ್ಗೆ ಗುಲ್ಬರ್ಗಾ ಜಿಲ್ಲೆಗಳ ಎಲ್ಲ [illegible]ವರಿ ಯೋಜನೆಗಳಲ್ಲೂ ಲೂಟಿ ಮಾಡಿಯೇ [illegible]ದರು. ಬೆಣ್ಣೆತೊರಾ, ಮುಲ್ಲಾಮಾರಿ, ಅಮರ್ಜಾ, [illegible] ಯೋಜನೆಗಳಲ್ಲಿ [illegible]ಯರ್‌ಗಳಿಗೆ ಮೇಯಲು ಗ್ರೀನ್‌ಸಿಗ್ನಲ್ ಕೊಟ್ಟಿದ್ದ[illegible] ಕುಟುಂಬದ ಆಸ್ತಿಯನ್ನು ಬೆಳೆಸುತ್ತಲೇ [illegible].

[illegible]



ಬುದ್ಧನಿಗಾಗಿ ಕಾಯುತ್ತಿರುವ ಭವ್ಯ ವಿಹಾರ

ಮಲ್ಲಿಕಾರ್ಜುನ ಖರ್ಗೆಗೆ ತನ್ನ ಹಾಗೂ ಕುಟುಂಬದ ಏಳಿಗೆಗೆ ತೊಂದರೆಯಾದಾಗ ಮಾತ್ರ ತಮ್ಮ ಜಾತಿ ನೆನಪಾಗುತ್ತದೆ.

70 ರ ದಶಕದಲ್ಲಿ ವೀರೇಂದ್ರ ಪಾಟೀಲರಿಂದ ಆರಂಭಗೊಂಡ ಅನೇಕ ನೀರಾವರಿ ಯೋಜನೆಗಳು ಪೂರ್ಣಗೊಳ್ಳದೇ ಇರುವುದಕ್ಕೆ ಈ ಖರ್ಗೆ, ಧರ್ಮಸಿಂಗ್‌ಗಳೇ ಕಾರಣ ಎಂದು ಜನ ನಂಬಿದ್ದಾರೆ.

ತಮ್ಮ ಗುರುಮಿಠಕಲ್ ಕ್ಷೇತ್ರದಲ್ಲಿ ಹೊಳೆವ ಟಾರ್ ರಸ್ತೆ, ಸರ್ಕಾರಿ ಕಚೇರಿಗಳನ್ನು ಕಟ್ಟಿಸಿದ್ದೇ 4 ದಶಕಗಳ ರಾಜಕೀಯದ ಗ್ರೇಟ್ ಸಾಧನೆಯೆಂದು ಭ್ರಮಿಸಿರುವ ಖರ್ಗೆ ಸಾಹೇಬರು, ರಸ್ತೆ ಕಟ್ಟಡಗಳ ಅಂದಾಜು ವೆಚ್ಚ ತಯಾರಿಸುವ ಇಂಜಿನಿಯರ್‌ಗಳಿಗೆ "ನಿಮ್ಮ ಪಾಲಿನ ಪರ್ಸೆಂಟೇಜ್ ಸೇರಿಸಿಯೇ estimation ಕೊಡ್ರಿ... ಒಂದೀಟು ಚೊಲೋ ರೋಡು, ಬಿಲ್ಡಿಂಗು ಮಾಡಿಬಿಡ್ರಿ" ಎಂಬ ಸಲಹೆ ಕೊಡುತ್ತಾರೆ. ಈ ಭಾಗದ ದಲಿತ ಸಂಘಟನೆಗಳನ್ನು ಭ್ರಷ್ಟಗೊಳಿಸಲು ಯತ್ನಿಸಿದ 'ಕೀರ್ತಿ' ಖರ್ಗೆಗೇ ಸಲ್ಲುತ್ತದೆ.

ಖರ್ಗೆ ಜಲಸಂಪನ್ಮೂಲ ಸಚಿವರಾಗಿದ್ದಾಗ ಅವರನ್ನು ಭೇಟಿ ಮಾಡಿದ್ದ ಎಸ್.ಕೆ. ಕಾಂತಾ, "ಈಗ ಹೆಂಗಾದ್ರು ನೀವಾ ನೀರಾವರಿ ಮಂತ್ರಿ ಆದಿರಿ... ಜಲ್ದಿ ಜಲ್ದಿ ಎಲ್ಲಾ ಯೋಜನೆ ಮುಗ್ಸಿ ಈ ಭಾಗಕ್ಕ ಒಳ್ಳೇದ್ ಮಾಡ್ರಿ" ಎಂದು ಕೇಳಿದರಂತೆ. ಅದಕ್ಕೆ ಖರ್ಗೆ ಸಾಹೇಬರು ತಮ್ಮದೇ ಆದ ಹೊಸ ಆರ್ಥಿಕ, ಸಾಮಾಜಿಕ 'ಸೂತ್ರ'ವೊಂದನ್ನು ಉದುರಿಸಿಬಿಟ್ಟರು: "ನಾವಿರೋ ತನಕ ಯಾವ ಯೋಜನೆಗಳೂ ಮುಗಿಬಾರ್ದುರಿ.... ನೀರಾವರಿ ಲಾಭ ಸಿಗೋದು ಲಿಂಗಾಯಿತರು, ಕುರುಬರು, ನಾಯಕ್ ಜನಾಂಗದವ್ರಿಗೆ... ಅವ್ರು ಇನ್ನೂ ಹೆಚ್ ಸಾವುಕಾರಾಗಿ ದಲಿತರ ಶೋಷಣೆ ಮಾಡ್ತಾರ..."

ಎಂತಹ ಅದ್ಭುತ ಯೋಜನಾ ತಜ್ಞ ಖರ್ಗೆಯವರು!!

ಇವತ್ತು ಅಪೂರ್ಣ ನೀರಾವರಿ ಯೋಜನೆಗಳಿಂದ ಏನಾಗಿದೆ ನೋಡಿ.... ಬೆಂಗಳೂರಲ್ಲಿ ಎಲ್ಲೇ ಕಟ್ಟಡ ನಿರ್ಮಾಣ ನಡೆಯುತ್ತಿದ್ದರೂ ಅಲ್ಲಿ ಜೇವರ್ಗಿ, ಗುರುಮಿಠಕಲ್ ಕ್ಷೇತ್ರಗಳ ಜನರೇ ಕೂಲಿಗಳು. ಬೆಂಗಳೂರಲ್ಲಾಗಲೇ ಈಗ ಎಂಟು ಗುರುಮಿಠಕಲ್ ಕ್ಯಾಂಪ್‌ಗಳೆಂಬ ಸ್ಲಮ್ಮುಗಳಲ್ಲಿ ಖರ್ಗೆ ಕ್ಷೇತ್ರದ ಎಲ್ಲ ಜಾತಿಯ ಜನರು ನರಳುತ್ತಿದ್ದಾರೆ.

ಇಂಜಿನಿಯರ್‌ಗಳೆಲ್ಲ ದಕ್ಷಿಣೆ ಕೊಟ್ಟು ಬಂದರು. ಹಾಗೆ ಸಂಗ್ರಹವಾದ ಹಡಬೆ ದುಡ್ಡಿನಿಂದಲೇ ಇವತ್ತು ಭವ್ಯ ಬೌದ್ಧ ವಿಹಾರ ತಲೆ ಎತ್ತಿ ನಿಂತಿದೆ. ಬುದ್ಧ ಮಾತ್ರ ತಲೆ ತಗ್ಗಿಸಬೇಕಾಗಿದೆ.

ಗುಲ್ಬರ್ಗಾ ವಿಶ್ವವಿದ್ಯಾಲಯದ ಹಿಂಭಾಗದಲ್ಲಿ ಬುದ್ಧನ ಹೆಸರಲ್ಲಿ ಏಳುತ್ತಿರುವ ಖರ್ಗೆಯ ಈ ಸಾಮ್ರಾಜ್ಯ ತಲುಪಲು ಸೇಡಂ ರಸ್ತೆಯಿಂದ ಈ ಸಾಮ್ರಾಜ್ಯದವರೆಗೂ ಸರ್ಕಾರವೇ 10 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಬೇರೆ ಮಾಡಿ ಕೊಟ್ಟಿದೆ.

ದಲಿತಪರವಾದ 'ಹಾಲಿನ' ಖರ್ಗೆ!

ಈ ಭಾಗದಿಂದ ರಾಜಕೀಯದಲ್ಲಿ ಉನ್ನತ ಸ್ಥಾನಗಳನ್ನು ಅನುಭವಿಸಿದ ದಲಿತ, ಹಿಂದುಳಿದ [illegible] ತಮ್ಮ ಸ್ವಾರ್ಥಕ್ಕೋಸ್ಕರ ಇಡೀ ಹೈದ್ರಾಬಾದ್ ಕರ್ನಾಟಕವನ್ನೇ ದಟ್ಟ [illegible]



[illegible]


ರಾಜ್ಯದಲ್ಲೇ ಅತಿ ಕಡಿಮೆ ಸಾಕ್ಷರತೆ ಹೊಂದಿರುವ ಕ್ಷೇತ್ರಗಳ ಪೈಕಿ ಗುರುಮಿಠಕಲ್ ಸಹ ಒಂದು. ಇಡೀ ರಾಜ್ಯದಲ್ಲೇ ಅತಿ ಹೆಚ್ಚು ಜನ ಗುಳೆ ಹೋಗುತ್ತಿರುವುದು ಗುಲ್ಬರ್ಗಾದಿಂದಲೇ. ಗುರುಮಿಠಕಲ್ ಕ್ಷೇತ್ರದ ನೇಕಾರರೆಲ್ಲ ದಿಕ್ಕಾಪಾಲಾಗಿ ಹೋಗಿದ್ದಾರೆ.

ಆದರೆ ಖರ್ಗೆ ಮಾತ್ರ ಮಕ್ಕಳ [illegible]

[illegible] Kharge smiles

-[illegible]

[illegible]



ಇದು ವಿಕ್ಟೋರಿಯಾ ಆಸ್ಪತ್ರೆಯ ಕತೆ

ರೋಗ ಉಚಿತ ಸಾವು ಖಚಿತ!

ವಿಕ್ಟೋರಿಯಾ ಬಳಿ ಬ್ಯಾಂಕ್ ಬಳಿ ಬಂದಿನ ಸಾಕ್ಷಿಗಳೇ ಬೇಗ ಕೈ ಹಾಕುತ್ತಾರೆ. ಮೈ ಮುಟ್ಟಿ ನರಳುತ್ತಾ ಬಿದ್ದಿದ್ದರೆ ವೈದ್ಯರೂ ... ನಾವಿಬ್ಬರೂ ನಾಪತ್ತೆ. ಸಕ್ಕರೆ ಖಾಯಿಲೆಗೆಂದು ಆಸ್ಪತ್ರೆಗೆ ಬಂದು ದಾಖಲಾಗಿದ್ದ ಜಾಲಿ ಮೊಹಲ್ಲಾದ ಶಹಜಾದಿ ಬೇಗಮ್ ಹೋಯಿತಿದ್ದನ್ನು ಹೇಳಿದಾಗ. ಇದು ಐತಿಹಾಸಿಕ ವಿಕ್ಟೋರಿಯಾ ಆಸ್ಪತ್ರೆಯ ನಿತ್ಯಕರ್ಮವಾಗಿಬಿಟ್ಟಿದೆ.

ಇದೇ ಮೇ ಒಂಭತ್ತಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ... ತಮ್ಮ ಪತ್ನಿ ಹೇಮಾವತಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆತಂದರೆ ಅಲ್ಲಿನ ಸ್ತ್ರೀರೋಗ ಶಾಖೆಯಲ್ಲಿದ್ದ ಡಾ. ಕೃಷ್ಣಮೂರ್ತಿ ರೋಗ ಪರೀಕ್ಷೆಯ ನೆಪದಲ್ಲಿ ವಿಕೃತ ಚೇಷ್ಟೆಗಿಳಿದ. ಒದೆಯನ್ನೂ ತಿಂದು ಸುದ್ದಿಯಾದ. ದುರಂತವೆಂದರೆ ಕೀಚಕ ವೈದ್ಯ ಕೃಷ್ಣಮೂರ್ತಿಗೆ ಒದೆ ಬಿದ್ದದ್ದೇ ತಪ್ಪೆಂದು ವಿಕ್ಟೋರಿಯಾ ಆಸ್ಪತ್ರೆಯ ಅಷ್ಟೂ ಮಂದಿ ವೈದ್ಯರು ಮುಷ್ಕರಕ್ಕಿಳಿದರು. ವಿಕ್ಟೋರಿಯಾ ಆಸ್ಪತ್ರೆ ಯಾಪಾಟ ಎಕ್ಕುಟ್ಟಿದೆಯೆಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?

ಕಳೆದ ಫೆಬ್ರವರಿ ಹದಿನಾಲ್ಕರಂದು ಜಾಲಿ ಮೊಹಲ್ಲಾದ ಶಹಜಾದಿ ಬೇಗಮ್‌ರನ್ನು ಡಯಾಬಿಟಿಸ್ ಎಂದು ಆಸ್ಪತ್ರೆಗೆ ಸೇರಿಸಲಾಯ್ತು. ಯಾರೋ ಡಾಕ್ಟರ್ ಒಬ್ಬ ಮುಖ ತೋರಿಸಿ ಹೋದವನು ಮೂರು ದಿನಗಳಾದರೂ ನಾಪತ್ತೆ. ಫೆಬ್ರವರಿ 19ಕ್ಕೆ ಇದ್ದಕ್ಕಿದ್ದಂತೆ ಎದೆನೋವು ಬಂತೆಂದು ಕಂಗಾಲಾದ ಆಕೆಯ ಮಕ್ಕಳು ಬಾಯಿ ಬಡಿದುಕೊಂಡರೂ ಒಬ್ಬೇ ಒಬ್ಬ ಡಾಕ್ಟರ್ ಬರಲಿಲ್ಲ. ಕೊನೆಗೆ ವಿಧಿಯಿಲ್ಲದೇ ಅವರೆಲ್ಲ ಸೇರಿ ICU ಗೆ ಹೊತ್ತು ತಂದರು. ಅಲ್ಲಿದ್ದ ಯಾರೋ ಡಾಕ್ಟರ್ ಹಾಗೆಲ್ಲ ಸೇರಿಸಿಕೊಳ್ಳಲು ಆಗೋಲ್ಲ ಎಂದ. ಐದಾರು ಬೆಡ್‌ಗಳು ಖಾಲಿ ಇದ್ದರೂ, ಸಂಬಂಧಿಕರು ಬಾಯಿ ಬಡಿದುಕೊಳ್ಳುತ್ತಿದ್ದರೂ ಯಾರೂ ಲೆಕ್ಕಿಸಲಿಲ್ಲ. ಇದೆಲ್ಲದರ ನಡುವೆಯೇ ಶಹಜಾದಿ ಬೇಗಮ್ ಪ್ರಾಣ ಹೋಗಿತ್ತು. ಸಂಬಂಧಿಕರು ನೋಡುತ್ತಾ ನಿಂತಿದ್ದ ವೈದ್ಯನಿಗೆ ಬಾಯಿಗೆ ಬಂದಂತೆ ಬೈದರು. ಪೊಲೀಸರಿಗೆ ದೂರು ಕೊಟ್ಟರು. ಲೋಕಾಯುಕ್ತಕ್ಕೂ ಬರೆದರು. ಈತನಕ ಶಹಜಾದಿ ಬೇಗಮ್ ಸಾವಿಗೆ ನ್ಯಾಯ ಸಿಕ್ಕಿಲ್ಲ.

ಪದೇ ಪದೇ ರೋಗಿಗಳ ಕಡೆಯವರಿಂದ ಇಲ್ಲಿನ ಡಾಕ್ಟರ್‌ಗಳು ಒದೆ ತಿನ್ನುವುದು, ಅದನ್ನು ಪ್ರತಿಭಟಿಸಿ ವೈದ್ಯರುಗಳು ಮುಷ್ಕರ ನಡೆಸುವುದು, ಲೋಕಾಯುಕ್ತರು ದಾಳಿ ನಡೆಸುವುದು ವಿಕ್ಟೋರಿಯಾ ಆಸ್ಪತ್ರೆಗೆ ಮಾಮೂಲಾಗಿಬಿಟ್ಟಿದೆ. ಇಲ್ಲಿ ಲಂಚ ಕೊಟ್ಟರಷ್ಟೇ ಮಂಚ ಎಂಬುದು ಕಾಮನ್ ಥಿಯರಿ. ವರ್ಷವೊಂದಕ್ಕೆ ವಿಕ್ಟೋರಿಯಾ ಆಸ್ಪತ್ರೆಗೆಂದೇ ರಾಜ್ಯ ಬೊಕ್ಕಸದಿಂದ ಅರವತ್ತು ಕೋಟಿ ರೂಪಾಯಿ ಖರ್ಚಾಗುತ್ತದೆ. ಹೇಳಿಕೇಳಿ ನೂರು ವರ್ಷಕ್ಕೂ ಹಿಂದಿನ ಆಸ್ಪತ್ರೆ. ಬೆಂಗಳೂರಷ್ಟೇ ಅಲ್ಲ ಇಡೀ ಕರ್ನಾಟಕಕ್ಕೇ ಅತಿದೊಡ್ಡ ಆಸ್ಪತ್ರೆ. ಪ್ರತಿನಿತ್ಯ ರಾಜ್ಯದ ಬೇರೆಬೇರೆ ಭಾಗಗಳಿಂದ ಜನ ಬರುತ್ತಾರೆ. ಬರುವವರ್‍ಯಾರೂ ಶ್ರೀಮಂತರಲ್ಲ. ಹಾಗಿದ್ದೂ ಪದೇ ಪದೇ ವಿಕ್ಟೋರಿಯಾ ಆಸ್ಪತ್ರೆ ಜನರ ಆಕ್ರೋಶಕ್ಕೇಕೆ ಗುರಿಯಾಗುತ್ತಿದೆ? ಸರ್ಕಾರ ಎಷ್ಟೆಲ್ಲಾ ದುಡ್ಡು ಸುರಿದರೂ ಏಕೆ ಸುಧಾರಿಸುತ್ತಿಲ್ಲ?

ಹೀಗೆ ಹುಟ್ಟಿಕೊಳ್ಳುವ ಪ್ರಶ್ನೆಗಳಿಗೆ ಉತ್ತರ ಕೂಡ ವಿಕ್ಟೋರಿಯಾ ಆಸ್ಪತ್ರೆಯಲ್ಲೇ ಇದೆ. ಹೇಳಿ ಕೇಳಿ ಇದು ವೈದ್ಯಕೀಯ ಶಿಕ್ಷಣ ಇಲಾಖೆಗೆ ಸೇರಿದ ಆಸ್ಪತ್ರೆ. ಬೆಂಗಳೂರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳೇ ಇಲ್ಲಿನ ಡಾಕ್ಟರ್‌ಗಳು ಮತ್ತು ಅಲ್ಲಿನ ಪ್ರೊಫೆಸರ್‌ಗಳೇ ಇಲ್ಲಿನ ವಿವಿಧ ವಿಭಾಗಗಳ ಮುಖ್ಯಸ್ಥರು. ಯಾರೇ ವೈದ್ಯಕೀಯ ಶಿಕ್ಷಣ ಸಚಿವರಾದರೂ ಅಂಥವರನ್ನು ಹೇಗೆ ಬುಟ್ಟಿಗೆ ಹಾಕಿಕೊಳ್ಳಬೇಕೆಂಬ ವಿದ್ಯೆ ಇವರಿಗೆ ಸಿದ್ಧಿಸಿಬಿಟ್ಟಿದೆ.

ಸದ್ಯ ವಿಕ್ಟೋರಿಯಾ ಆಸ್ಪತ್ರೆಗೆ ಸೂಪರಿಂಟೆಂಡೆಂಟ್ ಆಗಿರುವ ಕೆ.ವಿ. ಅಶೋಕ್‌ಕುಮಾರ್ ಈ ಹಿಂದೆ ವೈದ್ಯಕೀಯ ಶಿಕ್ಷಣ ಮಂತ್ರಿಯಾಗಿದ್ದ ಇಕ್ಬಾಲ್ ಅನ್ಸಾರಿಯ ಕೊಡುಗೆ!


ಮೂಲತಃ ಕೋಲಾರದ ಮುಳಬಾಗಿಲಿನ ಕೋಮಟಿ ಶೆಟ್ಟಿಯಾದ ಅಶೋಕ್‌ಕುಮಾರ್ ಆತನಕ ಗ್ಯಾಸ್ಟ್ರೋ ಎಂಟ್ರಾಲಜಿ ವಿಭಾಗದ ಮುಖ್ಯಸ್ಥನಾಗಿದ್ದ. ಈ ಹಿಂದೆ ಬೌರಿಂಗ್ ಆಸ್ಪತ್ರೆಯಲ್ಲಿದ್ದಾಗ ಇರಿತಕ್ಕೊಳಗಾಗಿದ್ದ ಗಾಯಾಳು ಒಬ್ಬನನ್ನು ಚಿಕಿತ್ಸೆ ನೀಡದೇ ಕುದಿದು ಮಲಗಿದ್ದ ಕಾರಣಕ್ಕಾಗಿ ಅಶೋಕ್‌ಕುಮಾರ್ ಸಸ್ಪೆಂಡಾಗಿದ್ದ. ಆ ಕಾರಣಕ್ಕೆ ಲೋಕಾಯುಕ್ತ ತನಿಖೆಯಾಗಿ ಈತನ ಎರಡು ... ಕಟ್ ಮಾಡಲಾಗಿತ್ತು. ಅದಾದ ನಂತರ



ಕಿಡ್ನಿಕಂಟಕ ರಟಕಲ್




ಪದೇ ರೋಗಿಗಳ ಕಡೆಯವರಿಂದ ಇಲ್ಲಿನ ಡಾಕ್ಟರ್‌ಗಳು ಒದೆ ತಿನ್ನುವುದು, ಅದನ್ನು ಪ್ರತಿಭಟಿಸಿ ವೈದ್ಯರುಗಳು ಮುಷ್ಕರ ನಡೆಸುವುದು, ಲೋಕಾಯುಕ್ತರು ದಾಳಿ ನಡೆಸುವುದು ವಿಕ್ಟೋರಿಯಾ ಆಸ್ಪತ್ರೆಗೆ ಮಾಮೂಲಾಗಿಬಿಟ್ಟಿದೆ. ಇಲ್ಲಿ ಲಂಚ ಕೊಟ್ಟರಷ್ಟೇ ಮಂಚ ಎಂಬುದು ಕಾಮನ್ ಥಿಯರಿ. ವರ್ಷವೊಂದಕ್ಕೆ ವಿಕ್ಟೋರಿಯಾ ಆಸ್ಪತ್ರೆಗೆಂದೇ ರಾಜ್ಯ ಬೊಕ್ಕಸದಿಂದ ಅರವತ್ತು ಕೋಟಿ ರೂಪಾಯಿ ಖರ್ಚಾಗುತ್ತದೆ. ಇಡೀ ಕರ್ನಾಟಕಕ್ಕೇ ಅತಿದೊಡ್ಡ ಆಸ್ಪತ್ರೆ. ಹಾಗಿದ್ದೂ ಪದೇ ಪದೇ ಜನರ ಆಕ್ರೋಶಕ್ಕೇಕೆ ಗುರಿಯಾಗುತ್ತಿದೆ?





... ಮಾದೇವ

ವಿಕ್ಟೋರಿಯಾ ಆಸ್ಪತ್ರೆಗೆ ವಕ್ಕರಿಸಿದ ಅಶೋಕ್‌ಕುಮಾರ್ 2002 ರಲ್ಲಿ ನರ್ಸ್ ಶಾರದಮ್ಮ ಎಂಬಾಕೆಯ ಮೇಲೆ ಕೈ ಮಾಡಿ ಮತ್ತೆ ಶಿಕ್ಷೆಗೀಡಾದ. ಮದುವೆಯಾಗಿ ಹೆಂಡತಿ ಇದ್ದಾಗ್ಯೂ ಬೋರಿಂಗ್ ಆಸ್ಪತ್ರೆಯ ಪದ್ಮಾ ಶೆಟ್ಟಿ ಎಂಬ ನರ್ಸ್ ಜೊತೆ ಕಳ್ಳ ಸಂಸಾರಕ್ಕಿಳಿದ ಈತನಿಗೆ ಸೂಪರಿಂಟೆಂಡೆಂಡ್ ಆಗಲು ಸೀನಿಯಾರಿಟಿ ಮತ್ತು ಸಿನ್ಸಿಯಾರಿಟಿ ಯಾವುದೂ ಇರಲಿಲ್ಲ. ಸರ್ಜಿಕಲ್ ಗ್ಯಾಸ್ಟ್ರೋ ಎಂಟ್ರಾಲಜಿಯಲ್ಲಿ ಎಂಸಿಎಚ್ ಆಗಿರಲಿಲ್ಲ. ಈ ಬಗ್ಗೆ ಎರಡು ವರ್ಷದ ತರಬೇತಿಯನ್ನಾದರೂ ಪಡೆಯಬೇಕಿತ್ತು.




ಮಾಗಡಿಯ ಶಾರದಮ್ಮ

ಇಲ್ಲಿ ತಲೆನೋವಿಗೂ ಮಾತ್ರೆಯಿಲ್ಲ

ವಿಕ್ಟೋರಿಯಾ ಆಸ್ಪತ್ರೆಯ ಬೇರೆ ಬೇರೆ ವಿಭಾಗಗಳ ಹೆಬ್ಬಾಗಿಲಲ್ಲಿ ರಿಸೆಪ್ಷನ್ನುಗಳಿವೆ ನಿಜ. ಅಲ್ಲಿ 'ನಿಮಗೆ ಸಹಾಯ ಬೇಕೆ?' ಎಂಬ ಬೋರ್ಡು ಕೂಡ ಇರುತ್ತದೆ. ಆದರೆ ಒಬ್ಬೇ ಒಬ್ಬ ರಿಸೆಪ್ಷನಿಸ್ಟ್ ಕಾಣಿಸುವುದಿಲ್ಲ. ಯಾರ ಬಗ್ಗೆ ಯಾರನ್ನು ಕೇಳಿದರೂ ಸರಿಯಾದ ಉತ್ತರವಿಲ್ಲ. ಹಾಗಂಥ ಇಲ್ಲಿ ಯಾವುದೂ ಉಚಿತವಲ್ಲ. ಚೀಟಿ ಬರೆಸಲು ಹತ್ತು ರೂಪಾಯಿ, ರಕ್ತ ಪರೀಕ್ಷೆಗೆ ನೂರು ರೂಪಾಯಿ, ಹಾಸಿಗೆಯೊಂದಕ್ಕೆ ದಿನಕ್ಕೆ ಹತ್ತರಿಂದ ಐವತ್ತು ರೂಪಾಯಿ, ಎಕ್ಸ್‌ರೇಗೆ ಐವತ್ತು ರೂಪಾಯಿ, ಆಪರೇಷನ್ನಿಗೆ ಎರಡು ಸಾವಿರ ರೂಪಾಯಿ ಎಂದು ಹೆಬ್ಬಾಗಿಲಲ್ಲೇ ಬೋರ್ಡು ಬರೆಸಿ ಹಾಕಿದ್ದಾರೆ.

ಹಾಗೊಮ್ಮೆ ಉಚಿತ ಸೇವೆ ಬೇಕಿದ್ದರೆ ಅಂಥವರು ನಿರ್ಗತಿಕರೆಂದು ಇನ್‌ಕಮ್ ಸರ್ಟಿಫಿಕೇಟ್ ಕೊಡಬೇಕು. ಆ ಗೊಡವೆಯೇ ಬೇಡ ಅಷ್ಟಿಷ್ಟು ಕೊಟ್ಟುಬಿಡೋಣ ಎಂದು ಅಡ್ಮಿಟ್ ಆದರೆ ನಿಮ್ಮ ಪಾಡು ನಾಯಿಪಾಡು. ಬೆಳಗ್ಗೆ ಒಮ್ಮೆಗೆ ಡಾಕ್ಟರ್ ಬಂದು ನೋಡಿ ಹೋದರೆ ಆತ ಮತ್ತೆ ಬರುವುದು ಮಾರನೇ ದಿನಕ್ಕೇ.



ಈ ಮಧ್ಯೆ ನರ್ಸ್ ಬೆಳಿಗ್ಗೆ ಮುಖ ತೋರಿಸಿ ಹೊರಟಳೆಂದರೆ ಜೀವ ಹೋಗುತ್ತದೆ ಎಂದರೂ ಪತ್ತೆಯೇ ಇಲ್ಲ. ಇನ್ನು ಆಸ್ಪತ್ರೆಯ ಬಾಗಿಲಲ್ಲೇ 'ಲಭ್ಯ ಔಷಧಿಗಳ' ಬೋರ್ಡ್ ಹಾಕಿರುತ್ತಾರೆ. ಅದರಲ್ಲಿ ಎಲ್ಲಾ ಔಷಧಿಗಳ ಹೆಸರಿರುತ್ತದೆ. ಹಾಗಂಥ ತಲೆನೋವಿಗೆ, ಹೊಟ್ಟೆನೋವಿಗೆ ಮಾತ್ರೆ ಕೇಳಿನೋಡಿ. ನಿಮಗೆ ಮಾತ್ರೆ, ಇಂಜೆಕ್ಷನ್ ಬೇಕೆಂದರೆ ಸಾಕ್ಷಾತ್ ಲೋಕಾಯುಕ್ತರೇ ಬರಬೇಕು.

ಹಕೀಕತ್ತೇನೆಂದರೆ ಆರೋಗ್ಯ ಇಲಾಖೆಯ ಔಷಧಾಗಾರದಿಂದ ತಿಂಗಳೊಂದಕ್ಕೆ ಹದಿನೈದು ಲಕ್ಷ ರೂಪಾಯಿ ಮೌಲ್ಯದ ಔಷಧಿ ವಿಕ್ಟೋರಿಯಾ ಆಸ್ಪತ್ರೆಗೆ ಬರುತ್ತದೆ. ಆದರೆ ಅದ್ಯಾವುದೂ ರೋಗಿಗಳಿಗೆ ದೊರಕದೇ ಖಾಸಗಿ ಮೆಡಿಕಲ್ ಸ್ಟೋರುಗಳ ಪಾಲಾಗುತ್ತದೆ. ವಿಕ್ಟೋರಿಯಾ ಆಸ್ಪತ್ರೆಗೆ ಸೂಪರಿಂಟೆಂಡೆಂಟ್ ಆದವನಿಗೆ ಇದೇ ವರ್ಷಕ್ಕೆ ಕೋಟಿ ರೂಪಾಯಿ ಕಮಾಯಿಯಾಗುತ್ತದೆ. ಇಲ್ಲಿಗೆ ಹಾಸಿಗೆ ಬೆಡ್‌ಶೀಟುಗಳನ್ನು ಒಗೆಯುವುದಕ್ಕೆಂದೇ ತಿಂಗಳಿಗೆ ಐದು ಲಕ್ಷ ಖರ್ಚಾಗುತ್ತದೆ. ಆದರೆ ಯಾವ ಬೆಡ್‌ಶೀಟೂ ಶುದ್ಧವಿಲ್ಲ. ಸಾಲದ್ದಕ್ಕೆ ಕೆಟ್ಟ ವಾಸನೆ ಬೇರೆ. ವಿಕ್ಟೋರಿಯಾ ಅಂದರೆ ಆಸ್ಪತ್ರೆ ಹೆಸರಿನಲ್ಲಿ ಲೂಟಿಯಷ್ಟೇ.


ಹಾಗೇ ನೋಡಿದರೆ ವಿಕ್ಟೋರಿಯಾ ಆಸ್ಪತ್ರೆಗೆ ಸೂಪರಿಂಟೆಂಡೆಂ... ಆಗಬೇಕಿದ್ದದ್ದು ಸರ್ಜರಿ ವಿಭಾಗದ ಮುಖ್ಯಸ್ಥರಾಗಿದ್ದ ಶ್ರೀನಿವಾಸ... ಅವರು ಬೇಡ ಎಂದರೆ ಆರ್ಥೋಪೆಡಿಕ್ಸ್ ವಿಭಾಗದ ನಂಜುಂಡ... ಆಗಬೇಕಿತ್ತು. ಇಂಥ ಅರ್ಹರನ್ನು ಮೂಲೆಗುಂಪು ಮಾಡಿ ಸಾ... ಬಾರಿ ಸಸ್ಪೆಂಡಾಗಿದ್ದ ಅಶೋಕ್‌ಕುಮಾರ್‌ರನ್ನು ಸೂಪರಿಂಟೆಂಡೆಂ... ಹುದ್ದೆಗೆ ತಂದದ್ದು ಅಂದಿನ ವೈದ್ಯಕೀಯ ಶಿಕ್ಷಣ ಮಂತ್ರಿ ಅ... 'ಇಪ್ಪತ್ತು ಲಕ್ಷ ಕೊಟ್ಟೇ ಸೂಪರಿಂಟೆಂಡೆಂಟ್ ಆಗಿದ್ದೀನಿ ಗೊ...' ಎಂದೇ ಸುಲಿಗೆಗೆ ನಿಂತ ಅಶೋಕ್‌ಕುಮಾರ್ ಇಡೀ ಆಸ್ಪ... ಕ್ಲೀನಿಂಗ್ ಅಂಡ್ ಹೌಸ್ ಕೀಪಿಂಗ್ ಗುತ್ತಿಗೆ ಕೊಟ್ಟದ್ದು ದೇವಿ... ಎಂಬ ವಂಚಕನಿಗೆ.

ತಿಂಗಳಿಗೆ ಅದೇ ಹತ್ತು ಲಕ್ಷದ ಆಮದನಿ. ತರಕಾರಿ ಸರಬರಾ... ಗುತ್ತಿಗೆ, ಮೊಟ್ಟೆ ಕಂಟ್ರಾಕ್ಟ್, ದಿನಸಿ ಗುತ್ತಿಗೆ, ಹಾಲು-ಬ್ರೆ... ಸ್ಟೇಷನರಿ, ಬ್ಯಾಂಡೇಜು, ಹೀಗೆ ಎಲ್ಲೆಂದರಲ್ಲಿ ಮುಕ್ಕಲಾರಂಭಿ... ಅಶೋಕ್‌ಕುಮಾರ್‌ಗೆ ತಕ್ಕಂಥ ಆಸ್ಪತ್ರೆಯ ಸೆಕ್ರೆಟರಿ ಮಹಾದೇ... ಕೂಡ ಲೂಟಿಗಿಳಿದ. ಆರ್‌ಎಂಓ ಜಡೇದ ತನ್ನ ಪಾಲಿನ ಪ್ರ... ಸಂದಾಯವಾದದ್ದೇ ತಡ ಕಂಡಕಂಡಲ್ಲಿ ಸಹಿ ಹಾಕಿದ. ಸಾಲದ... ಆಸ್ಪತ್ರೆಯ ದುಡ್ಡಲ್ಲಿ ತನ್ನ ಗ್ಯಾಸ್ಟ್ರೋ ಎಂಟ್ರಾ... ವಾರ್ಡನ್ನು ಸಿಂಗರಿಸಿಕೊಂಡ ಅಶೋಕ್‌ಕುಮಾ... ಅಲ್ಲಿ ತನ್ನ ಖಾಸಗಿ ಆಪರೇಷನ್ನು ಶುರು ಹಚ್ಚಿಕೊಂ...

ಆಸ್ಪತ್ರೆಯ ಸೂಪರಿಂಟೆಂಡೆಂಟ್ ಕತೆಯೇ ಹೀಗಾ... ಮೇಲೆ ಇನ್ನೂ ಆಯಾ ವಿಭಾಗಗಳ ಮುಖ್ಯಸ್ಥ... ಸುಮ್ಮನಿರುತ್ತಾರಾ? ಮೂತ್ರರೋಗ ಚಿಕಿತ್ಸಾ ವಿಭಾಗ... ಮುಖ್ಯಸ್ಥ ಡಾ. ಚಂದ್ರಶೇಖರ್ ರಟಕಲ್ ಬರು... ಮೂತ್ರರೋಗಿಗಳ ರಕ್ತವನ್ನೇ ಹೀರತೊಡಗಿ... ಅದಕ್ಕೊಂದು ಸಣ್ಣ ಉದಾಹರಣೆ ಹೀಗಿದೆ. ಮಾಗಡಿ... ಶಾರದಮ್ಮನ ಕಿಡ್ನಿಯಲ್ಲಿ ಕಲ್ಲಿದೆಯೆಂದು ಇದೇ ಮೇ... ಎಂಟಕ್ಕೆ ದಾಖಲಾಗಿದ್ದಾಳೆ. ಮೊದಮೊದಲು ಕ... ತೆಗೀತೀನಿ ಅಂದ ರಟಕಲ್ ಈಗ ಜುಲೈ ಹದಿನಾಲ್ಕ... ತಾರೀಖಿಗೆ ಮಾಡ್ತೀನಿ ಎನ್ನುತ್ತಾನೆ. ಅಲ್ಲಿಯ ತನ... ಆಕೆ ಆಸ್ಪತ್ರೆಯಲ್ಲೇ ನರಳಬೇಕು. ಆಕೆಯ ಪರವ... ಬಂದವರಿಗೆ ಏನ್ರೀ ಮಾಡೋದು ಸ್ಟೆತೆಸ್ಕೋಪೇ ಕೆ... ಹೋಗಿದೆ, ಟೆಲಿಸ್ಕೋಪೇ ಇಲ್ಲ, ಕಲ್ಲು ಕರಗಿಸೋದ... 'ಸಿ' ಆರ್ಮ್ ಬೇಕು ಎಂದು ರಾಗ ಎಳೆಯುತ್ತಾ... ಆಕೆಯ ಕಣ್ಣ ಮುಂದೆಯೇ ಕಾಸು ಕೊಟ್ಟವ... ಆಪರೇಷನ್ ನಡೆದಿದೆ. ಇಲ್ಲಿ ಲಂಚ ಕೊಡದೇ ಮ... ದಕ್ಕುವುದಿಲ್ಲ.

ಪ್ಲಾಸ್ಟಿಕ್ ಸರ್ಜರಿ ವಿಭಾಗದ ಮುಖ್ಯಸ್ಥ ಡಾ... ಎಂ. ಶಂಕರಪ್ಪ ತಜ್ಞರು ನಿಜ. ದೊಡ್ಡ ಹೆಸರಿ... ಇದೇ ವಿಕ್ಟೋರಿಯಾ ಆಸ್ಪತ್ರೆಯ ಸುಟ್ಟಗಾಯಗ... ವಾರ್ಡು ಯಾವತ್ತಿಗೂ ತುಂಬಿ ತುಳುಕುತ್ತದೆ. ಹಾ... ಮೈಸುಟ್ಟುಕೊಂಡವರಿಗೆ ಶಂಕ್ರಪ್ಪ ಪ್ಲಾಸ್ಟಿಕ್ ಸರ್ಜ... ಮಾಡಬೇಕು. ಆದರೆ ಶಂಕ್ರಪ್ಪನವರ ಆಸಕ್ತಿಯೇನಿದ್ದರೂ... ಯಲ್ಲಮ್ಮ ದಾಸಪ್ಪ ಆಸ್ಪತ್ರೆಯತ್ತಲೇ. ಹಾಗೊಮ್ಮೆ... ಇಲ್ಲೇ ಪ್ಲಾಸ್ಟಿಕ್ ಸರ್ಜರಿಯಾಗಬೇಕೆಂದರೆ ಅದ... ಕಾಸು ಬಿಚ್ಚಲೇಬೇಕು.

ಚರ್ಮ ಮತ್ತು ಗುಹ್ಯ ಕಾಯಿಲೆಗಳ ವಿಭಾಗ... ಮುಖ್ಯಸ್ಥ ಡಾ. ಎಸ್. ಸಚ್ಚಿದಾನಂದರನ್ನು... ನೋಡಬೇಕೆಂದರೆ ರೋಗಿಗಳು ಅವರ ರಾಜಾಜಿನಗ... ನರ್ಸಿಂಗ್ ಹೋಮಿಗೇ ಹುಡುಕಿಕೊಂಡು... ಹೋಗಬೇಕು. ಸರ್ಜರಿ ವಿಭಾಗದ ಮುಖ್ಯ... ಜಿಯಾವುಲ್ಲಾ ಷರೀಫ್, ಮತ್ತೊಬ್ಬ ಪ್ರೊಫೆಸರ್ ದುಗ್ಗ... ಇತ್ಯಾದಿಗಳಂತೂ ರೋಗಿಗಳ ರಕ್ತ ಹೀರುತ್ತಾರೆ. ... ಹಿಂದೆ ಇದೇ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯ ಸಿದ್ಧರಾಜ... ಕಿಡ್ನಿ ಜಾಲದಲ್ಲಿ ಸಿಕ್ಕಿಬಿದ್ದ. ಮತ್ತೊಬ್ಬ ಡಾಕ್ಟರ... ಜ್ಞಾನೇಂದ್ರಪ್ಪ ತೆಲಗಿ ಕೇಸಲ್ಲಿ... ಜೈಲು ಕಂಡ. ಅಶೋಕ್ ಕುಮಾರ್‌ಗಿಂತಲೂ ಹಿಂದಿನ... ಸೂಪರಿಂಟೆಂಡೆಂಟ್ ರಾಜಶೇ... ಆಸ್ಪತ್ರೆಯನ್ನು ಮತ್ತಷ್ಟು ಎಕ್ಕುಟ್ಟಿಸಿದ್ದ. ಅದಕ್ಕೂ ಹಿಂದಿದ್ದ ಚಂದ್ರಶೇಖರ್ ಆಸ್ಪತ್ರೆಯನ್ನು ಇನ್ನಷ್ಟು ಕುಲಗೆಡಿಸಿದ. ಈಗ ಆಸ್ಪತ್ರೆಗೆ ಬರುವ ಸ್ತ್ರೀರೋಗಿಗಳನ್ನೇ ವೈದ್ಯರು ಪೀಡಿಸುತ್ತಿದ್ದಾರೆ. ರೋಗಿಗಳಿಂದ ಒದೆ ತಿಂದು ಡಾಕ್ಟರ್‌ಗಳೇ ಪ್ರತಿಭಟಿಸುವ ಮಟ್ಟಕ್ಕೆ ವಿಕ್ಟೋರಿಯಾ ಖ್ಯಾತಿಗಳಿಸಿದೆ.



ನಿರ್ಲಕ್ಷ್ಯಕ್ಕೆ ಬಲಿಯಾದ ಶಹಜಾದಿ

ಯಾವ ಪುರುಷಾರ್ಥಕ್ಕೆಂದು ಸರ್ಕಾರ ವರ್ಷ... ಅರವತ್ತು ಕೋಟಿ ಸುರಿಯುತ್ತಿದೆ? ಜನ... ತೆರಿಗೆಯ ದುಡ್ಡಲ್ಲಿ ಜಿಗಣೆಗಳನ್ನು ಸಾಕುವುದ... ಎಂದರೆ ಇದೇನಾ?

ಐತಿಹಾಸಿಕ ವಿಕ್ಟೋರಿಯಾ ಅಂದರೆ ಅದು... ರೋಗ ಉಚಿತ ಸಾವು ಖಚಿತ ಎಂಬಂತಾ... ಬಿಟ್ಟಿದೆ.

-ರಾ. ಸೋಮನಾಥ್

ಮೈನ್ಸ್ ಮಾಫಿಯಾದಲ್ಲಿ ಮಂತ್ರಿ ಮಕ್ಕಳು!

ಬಳ್ಳಾರಿ

ಬಳ್ಳಾರಿ ಗಣಿ ಮಾಫಿಯಾದೊಳಗೇ ಅಸಮಾಧಾನಗಳು ಸ್ಫೋಟಗೊಂಡಿವೆ. ಕಳೆದ ಶನಿವಾರ ನಾಲ್ಕೂವರೆ ದಶಕಗಳಷ್ಟು ಇತಿಹಾಸವಿರುವ ಎಂಎಸ್‌ಪಿಎಲ್ ಮೇಲೆ ನಡೆದ ದಾಳಿ ಗಣಿ ಮಾಫಿಯಾದೊಳಗಿನ ಕುತ್ಸಿತ ಸ್ಪರ್ಧೆಯನ್ನೂ, ಅದಕ್ಕಿರುವ ನಟೋರಿಯಸ್ ಆಯಾಮವನ್ನೂ ಅನಾವರಣಗೊಳಿಸಿದೆ. ಮುಂದಿನ ದಿನಗಳಲ್ಲಿ ಗಣಿ ಮಾಫಿಯಾ ತನ್ನ ಅಸ್ತಿತ್ವಕ್ಕಾಗಿ, ಪ್ರಾಬಲ್ಯಕ್ಕಾಗಿ ಅನುಸರಿಸಬಹುದಾದ ತಂತ್ರಗಾರಿಕೆಗಳಿಗೆ ಇದು ದಿಕ್ಸೂಚಿಯಂತಿದೆ. ಗಣಿ ಮಾಫಿಯಾದ ಈ ಜಿದ್ದಾಜಿದ್ದಿ ಜಿಲ್ಲೆಯ ಗಂಭೀರ ಸ್ವರೂಪದ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರಲಿದ್ದು, ಸವಾಲಾಗಿ ಪರಿಣಮಿಸಲಿದೆ.


ಕಳೆದ ಶನಿವಾರ ಮಧ್ಯಾಹ್ನ ಹನ್ನೆರಡು ಗಂಟೆಯ ಹೊತ್ತಿಗೆ ಸುಮಾರು ಅರವತ್ತು ಎಪ್ಪತ್ತು ಟಾಟಾ ಸುಮೋ, ಸ್ಕಾರ್ಪಿಯೋ, ಬೊಲೆರೋ ಟಾಟಾ ಇಂಡಿಕಾದಂತ ವಾಹನಗಳಲ್ಲಿ ಏಳು ನೂರರಷ್ಟು ಬಾಡಿಗೆ ಗೂಂಡಾಗಳು ಸಂಡೂರು ರಸ್ತೆಯಲ್ಲಿರುವ ಕಲ್ಲಹಳ್ಳಿ ಮಾರ್ಗವಾಗಿ ಎಂಎಸ್‌ಪಿಎಲ್‌ನ ವ್ಯಾಸನಕೆರೆ ಐರನ್‌ಓರ್ ಮೈನ್ಸಿಗೆ ನುಗ್ಗಿ ಅನಾಮತ್ತು 8 ಕೋಟಿಗೂ ಹೆಚ್ಚು ಮೌಲ್ಯದ ಗಣಿ ಯಂತ್ರೋಪಕರಣಗಳಿಗೆ ಬೆಂಕಿ ಹಚ್ಚಿ ನಾಶ ಮಾಡಿದ್ದಾರೆ. ಅಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಹಿಗ್ಗಾಮುಗ್ಗಾ ಥಳಿಸಿ ಓಡಿಸಿದ್ದಾರೆ. ಇಡೀ ದಾಳಿ, ಹೊಡೆದಾಟ, ಬಡಿದಾಟಗಳು ತೆಲುಗು ಸಿನಿಮಾ ಶೈಲಿಯಲ್ಲೇ ನಡೆದಿದ್ದರೂ ಅದು ಅತ್ಯಂತ ವ್ಯವಸ್ಥಿತವಾಗಿ ಪೂರ್ವ ನಿಯೋಜಿತವಾಗಿ ನಡೆದಿದೆಯೆಂಬುದಕ್ಕೆ ದಾಳಿಯ ಸ್ವರೂಪವೇ ಸಾಕ್ಷಿಯಾಗಿದೆ.

ದಾಳಿಯ ನಂತರ ಎಂಎಸ್‌ಪಿಎಲ್ ನೀಡಿದ ದೂರಿನ ಮೇರೆಗೆ ಪೋಲೀಸರು ಇಪ್ಪತ್ತೈದು ವಾಹನಗಳನ್ನು, 96 ಜನರನ್ನು ಬಂಧಿಸಿದ್ದಾರೆ. ಆದರೆ ದಾಳಿಯ ಪ್ರಮುಖ ಆರೋಪಿ ಕೋಣಂಕಿ ರಾಮಪ್ಪ (ಬೆಸ್ಟ್ ಸ್ಕೂಲ್ ರಾಮಪ್ಪ) ಹಾಗೂ ದಾಳಿಗೆ ಕುಮ್ಮಕ್ಕು ನೀಡಿರುವವರ ಯಾದಿಯಲ್ಲಿರುವ ಮಾಜಿ ಉಪಮುಖ್ಯಮಂತ್ರಿ ಎಂ.ಪಿ. ಪ್ರಕಾಶ್‌ರ ಪುತ್ರ ಎಂ.ಪಿ. ರವೀಂದ್ರ ಹಾಗೂ ಕುರುಗೋಡು ಶಾಸಕ ಸೂರ್ಯನಾರಾಯಣ ರೆಡ್ಡಿಯನ್ನು ಇದುವರೆಗೂ ಬಂಧಿಸಿಲ್ಲ.

ದಾಳಿಯ ಹಿನ್ನೆಲೆ

ಎಂಎಸ್‌ಪಿಎಲ್‌ನ ಮೇಲೆ ನಡೆದಿರುವ ಈ ದಾಳಿಗೆ ಎಂಎಸ್‌ಪಿಎಲ್ ಹಾಗೂ ಪಕ್ಕದ ವಡ್ಡರ ನಾಗಪ್ಪ ಮೈನ್ಸ್ ನಡುವೆ ಇರುವ ಗಡಿ ವಿವಾದವೇ ಕಾರಣ. ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಎರಡೂ ಕಂಪನಿಗಳ ನಡುವೆ ಮನಸ್ತಾಪಗಳು, ಸಣ್ಣಪುಟ್ಟ ಜಗಳಗಳು ನಡೆದಿವೆ. ಅಂತಿಮವಾಗಿ ಪ್ರಕರಣ ನ್ಯಾಯಾಲಯದ ಮೆಟ್ಟಲೇರಿದೆ. ಆದಿನ್ನೂ ಇತ್ಯರ್ಥವಾಗಿಲ್ಲ.

ಈ ಎಂಎಸ್‌ಪಿಎಲ್ ಬಳ್ಳಾರಿಯಲ್ಲಿರುವ ದೈತ್ಯಗಣಿ ಉದ್ದಿಮೆಗಳಲ್ಲೊಂದಾಗಿದ್ದು ತನ್ನ ಯಶಸ್ವಿ ಸಾಧನೆಯ ವಹಿವಾಟಿನ ಜೊತೆಗೆ ಅಕ್ಕಪಕ್ಕದ ಗಣಿ ಉದ್ದಿಮೆಗಳೊಂದಿಗೆ ಕ್ಯಾತೆಗೆ ಇಳಿದಿರುವ ಇತಿಹಾಸವೂ ಇದೆ. ಎಂಎಸ್‌ಪಿಎಲ್ ಗಣಿಗಾರಿಕೆ ನಡೆಸುತ್ತಿರುವ ವ್ಯಾಸನಕೆರೆ, ಕಾರಿಗನೂರು, ಸಂಡೂರುನಲ್ಲಿರುವ ಮೈನಿಂಗ್



ಜೀಪನ್ನು ಸುಟ್ಟುಹಾಕಿರುವುದು

ಪ್ರದೇಶಗಳಲ್ಲಿ ಗಡಿವಿವಾದಗಳು, ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವ ಮಾಹಿತಿಗಳಿವೆ. ಪ್ರಸ್ತುತ ದಾಳಿ ನಡೆದಿರುವ ವ್ಯಾಸನಕೆರೆ ಮೈನ್ಸ್ ಬಳಿ ಕೂಡಾ ಅಕ್ಕಪಕ್ಕದಲ್ಲಿರುವ ಎಸ್.ವಿ.ಕೆ. ಮೈನ್ಸ್ ಹಾಗೂ ವಡ್ಡರ ನಾಗಪ್ಪ ಮೈನ್ಸ್ ಗಡಿ ಕಾರಣಕ್ಕಾಗಿ ಬೇರೆ ಬೇರೆ ಇವೆ.

ಎಂ.ಎಸ್.ಪಿ.ಎಲ್.ನವರು ರಾತ್ರೋರಾತ್ರಿ ಪಕ್ಕದ ಮೈನಿಂಗ್‌ಗಳಿಂದ ಅದಿರು ಕದಿಯುತ್ತಾರೆಂಬ ಆರೋಪಗಳಿವೆ. ಜೊತೆಗೆ ವಡ್ಡರ ನಾಗಪ್ಪ ಮೈನ್ಸ್‌ಗೆ ಸೇರಿದ ಪ್ರದೇಶದಲ್ಲಿ ಮೈನಿಂಗ್‌ನ ವೇಸ್ಟ್ ಡಂಪನ್ನು ಸುರಿದು ನಂತರ ಅಲ್ಲಿರುವ ಕ್ವಾಲಿಟಿ ಓರ್‌ನ್ನು ಕಬಳಿಸುವ ಹುನ್ನಾರ ನಡೆಸಿದ್ದಾರೆಂದು ಹೇಳಲಾಗುತ್ತಿದೆ. ಎಂಎಸ್‌ಪಿಎಲ್‌ಗೆ ಈ ಬಗ್ಗೆ ಎಚ್ಚರಿಕೆ ನೀಡಿದ್ದರೂ ಕೇರ್ ಮಾಡಿಲ್ಲ.

ರೈಸಿಂಗ್ ಕಾಂಟ್ರಾಕ್ಟರುಗಳು

ವಡ್ಡರ ನಾಗಪ್ಪ ಮೈನ್ಸ್‌ನ ಹಾಲಿ ವಿವಾದವಿರುವ ಜಾಗದಲ್ಲಿ ಅರಣ್ಯ ಇಲಾಖೆಯ ಷರತ್ತಿನ ಪ್ರಕಾರ ಪರ್ಯಾಯ ಅರಣ್ಯೀಕರಣ ಮಾಡಿಲ್ಲವೆಂಬ ಕಾರಣಕ್ಕೆ ಗಣಿಗಾರಿಕೆಗೆ ಪರವಾನಗಿ ನೀಡಿಲ್ಲ, ವಡ್ಡರ ನಾಗಪ್ಪ ಮೈನ್ಸನ್ನು ಮೆಯಿಂಟೇನ್ ಮಾಡುವವರೂ ಇಲ್ಲದೆ ಗಣಿ ಕೆಲಸ ಸ್ಥಗಿತಗೊಂಡಿತ್ತು. ಆಗ ವಡ್ಡರ ನಾಗಪ್ಪ ಮೈನ್ಸಿಗೆ ರೈಸಿಂಗ್ ಕಾಂಟ್ರಾಕ್ಟರುಗಳಾಗಿ ಎಂಟ್ರಿಯಾದವರು ಮಾಜಿ ಉಪಮುಖ್ಯಮಂತ್ರಿ ಎಂ.ಪಿ. ಪ್ರಕಾಶ್‌ರ ಪುತ್ರ ಎಂ.ಪಿ. ರವೀಂದ್ರ ಹಾಗೂ ಕುರುಗೋಡು ಶಾಸಕ ಸೂರ್ಯನಾರಾಯಣ ರೆಡ್ಡಿ. ನ್ಯಾಯಾಲಯದಲ್ಲಿ ಪ್ರಕರಣವೂ ಇತ್ಯರ್ಥವಾಗದೇ ನೆನೆಗುದಿಗೆ ಬಿದ್ದು ಇತ್ತ ಎಂಎಸ್‌ಪಿಎಲ್‌ನ ಉಪಟಳವೂ ಹೆಚ್ಚಾದಾಗ ದಾಳಿಯ ತಂತ್ರ ರೂಪಿಸಿದರೆನ್ನಲಾಗಿದೆ. ಹೇಗೂ ಸರ್ಕಾರ ನಮ್ಮದೇ ಇರುವುದರಿಂದ ಇದನ್ನು ದಕ್ಕಿಸಿಕೊಳ್ಳಲೂ ಬಹುದೆಂಬ ಲೆಕ್ಕಾಚಾರವೂ ಇದೆ. ಇಂತಹ ಲೆಕ್ಕಾಚಾರಗಳ ಹಿನ್ನೆಲೆಯಲ್ಲಿ ನಡೆದದ್ದೇ ಎಂಎಸ್‌ಪಿಎಲ್ ಮೇಲಿನ ದಾಳಿ ಎಂದು ವಿಶ್ಲೇಷಿಸಲಾಗುತ್ತಿದೆ. ಈಗ ದಾಳಿಯಲ್ಲಿ ಹಾನಿಗೊಳಗಾಗಿರುವ ಕೋಟ್ಯಂತರ ರೂಪಾಯಿ ಯಂತ್ರೋಪಕರಣಗಳ ಹಣ ಕಂಪನಿ ಮಾಡಿಸಿರುವ ವಿಮೆಯಿಂದ ವಾಪಸ್ಸು ಬರಬಹುದು. ಈಗ ತಕರಾರಿರುವುದು, ಜಿಲ್ಲೆಯ ಜನರ ಚರ್ಚೆಗೆ ಗ್ರಾಸವಾಗುತ್ತಿರುವುದು ದಾಳಿ ನಡೆದ ಸ್ವರೂಪ ಹಾಗೂ ದಾಳಿ ಮಾಡಿದವರು ರಕ್ಷಿಸಲ್ಪಡುತ್ತಿರುವುದರ ಬಗ್ಗೆ....

ಎಂ.ಪಿ. ಪ್ರಕಾಶ್‌ರ ಒತ್ತಡ

ಈ ದಾಳಿಯ ಪ್ರಮುಖ ಆರೋಪಿ ಬೆಸ್ಟ್‌ಸ್ಕೂಲ್ ರಾಮಪ್ಪ ಎಂ.ಪಿ. ಪ್ರಕಾಶ್‌ರ ಛೇಲಾ. ದೂರಿನಲ್ಲಿ ಖುದ್ದು ಕೋಲಂಕಿ ರಾಮಪ್ಪನೇ ಮುಂದೆ ನಿಂತು ಇಡೀ ದಾಳಿಯನ್ನು [illegible] ರೆಡ್ಡಿಯವರೇ ಆಗಿದ್ದಾರೆ. ಹಾಗೆ ನೋಡಿದರೆ [illegible] ಪಿಎಲ್ ನೊಂದಿಗೆ [illegible] ವರೆಗೂ ಒಡನಾಟವಿಟ್ಟುಕೊಂಡಿದ್ದರೂ ಅವರ ಪುತ್ರ [illegible] ರವೀಂದ್ರ ವಡ್ಡರನಾಗಪ್ಪ ಮೈನ್ಸ್‌ನ ರೈಸಿಂಗ್ ಕಾಂಟ್ರಾಕ್ಟರಾದ ನಂತರ ಸಂಬಂಧ ಹಳಸಿಕೊಂಡಿತೆಂದೂ ಹೇಳಲಾಗುತ್ತಿದೆ.

ದಾಳಿಗೆ ಪ್ರಮುಖ ಕಾರಣಕರ್ತರಾದವರನ್ನು ಬಂಧಿಸದೇ ಸಾಮಾನ್ಯರನ್ನು ಬಂಧಿಸಿರುವುದಕ್ಕೆ, ಪೋಲೀಸರ ಮೇಲೆ ಎಂ.ಪಿ. ಪ್ರಕಾಶರು ಹೇರಿರುವ ರಾಜಕೀಯ ಒತ್ತಡವೇ ಕಾರಣ ಎಂಬ ಟೀಕೆಗಳು ದಟ್ಟವಾಗಿವೆ. ಬಳ್ಳಾರಿ ಪೋಲೀಸರು ಪಿಕ್‌ಪಾಕೆಟ್ ಕಳ್ಳರನ್ನು, ಮಟ್ಕಾ ಚೀಟಿ ಬರೆಯುವವರನ್ನು ಹಿಡಿದರೂ ವೀರಾವೇಶದ ಪೋಜು ಕೊಡುತ್ತಾರೆ. ಆದರೆ ಇಡೀ ಜಿಲ್ಲೆಯ ಗಣಿ ವಲಯಕ್ಕೊಂದು ಫೈಟ್ ಇದ್ದಂತಿರುವ ಈ ದಾಳಿಯ ಬಗ್ಗೆ ತುಂಬಾ ಹಗುರವಾಗಿ ನಡೆದುಕೊಳ್ಳುತ್ತಿದ್ದಾರೆ. ಇಡೀ ಪ್ರಕರಣವನ್ನು ನಿರ್ವಹಿಸುವಲ್ಲಿ ಅಡಿಷನಲ್ ಡಿವೈಎಸ್ಪಿ ಡಿ.ಸಿ.ರಾಜಪ್ಪ ಮತ್ತವರ ಆಧೀನ ಅಧಿಕಾರಿಗಳ ವರ್ತನೆ ಚಿಕ್ಕಮಕ್ಕಳಾಡುವ ಕಳ್ಳ ಪೋಲೀಸ್ ಆಟದಂತಿದೆ.

ದಾಳಿಯ ನಂತರ ಸಚಿವ ಶ್ರೀರಾಮುಲು ಹಾಗೂ ಕೆಲ ಬಿಜೆಪಿ ಮುಖಂಡರು ಖಂಡಿಸಿ ಹೇಳಿಕೆ ನೀಡಿದ್ದರೆ, ದಾಳಿಗೆ ಕುಮ್ಮಕ್ಕು ನೀಡಿದ್ದಾರೆಂಬ ಆಪಾದನೆ ಹೊತ್ತಿರುವ ಎಂ.ಪಿ. ರವೀಂದ್ರ ಆಗಲೀ, ಶಾಸಕ ಸೂರ್ಯನಾರಾಯಣ ರೆಡ್ಡಿಯಾಗಲಿ ಇದುವರೆಗೂ ಪ್ರತಿಕ್ರಿಯಿಸಿಲ್ಲ. ದಾಳಿಕೋರರಿಗೆ ರಕ್ಷಣೆ ನೀಡಿದ್ದಾರೆಂಬ ಆರೋಪಗಳಿಗೆ ಎಂ.ಪಿ. ಪ್ರಕಾಶ್‌ರವರೂ ಉತ್ತರಿಸಿಲ್ಲ.

ಮಂತ್ರಿ ಚೆನ್ನಿಗಪ್ಪ ಅಕ್ರಮ ಗಣಿಗಾರಿಕೆ ತಡೆಯುತ್ತೇವೆ, ಗಡಿ ವಿವಾದಗಳನ್ನು ಸರ್ವೆ ಮಾಡಿ ಬಗೆಹರಿಸುತ್ತೇವೆ ಎಂದು ಹೇಳಿಕೆಗಳನ್ನೇನೋ ನೀಡುತ್ತಾರೆ. ಆನಂತರ ಡೀಲುಗಳನ್ನು ಕುದುರಿಸಿಕೊಂಡು ಸುಮ್ಮನಾಗುತ್ತಾರೆ. ಅಧಿಕಾರಿಗಳೂ ಬಂದಷ್ಟು ಆಮದನಿ ಪಡೆದು ಆರಾಮಾಗಿರುತ್ತಾರೆ. ಹಾಗಾಗಿ ಗಣಿ ಮಾಫಿಯಾ ಬಲಾಬಲದ ಪ್ರದರ್ಶನಕ್ಕಿಳಿದುಬಿಟ್ಟಿದೆ. ಈ ರಾಜ್ಯದಲ್ಲಿ ಸರ್ಕಾರವೊಂದು ಅಸ್ತಿತ್ವದಲ್ಲಿದೆಯೇ? ಉತ್ತರಿಸುವವರಾರು?



ಆಕ್ರೋಶಕ್ಕೆ ಆಹುತಿಯಾದ ಜೆಸಿಬಿ

-ವರದಿಗಾರ

M.P. ಊರಲ್ಲಿ ಹಲ್ಲೆ ಪ್ರೇಮಕ್ಕೂ ದೊಣ್ಣೆ ನಾಯ್ಕನ ಪರ್ಮಿಟ್ಟೆ?

ರಾಯಚೂರು

ರಾಯಚೂರಿನ ನಾಯ್ಕರ ಪಾಳೆಗಾರಿಕೆಯ ಸ್ಯಾಂಪಲ್ ಘಟನೆಯಿದು. ಎಂ.ಪಿ. ವೆಂಕಟೇಶ್ ನಾಯ್ಕನ ಊರಾದ ದೇವದುರ್ಗ ತಾಲ್ಲೂಕು ಅರಕೇರದಲ್ಲಿ ಪಾಳೇಗಾರರು ಹುಸೇನಪ್ಪ ಮತ್ತು ಯಲ್ಲಮ್ಮ ಎಂಬ ದಂಪತಿಗಳನ್ನು ಸಂತೆಯ ವೇಳೆಯೇ ಅರೆಬೆತ್ತಲೆ ಮಾಡಿ, ಕಂಬಕ್ಕೆ ಕಟ್ಟಿ ಥಳಿಸಿ ತಮ್ಮ ರಾಕ್ಷಸಿ ಬುದ್ಧಿ ತೋರಿಸಿದ್ದಾರೆ.



ವೆಂಕಟೇಶ್ ನಾಯ್ಕ

ಇಷ್ಟಕ್ಕೂ ಈ ದಂಪತಿಗಳು ತಪ್ಪೇ ಮಾಡಿಲ್ಲ, ಪ್ರಬಲ ನಾಯ್ಕ ಜನಾಂಗದ ಜಂತ್ಲಿ ಮನೆತನದ ಹುಡುಗಿ ಶ್ರೀದೇವಿ ಹುಸೇನಪ್ಪ-ಯಲ್ಲಮ್ಮರ ಮಗ ಹನುಮೇಶ ಮಧ್ಯೆ ಅರಳಿದ ಪ್ರೇಮ ಮದುವೆಯತ್ತ ಪ್ರಯಾಣಿಸಿದ್ದೇ ಪಾಳೆಗಾರರ ಪಿತ್ತ ನೆತ್ತಿಗೇರಲು ಕಾರಣವಾಗಿತ್ತು.

ಸಂತೆಯಲ್ಲೇ ಹಲ್ಲೆ!

ಮೊನ್ನೆ ಗುರುವಾರ (18.5.2006) ಅರಕೇರದಲ್ಲಿ ಸಂತೆಯ ದಿನ. ಪಾಳೆಗಾರ ಜಂತ್ಲಿಯ 30 ಜನರ ಗ್ಯಾಂಗು ಭರ್ಜರಿ ಸಾರಾಯಿ ಕುಡಿದು ತೂರಾಡುತ್ತಾ ಹುಸೇನಪ್ಪನ ಮನೆಗೆ ಬಂದು, ಮನೆಯಲ್ಲಿನ ದವಸಧಾನ್ಯ, ಪಾತ್ರೆ, ಪಗಡೆಗಳನ್ನೆಲ್ಲ ಚೆಲ್ಲಾಪಿಲ್ಲಿ ಮಾಡಿ, ಹುಸೇನಪ್ಪ, ಯಲ್ಲಮ್ಮರ ಮೇಲೆ ಹಲ್ಲೆ ಮಾಡಿ, ರಸ್ತೆಗೆ ಎಳೆತಂದಿದ್ದಾರೆ. ಮನೆಯ ಮುಂದಿನ ವಿದ್ಯುತ್ ಕಂಬಕ್ಕೆ, [illegible] 10 [illegible] ! ಅರಕೇರದಲ್ಲಿ ನಾಯ್ಕರ

ದಬ್ಬಾಳಿಕೆಗೆ ಹೆದರುವ ಜನ ಮೂಕಪ್ರೇಕ್ಷಕರಂತೆ ಎಲ್ಲವನ್ನೂ ನೋಡುತ್ತಾ ನಿಂತಿದ್ದಾರೆ. ಕಾಪಾಡಲು ಬಂದ ಹುಸೇನಪ್ಪನ ಸಂಬಂಧಿ ಮಲ್ಲಪ್ಪನ ಮೇಲೂ ಹಲ್ಲೆ ಮಾಡಲಾಗಿದೆ. ಮಡಿವಾಳ ಜಾತಿಗೆ ಸೇರಿದ ಹುಸೇನಪ್ಪ ದಂಪತಿಗಳಿಗೆ ಗುರುವಾರವೇ ಊರುಬಿಡಲು 'ಫರ್ಮಾನು' ಹೊರಡಿಸಿದ್ದಾರೆ. ಸಂಸದನ ಮನೆ ಪಕ್ಕದಲ್ಲೇ ಇರುವ ಇಸ್ತ್ರೀ ಡಬ್ಬಾ ಅಂಗಡಿಯನ್ನು ಧ್ವಂಸ ಮಾಡಿದ್ದಾರೆ, ಮಡಿವಾಳ ಜನಾಂಗದ ಹಲವರ ಮೇಲೆ ಹಲ್ಲೆಯನ್ನು ಮಾಡಿದ್ದಾರೆ. ಪಕ್ಕದ ಮನೆಯವರು ಕಾಪಾಡದೇ ಹೋಗಿದ್ದರೆ ಹುಸೇನಪ್ಪನ ಕಿರಿಮಗಳು ಬೀದಿಯಲ್ಲಿ ಬೆತ್ತಲೆಯಾಗಬೇಕಿತ್ತು.

ಪ್ರೇಮ ಪ್ರಯಾಣ!

ಬಿ.ಎ. ಓದುತ್ತಿರುವ ಹುಸೇನಪ್ಪನ ಮಗ ಹನುಮೇಶ ಹಾಗೂ ಪಕ್ಕದ ಮನೆಯ ಗುಂಡಪ್ಪ ಜಂತ್ಲಿ ಎಂಬ ನಾಯ್ಕ ಪಾಳೆಗಾರನ ಮಗಳು ಶ್ರೀದೇವಿ ಇಬ್ಬರೂ ಪ್ರೇಮಿಸಿ, ಮದುವೆಯಾಗಲು ನಿರ್ಧರಿಸಿ ಮೇ 10 ರಂದು ಬೆಂಗಳೂರಿಗೆ ಬಂದಿದ್ದಾರೆ. ಇಲ್ಲಿ ಊರಲ್ಲಿ ಪಾಳೆಗಾರರು ಕುದಿಯತೊಡಗಿದ್ದಾರೆ. ಕೊನೆಗೆ ಯಲ್ಲಮ್ಮನೇ ಬೆಂಗಳೂರಿಗೆ ಬಂದು ಶ್ರೀದೇವಿಯನ್ನು ಸಿರವಾರದವರೆಗೂ ಕರೆತಂದು, ಶ್ರೀದೇವಿಯ ಅಣ್ಣ ಸಿರಿವಂತನಿಗೆ ಒಪ್ಪಿಸಿದ್ದಾಳೆ. ತಂಗಿ ಶ್ರೀದೇವಿಯನ್ನು ಸಂಬಂಧಿಕರ ಮನೆಯಲ್ಲಿರಿಸಿದ ಸಿರಿವಂತ, ಅರಕೇರಕ್ಕೆ ಬಂದು ತನ್ನ ತಂಗಿ ಎಲ್ಲಿ? ಎಂಬ ನಾಟಕ ಶುರು ಮಾಡಿ, ಹನುಮೇಶನ ತಂದೆತಾಯಿಗಳನ್ನು ಸಾರ್ವಜನಿಕರ ಮಧ್ಯದಲ್ಲೇ ಥಳಿಸಿದ್ದಾನೆ.

ಎಂ.ಪಿ. ವೆಂಕಟೇಶ್ ನಾಯ್ಕನ ಕುಮ್ಮಕ್ಕಿನಿಂದ ಅರಕೇರದ ನಾಯ್ಕರೆಲ್ಲ ಇತರ ಅಸಹಾಯಕ ಜಾತಿಗಳ ಜನರ ಮೇಲೆ ದರ್ಪ ತೋರುತ್ತಲೇ ಬಂದಿದ್ದಾರೆ. ಹುಸೇನಪ್ಪನ ಗುಡಿಸಲಿರುವ ಜಾಗದ ಮೇಲೆ ಕಣ್ಣು ಹಾಕಿದ್ದ ಶ್ರೀದೇವಿಯ ಚಿಕ್ಕಪ್ಪನೂ ಇದನ್ನೇ ಅವಕಾಶ ಮಾಡಿಕೊಂಡಿದ್ದಾನೆ. ಹಲ್ಲೆ ನಡೆಯುವಾಗ ಪಿಎಸ್‌ಐ ಪವಾರ್‌ಗೆ ಫೋನ್ ಮೂಲಕ ಸುದ್ದಿ ಮುಟ್ಟಿದರೂ ಆತ ಸ್ಟೇಷನ್ನಲ್ಲೇ ಮಲಗಿ, ಎಂಪಿಗೆ ನಿಷ್ಠೆ ಮೆರೆದಿದ್ದಾನೆ.

ಯೂಸ್‌ಲೆಸ್ ಎಸ್.ಪಿ. ಹಿತೇಂದ್ರನಿಗೆ ಮೂರು ಗಂಟೆಗೆ ಸುದ್ದಿ ಮುಟ್ಟಿದಾಗ ಆತ ಸಚಿವ ಅಲ್ಲೋಡ್ ಹನುಮಂತಪ್ಪನ ಸೇವೆಯಲ್ಲಿ ಮುಳುಗಿಹೋಗಿದ್ದರಿಂದ ಪುರುಸೊತ್ತು ಇರಲಿಲ್ಲ. ದೇವದುರ್ಗ ಪೋಲೀಸರು ರಾತ್ರಿ 10 ಕ್ಕೆ ಅರಕೇರಕ್ಕೆ ತೆರಳಿ, ಹಲ್ಲೆಗೊಳಗಾದವರಿಗೆ ಚಿಕಿತ್ಸೆ ಕೊಡಿಸುವ ಹೊತ್ತಿಗೆ ಮುಂಜಾನೆಯಾಗಿ ಹೋಗಿತ್ತು.

[illegible] ನಡೆದಿದ್ದು, ಪೋಲೀಸರ FIR ನಲ್ಲಿ 4 ಗಂಟೆ [illegible]

ಎಂ.ಪಿ.ಯ ಪುಂಡ ಪುತ್ರ

1993 ರಿಂದ ಒಂದು ಅವಧಿ ಬಿಟ್ಟು ಸತತವಾಗಿ ಎಂಪಿಯಾಗುತ್ತಲೇ ಇರುವ ವೆಂಕಟೇಶ್ ನಾಯ್ಕನ ಪಾಳೆಗಾರಿಕೆ ಮಿತಿ ಮೀರಿ ಹೋಗಿದೆ. ಪುಂಡ ಪುತ್ರ ರಾಜಶೇಖರ ನಾಯ್ಕನನ್ನು ಜಿ.ಪಂ. ಸದಸ್ಯನನ್ನಾಗಿ ಮಾಡಿರುವ ಎಂ.ಪಿ.ಗೆ ಇತರೆ ಜಾತಿಯವರನ್ನು ತುಳಿಯುವುದೇ ಕಾಯಕವಾಗಿದೆ. ಪುಂಡಪುತ್ರ ರಾಜಶೇಖರ ನಾಯ್ಕ ಎಲೆಕ್ಷನ್ನಿನಲ್ಲಿ ಹಂಚಿದ್ದ ಸಾರಾಯಿ ಕುಡಿದ ಸಹೋದರರಿಬ್ಬರು ಕ್ವಿಟ್ಲಿಕ್ಸ್ ಪಾಲಿಟಿಕ್ಸ್ ನಂಬಿ [illegible] ಒಬ್ಬ ಜೀವ ಕಳೆದುಕೊಂಡಿದ್ದ. ಈ ಹಿಂದೆ ಹುಡುಗಿಯೊಬ್ಬಳ ಅಪಹರಣದ ಕೇಸ್‌ [illegible] 3 ತಿಂಗಳು [illegible] ಕಂಡು ಬಂದಿರುವ ರಾಜಶೇಖರ ನಾಯ್ಕ, ತನ್ನ ಸ್ವಂತ ಊರಲ್ಲೇ ಹಲ್ಲೆ [illegible]. ಹಲ್ಲೆಗೊಳಗಾದವರನ್ನು ಭೇಟಿಯಾಗದೇ, ಹಲ್ಲೆಕೋರರನ್ನು ರಕ್ಷಿಸುತ್ತಿದ್ದಾನೆ.

[illegible]



ಸರಕಾರೀ ಕೆರೋಸಿನ್ ಚಾಂದನಿ ಸ್ವತ್ತೇ?

ಧಾರವಾಡ, ಹಾವೇರಿ, ಗದಗ

ಸರ್ಕಾರಿ ಕೆರೋಸಿನ್ ಕಳ್ಳ ಇಬ್ರಾಹಿಂ ಚಾಂದನಿ!

ಇವನು ತೆಲಗಿ ದೋಸ್ತ್

ಸರ್ಕಾರಿ ಸೀಮೆಎಣ್ಣೆಯನ್ನು ಕುಡಿಯುತ್ತಲೇ ಈ ಮಲಯಾಳಿ ಸಾಬಿ ರಾಜಾರೋಷವಾಗಿ ಬದುಕುತ್ತಿದ್ದಾನೆ! ಧಾರವಾಡ, ಗದಗ, ಹಾವೇರಿ ಜಿಲ್ಲೆಗಳ ಪಡಿತರ ಸೀಮೆಎಣ್ಣೆಗೆಲ್ಲ ಈ ಇಬ್ರಾಹಿಂ ಮೈನುದ್ದೀನ ಚಾಂದನಿಯೇ ಅನಧಿಕೃತ ಒಡೆಯನಂತಾಗಿ ಹೋಗಿದ್ದಾನೆ. ಈ ಮೂರು ಜಿಲ್ಲೆಗಳ ಪೋಲೀಸ್ ಮತ್ತು ಆಹಾರ ಹಾಗೂ ನಾಗರಿಕ ಪೂರೈಕೆ ಇಲಾಖೆಗಳೊಂದಿಗೆ 'ಹಾಥ್ ಮೆ ಹಾಥ್' ಸಂಬಂಧ ಹೊಂದಿರುವ ಚಾಂದನಿಯಿಂದಾಗಿ ಮೂರು ಜಿಲ್ಲೆಗಳ ಬಡಜನರು ಸೀಮೆಎಣ್ಣೆ ಸಿಗದೇ ಪರದಾಡುತ್ತಿದ್ದಾರೆ. ಈ ಇಬ್ರಾಹಿಂಗೆ ತೆಲಗಿಯ ಲಿಂಕೂ ಉಂಟು, ಶಾಸಕ ಹೊನ್ನಳ್ಳಿಯ ಸಪೋರ್ಟೂ ಉಂಟು.



"ಚಾಂದನಿ ರಾತ್ ಹೈ ಸಂಜು-ಮಂಜು ಸಾಥ್ ಹೈsss"

ಇಬ್ರಾಹಿಂ ಚಾಂದನಿಯ ಕಾರುಬಾರುಗಳೆಲ್ಲ ಆರಂಭವಾಗುವುದು ರಾತ್ರಿಯೇ ಆದರೂ ಅದಕ್ಕೂ ಮೊದಲು ಹಗಲಲ್ಲಿ ಒಂದಿಷ್ಟು 'ಹೋಮ್‌ವರ್ಕ್' ಮಾಡಿಯೇ ಬಿಟ್ಟಿರುತ್ತಾನೆ. ಸೀಮೆಎಣ್ಣೆ ಬ್ಯಾರಲ್‌ನಷ್ಟೇ ದೊಡ್ಡ ಹೊಟ್ಟೆಯ ಚಾಂದನಿಗೆ ಎಂದೂ ಇಂಗದ ಹಸಿವಿನ ಸಮಸ್ಯೆ! ಅದಕ್ಕವನು ತನ್ನ ಬ್ಯಾರಲ್ ಹೊಟ್ಟೆಗೆ ಸರ್ಕಾರಿ ಸೀಮೆಎಣ್ಣೆ ತುಂಬುತ್ತಲೇ ಇರುತ್ತಾನೆ.

ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ವಿತರಣೆಯಾಗುವ ಪಡಿತರ ಸೀಮೆಎಣ್ಣೆಯನ್ನು ರೇಷನ್‌ಕಾರ್ಡ್‌ದಾರರಿಗೆ ಹಂಚಬೇಕಾದ ಏಜಂಟರು, ಸೀಮೆಎಣ್ಣೆ ಬ್ಯಾರಲ್‌ಗಳನ್ನೆಲ್ಲ ಚಾಂದನಿ ಎಂಬ ಮಲಯಾಳಿಗೆ ಮಾರಿಕೊಳ್ಳುತ್ತಾರೆ. ಲೀಟರ್‌ವೊಂದಕ್ಕೆ 20 ರೂ.ನಂತೆ ಕೆರೋಸಿನ್ ಖರೀದಿಸುವ ಚಾಂದನಿ ರಾತ್ರಿಯಾಗುವುದನ್ನೇ ಕಾಯುತ್ತಾನೆ. ಎನ್.ಎಚ್. 4 ರಲ್ಲಿ ಓಡಾಡುವ ತಮಿಳುನಾಡು ಟ್ರಕ್‌ಗಳೇ ಚಾಂದನಿಯ ಕೆರೋಸಿನ್ ಗಿರಾಕಿಗಳು! ತಮಿಳು ಟ್ರಕ್‌ಗಳಿಗೆ ಲೀಟರ್‌ವೊಂದಕ್ಕೆ 29 ರೂ.ನಂತೆ ಕರ್ನಾಟಕ ಸರ್ಕಾರದ ಸೀಮೆಎಣ್ಣೆ ಮಾರುವ ಈ ಮಲಯಾಳಿ ಇಬ್ರಾಹಿಂಗೆ ಲೀಟರ್‌ಗೆ 9 ರೂ. 'ಆರಾಮ್'ಸೆ' ದಕ್ಕಬಡುತ್ತದೆ. ಪೋಲೀಸಪ್ಪಗಳು, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯವರೆಲ್ಲ ಈ ಕೆರೋಸಿನ್ ಕಳ್ಳರ ಕೂಟಕ್ಕೆ ಗೈಡ್‌ಗಳಂತಾಗಿ ಹೋಗಿದ್ದಾರೆ. ಕರ್ನಾಟಕ ಸರ್ಕಾರದ ಸೀಮೆಎಣ್ಣೆ ತುಂಬಿಕೊಂಡ ತಮಿಳುನಾಡು ಟ್ರಕ್‌ಗಳು ಚಲಿಸುತ್ತಲೇ ಇವೆ, ಕೆರೋಸಿನ್ ಖದೀಮ ಇಬ್ರಾಹಿಂ ಚಾಂದನಿಯ ಆಸ್ತಿ ಬೆಳೆಯುತ್ತಲೇ ಇದೆ, ಮೂರು ಜಿಲ್ಲೆಗಳ ಒಲೆಗಳು, ಸ್ಟೋವ್‌ಗಳು, ಲಾಟೀನುಗಳು ಸೀಮೆಎಣ್ಣೆಯನ್ನೇ ಕಾಣದೇ ಮೂಲೆ ಸೇರುತ್ತಲೇ ಇವೆ....

ಇಬ್ರಾಹಿಂ ಚಾಂದನಿಗೆ ಸೀಮೆಎಣ್ಣೆ ಸಂಗ್ರಹಿಸಿ ಕೊಡುವ ಪ್ರಮುಖರೆಂದರೆ ಹುಬ್ಬಳ್ಳಿಯ ಸೆಟ್ಲ್‌ಮೆಂಟ್‌ನ ಸಂಜು ಮತ್ತು ಮಂಜು ಎಂಬ ಗೂಂಡಾಗಳು. ಡಜನ್ ಟ್ಯಾಂಕರ್‌ಗಳನ್ನಿಟ್ಟುಕೊಂಡಿರುವ ಈ ಖತರ್‌ನಾಕ್‌ಗಳು ಮೂರು ಜಿಲ್ಲೆಗಳ ಏಜಂಟರಿಂದ ಸರ್ಕಾರಿ ಸೀಮೆಎಣ್ಣೆಯನ್ನೆಲ್ಲ ಖರೀದಿಸುತ್ತಾರೆ. ಹೈವೇನಲ್ಲಿರುವ ತಡಸ ಕ್ರಾಸ್ ಬಳಿ ಇರುವ ಶರ್ಮಾ, ಶಿವಾ, ಬಾಲಾಜಿ, ಎವರ್‌ಗ್ರೀನ್ ಎಂಬ ನಾಲ್ಕು ಹೋಟೆಲ್‌ಗಳಲ್ಲಿ ಈ ಕಳ್ಳ ಸೀಮೆಎಣ್ಣೆಯನ್ನು ಸಂಗ್ರಹಿಸಿಟ್ಟು, ತಮಿಳುನಾಡಿನ ಟ್ರಕ್ಕುಗಳಿಗೆ ಮಾರುತ್ತಲೇ ಇದ್ದಾರೆ. ದಿನವೊಂದಕ್ಕೆ 50 ಬ್ಯಾರಲ್‌ಗಳಷ್ಟು ಸೀಮೆಎಣ್ಣೆ ಸಂಗ್ರಹಿಸಿ, ಮಾರುತ್ತದೆ ಇಬ್ರಾಹಿಂ ಚಾಂದನಿಯ ಗ್ಯಾಂಗ್!

ಮಾಜಿ ಸಚಿವ, ಹಾಲಿ ಶಾಸಕ ಜಬ್ಬಾರ್‌ಖಾನ್ ಹೊನ್ನಳ್ಳಿಯೇ ಇಬ್ರಾಹಿಂಗೆ 'ಬಡಾಭಾಯಿ' ಇದ್ದಂತೆ. ಕೆರೋಸಿನ್ ಕಳ್ಳರಿಗೆ ತಡಸದ ಸಿಪಿಐ ಖೋತ್ ಎಂಬ ಮಹಾನ್ ಖದೀಮನ ಸಪೋರ್ಟಿದೆ. 18.11.2005 ರಂದು ಇಬ್ರಾಹಿಂ ವಿರುದ್ಧ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದ ಸಮತಾ ಸೈನಿಕ ದಳದ ಧುರೀಣ ನಾಗಪ್ಪ ಹಂಚಿನಮನಿ ಮತ್ತು ಅರೆಬರೆ ಪೆದ್ದಿ ನಿರ್ಮಲಾ ಹಂಜಗಿಯವರೀಗ ಇಬ್ರಾಹಿಂನ ಸಕಲ 'ಸೇವೆ'ಗಳಿಗೆ ಒಲಿದು ತೆಪ್ಪಗಾಗಿದ್ದಾರೆ. ಈಗ ರಫೀಕ್ ಬೇಪಾರಿ ದಾಖಲೆಗಳ ಸಮೇತ ಲೋಕಾಯುಕ್ತರಿಗೆ ದೂರು ಸಲ್ಲಿಸಿ, ಹಾವೇರಿಯ ಎಸ್.ಪಿ.ಗೂ ದೂರು ನೀಡಿದ್ದರೂ ನಯಾಪೈಸೆ ಪ್ರಯೋಜನವಾಗಿಲ್ಲ.


ತೆಲಗಿ ದೋಸ್ತಿ! ಹತ್ತು ಕೋಟಿ ಆಸ್ತಿ

ಈ ಹಿಂದೆ ಬಾಂಬೆಯಿಂದ ಹುಬ್ಬಳ್ಳಿಗೆ ಬರುತ್ತಿದ್ದ ಬಸ್ಸಿನಲ್ಲಿ ಅಬ್ದುಲ್ ಕರೀಮ ತೆಲಗಿಯ ಪಾಪದ ಛಾಪಾ ಹಣ ತುಂಬಿದ್ದ ಗೋಣಿಚೀಲಗಳು ಸಿಕ್ಕಿದ್ದವಲ್ಲ... ಆ ಚೀಲಗಳ ಜೊತೆ ಸಿಕ್ಕಿಬಿದ್ದವನು ಇದೇ ಇಬ್ರಾಹಿಂನ ತಮ್ಮ ರಫೀಕ್ ಚಾಂದನಿ! ಆಗಿನ ಸಿಪಿಐ ವಿಜಯ ಕುಮಾರ್ ಡಂಬಳ ತೆಲಗಿ ತುಂಡು ರಫೀಕನನ್ನು ಒದ್ದು ಒಳ ಹಾಕಿದ್ದರು. ನಂತರ ಇಬ್ರಾಹಿಂನ ಕರಾಮತ್ತಿನಿಂದ ರಫೀಕ್ ಪಾರಾಗಿಬಿಟ್ಟಿದ್ದ.

ಹೊಸಪೇಟೆಯಲ್ಲೂ ಕಂತ್ರಿ ಕೆಲಸಗಳನ್ನು ಮಾಡುತ್ತಿದ್ದ ಇಬ್ರಾಹಿಂ ಸಹೋದರರಾದ ರಫೀಕ್ ಚಾಂದನಿ, ಹಮೀದ್ ಚಾಂದನಿಗಳು ಅಲ್ಲಿನ ಪೋಲೀಸ್ ಇಲಾಖೆಗೆ ವಿಜಯಕುಮಾರ್ ಡಂಬಳ ಬರುತ್ತಿದ್ದಂತೆಯೇ ರಾತ್ರೋರಾತ್ರಿ ಹೊಸಪೇಟೆಯಿಂದ ಓಡಿ ಬಂದು ಹುಬ್ಬಳ್ಳಿಯಲ್ಲೇ 'ಸೇಫ್' ಆಗಿ ತಮ್ಮ ಅಣ್ಣನ ದಂಧೆ ಅಭಿವೃದ್ಧಿಗೆ 'ಬೆವರು' ಹರಿಸುತ್ತಿದ್ದಾರೆ.

ಕೇರಳದ ಕಳ್ಳನಿವನು....

ಇಪ್ಪತ್ತು ವರ್ಷಗಳ ಹಿಂದೆ ಕೇರಳದ ಮಂಜೇಶ್ವರದ ಕೊಂಜಮತ್ತೂರಿನ ಇಬ್ರಾಹಿಂ ಬರಿಗೈಲಿ ಹುಬ್ಬಳ್ಳಿಗೆ ಬಂದು ಬನಿಯನ್, ಅಂಡರ್‌ವೇರ್‌ಗಳನ್ನು ಹೊತ್ತು ಮಾರುತ್ತಿದ್ದ. ಬಡತನವಿತ್ತು, but ಕಂತ್ರಿ ಬುದ್ಧಿ ಬೇರೆ ಇತ್ತಲ್ಲ... ಅದೇ ಇಬ್ರಾಹಿಂನ 'ಆಸ್ತಿ'ಯಾಗಿತ್ತು. ದರಬಾರ್, ನರಸಿಂಗಸಾ, ರಾಯಲ್, ಪಿಸ್ತೂಲ್ ಎಂಬ ಬೀಡಿ ಉದ್ಯಮಗಳವರು ಕಳಪೆ ಎಂದು ಲೇಬಲ್ಲು ಮಾಡಿದ ಬೀಡಿಗಳನ್ನೇ ಹೊಡೆದುಕೊಂಡು 'ಚಾಂದನಿ ಬೀಡಿ' ಎಂಬ ಹೆಸರಲ್ಲಿ ಮಾರ್ಕೆಟ್ಟಿಗೆ ಬಿಟ್ಟ ಇಬ್ರಾಹಿಂಗೆ ರೊಕ್ಕ ಒಲಿಯತೊಡಗಿತ್ತು.



ತಡಸದ ಡಾಬಾಗಳಲ್ಲಿ ಕೆರೋಸಿನ್ ಸಂಗ್ರಹ


ನಂತರ ಟ್ರಾವೆಲ್ಸ್ ದಂಧೆಗೆ ಕೈಯಿಟ್ಟ ಇಬ್ರಾಹಿಂ 'ಗೋವಾ ಟ್ರಾವೆಲ್ಸ್', 'ಚಾಂದನಿ ಟ್ರಾವೆಲ್ಸ್'ಗಳನ್ನು ಶುರು ಮಾಡಿದ. ಈಗ ಸೀಮೆಎಣ್ಣೆಯ ಹಡಬೆ ದುಡ್ಡು ಹರಿದು ಬರುತ್ತಿದೆ. ಕೇರಳದ ಕೊಂಜಮತ್ತೂರಲ್ಲಿ 50 ಲಕ್ಷದ ಮನೆ, ಶಿಗ್ಗಾಂವ ತಾಲ್ಲೂಕಲ್ಲಿ ಹೊಲಗಳನ್ನು ಖರೀದಿಸಿರುವ ಇಬ್ರಾಹಿಂ ಹಳೇ ಬಸ್ ನಿಲ್ದಾಣದಲ್ಲಿನ ಹೊಸ ಕಾಂಪ್ಲೆಕ್ಸ್‌ನಲ್ಲಿ 14 ಲಕ್ಷ ಕೊಟ್ಟು ಅಂಗಡಿಯನ್ನೂ ಖರೀದಿಸಿದ್ದಾನೆ. ಸಿಬಿಟಿ, ಗಣೇಶಪೇಟೆ, ಸ್ಟೇಷನ್ ರೋಡ್‌ಗಳಲ್ಲೂ ಇಬ್ರಾಹಿಂನ ಅಂಗಡಿಗಳಿವೆ.

ಕಾರ್ಪೊರೇಟರ್ ಆಗ್ತಾನಂತೆ!

ಮೊದಲಿಂದಲೂ ಜಬ್ಬಾರ್‌ಖಾನ್ ಹೊನ್ನಳ್ಳಿಯ ಚುನಾವಣಾ ವೆಚ್ಚಗಳಿಗೆ 'ದೇಣಿಗೆ' ನೀಡುತ್ತಲೇ ಬಂದಿರುವ ಇಬ್ರಾಹಿಂ ಚಾಂದನಿ, ಮೊನ್ನೆಯ ಅಂಜುಮನ್ ಎಲೆಕ್ಷನ್ನಿನಲ್ಲಿ ಹೊನ್ನಾಳಿ ಎಂಬ ಹುಚ್ಚಪ್ಯಾಲಿ ಎಂಎಲ್ಎಗೆ ಹಣ ನೀಡಿ ಕಾರ್ಪೊರೇಷನ್ ಚುನಾವಣೆಗೆ ಟಿಕೆಟ್ ಭರವಸೆ ಪಡೆದಿದ್ದಾನೆ.

ಇಬ್ರಾಹಿಂ ಆಯ್ಕೆ ಮಾಡಿಕೊಂಡಿರುವ 50 ನೇ ನಂಬರ್ ವಾರ್ಡ್‌ಗೆ ಕಾರ್ಪೊರೇಟರ್ ಆಗಿರುವ ಲ್ಯಾಂಡ್ ಗ್ರ್ಯಾಬರ್ ಬರ್ನಾಬಸ್ ಹೊನ್ನಳ್ಳಿಗೆ ಉಗಿದಿದ್ದೇ ತಡ ಇಬ್ರಾಹಿಂಗೆ ಟಿಕೆಟ್ ಮಿಸ್ ಆಗುವ ಪರಿಸ್ಥಿತಿ ಉಂಟಾಗಿದೆ. ತನ್ನ 200 ಜನ ಪುಡಿ ಪೋರ್ಕಿಗಳೊಂದಿಗೆ ಹೊನ್ನಳ್ಳಿ ಮನೆಗೇ ನುಗ್ಗಿದ ಸೀಮೆಎಣ್ಣೆಗಳ್ಳ ಇಬ್ರಾಹಿಂ ಚಾಂದನಿ ದಾಂಧಲೆ ಮಾಡಿ, ತನಗೇ ಟಿಕೆಟ್ ಬೇಕೆಂದು ತನ್ನ 'ಹಕ್ಕನ್ನು' ಮಂಡಿಸಿದ್ದಾನೆ.

ಶಾಸಕನೊಬ್ಬ ಸಮಾಜದ್ರೋಹಿಗಳೊಂದಿಗೆ ಸರಸವಾಡುವುದಲ್ಲದೇ, ಅಂತಹವರನ್ನೇ ಕಾರ್ಪೊರೇಷನ್ ಒಳಕ್ಕೆ ಕಳಿಸಲು ಪ್ರಯತ್ನಿಸುತ್ತಾನೆಂದರೆ ಹುಬ್ಬಳ್ಳಿ ರಾಜಕಾರಣಕ್ಕೆ ಅದೆಂಥಾ ದುರ್ಗತಿ ಬಂದಿದೆ ಎಂಬುದು ತಿಳಿಯುತ್ತದಷ್ಟೇ.



ಧಾರವಾಡ, ಗದಗ, ಹಾವೇರಿ ಜಿಲ್ಲೆಗಳ ಬಡವರ ಪಾಲಿನ ಸೀಮೆಎಣ್ಣೆ ಸೋರಿ ಇಬ್ರಾಹಿಂನ ಬ್ಯಾರಲ್ ಸೇರುತ್ತಿದೆ.


ಕಂಡೂ ಕಾಣದಂತೆ ಮಲಗಿರುವ ಈ ಮೂರು ಜಿಲ್ಲೆಗಳ ಪೋಲೀಸ್ ಇಲಾಖೆ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಗಳಿಗೆ ಬುದ್ಧಿ ಹೇಳುವವರಾರು? ಬುದ್ಧಿ ಹೇಳಬೇಕಾದ ಹೊರಟ್ಟಿ, ಶೆಟ್ಟರ್ ಎಂಬ ಬುದ್ಧಿಗೇಡಿ ಸಚಿವರು ಅಧಿಕಾರಿಗಳನ್ನು ವರ್ಗಾ ಮಾಡುವುದರಲ್ಲಿ ಕಿತ್ತಾಡಿಕೊಂಡು ಬೀದಿಗೆ ಬಂದು ನಿಂತಿರುವಾಗ, ಸರ್ಕಾರಿ ಸೀಮೆಎಣ್ಣೆ ಕಳ್ಳರ ಪಾಲಾಗುತ್ತಲೇ ಇರುತ್ತದಲ್ಲವೇ?

-ವರದಿಗಾರ

ಶಾಸಕ ಶ್ರೀನಿವಾಸ್ V/s ಆತ್ಮಾನಂದ

ಸ್ಮಶಾನವೇ ಕುರುಕ್ಷೇತ್ರ!

ಮಂಡ್ಯ



ಆತ್ಮಾನಂದ

ಒಬ್ಬ ಮಾಜಿ ಶಾಸಕ.... ಇನ್ನೊಬ್ಬ ಹಾಲಿ ಶಾಸಕ.... ಇಬ್ಬರ ಮಧ್ಯೆ ಯಾವಾಗಲೂ 'ಯುದ್ಧ'ವಿದ್ದದ್ದೇ. ಆದರೆ ಈ ಸಲ ಸ್ಮಶಾನಕ್ಕಾಗಿ ಸ್ಮಶಾನದಲ್ಲೇ ಕಾದಾಟ ನಡೆದಿದೆ. ಮಂಡ್ಯದ ಶಾಸಕ ಎಂ. ಶ್ರೀನಿವಾಸ್ ಮತ್ತು ಮಾಜಿ ಶಾಸಕ ಆತ್ಮಾನಂದರ ಕಿತ್ತಾಟದಲ್ಲಿ ಸ್ಮಶಾನ ಎಂಬುದು ಹಾಳು ಸುಡುಗಾಡಿನಂತಾಗಿ ಹೋಗುತ್ತಿದೆ.

ಸ್ವಾತಂತ್ರ್ಯಾ ನಂತರದ ದಿನಗಳಿಂದಲೂ ಮಂಡ್ಯ ನಗರ ಆತ್ಮಾನಂದರ ಪಾಳೆಗಾರ ಕುಟುಂಬದ ಸ್ವತ್ತಾಗಿ ಹೋಗಿತ್ತು, ಅಭಿವೃದ್ಧಿ ಎಂಬ ಪದ ಆತ್ಮಾನಂದರ ಕುಟುಂಬಕ್ಕೆ ಎಂದೂ ತಲುಪಲೇ ಇಲ್ಲ, ಅದಕ್ಕೆ ಒಕ್ಕಲಿಗರೇ ಪ್ರಧಾನವಾಗಿರುವ ಹಳೆ ನಗರದ ಸ್ಮಶಾನವೂ ಅಭಿವೃದ್ಧಿಯಾಗಲೇ ಇಲ್ಲ, ಈಗಿನ ಶಾಸಕ ಎಂ. ಶ್ರೀನಿವಾಸ್ ಈ ಸ್ಮಶಾನ ಅಭಿವೃದ್ಧಿಗೆಂದು ನಾಲ್ಕೂವರೆ ಲಕ್ಷ ತೆಗೆದಿಟ್ಟು ಯಾವಾಗ ಕೆಲಸ ಶುರು ಮಾಡಿದರೋ ಆಗ ಆತ್ಮಾನಂದರ ತಲೆಯಲ್ಲಿ ಹುಳ ಹೊಕ್ಕುಬಿಟ್ಟಿತ್ತು, ತನ್ನ ಭಂಟ ಕಿಟ್ಟಿಯ ಮೂಲಕ 'ಸ್ಮಶಾನಕ್ಕೆ ಹಾಕುತ್ತಿರುವ ಕಾಂಪೌಂಡ್ ಸಾಲುತ್ತಿಲ್ಲ' ಎಂದು ನ್ಯಾಯಾಲಯದಲ್ಲಿ ಕ್ಯಾತೆ ತೆಗೆದರು. ಸ್ಮಶಾನ ಅಭಿವೃದ್ಧಿಗೆ ನ್ಯಾಯಾಲಯ ತಡೆಯಾಜ್ಞೆ ನೀಡಿತು. ಒಂದಿಷ್ಟು ಚಿಲ್ರೆ ನಗರಸಭಾ ಸದಸ್ಯರಿಂದ ನಗರಸಭೆಯ ವಿರುದ್ಧವೇ ಕೋರ್ಟಿನಲ್ಲಿ ದಾವೆ ಹಾಕಿಸಲಾಯ್ತು. ಕೇಸ್ ಹಾಕಿದ ನಗರಸಭಾ ಅಧ್ಯಕ್ಷೆ ವಿಜಯಲಕ್ಷ್ಮಿಗಂತೂ ಮೆದುಳೆಂಬುದೇ ಇಲ್ಲ.... ಇನ್ನೇನು ಬರಕಸ್ತಾಗಲಿರುವ ನಗರಸಭೆಯ ಈ ಸದಸ್ಯರು ಚುನಾವಣೆಗೆ ನಿಂತರೆ, ಜನ ಉಗಿದು ಮನೆಗೆ ಕಳಿಸಲು ತಯಾರಾಗಿದ್ದಾರೆ.

ಆತ್ಮಾನಂದನ ಚೇಲಾ ಕಿಟ್ಟಿ ಪ್ರಕಾರ ಹಳೆ ನಗರದ ಸ್ಮಶಾನ 15 ಗುಂಟೆಯಿದ್ದರೆ, ಬರೀ 8 ಗುಂಟೆಗೆ ಕಾಂಪೌಂಡ್ ಹಾಕಲಾಗುತ್ತಿದೆ, ಉಳಿದ 7 ಗುಂಟೆಯಷ್ಟು ಭೂಮಿಯನ್ನು ಅಕ್ಕಪಕ್ಕದ ರೈತರು ಒತ್ತುವರಿ ಮಾಡಿಕೊಂಡಿದ್ದಾರಂತೆ. ಆದರೆ ಅಸಲಿಗೆ ಸ್ಮಶಾನವಿರುವುದು 15 ಗುಂಟೆ ಮಾತ್ರ. ಹೆಚ್ಚುವರಿಯಾಗಿ 11 ಗುಂಟೆ ಸರ್ಕಾರಿ ಖರಾಬ್ ಭೂಮಿಯಿದೆ. ಒಟ್ಟು 26 ಗುಂಟೆಗೂ ಕಾಂಪೌಂಡ್ ಹಾಕಿಸಲು ಶಾಸಕ ಶ್ರೀನಿವಾಸ್ ಯೋಚಿಸಿದ್ದೇ ತಡ, ಆತ್ಮಾನಂದನ ವರಾತ ಶುರುವಾಗಿದೆ. ಶ್ರೀನಿವಾಸ್ ಶಾಸಕತ್ವದಲ್ಲಿ ಸ್ಮಶಾನ ಅಭಿವೃದ್ಧಿಯಾಗುವುದು ತನ್ನ ರಾಜಕೀಯ ಭವಿಷ್ಯಕ್ಕೆ ಮುಳುಗು ನೀರು ಅನ್ನೋದು ಆತ್ಮಾನಂದನಿಗೆ ಚೆನ್ನಾಗಿ ಗೊತ್ತು. ಅದಕ್ಕೇ ಈ ಕಿತಾಪತಿ ಶುರು ಮಾಡಲಾಗಿದೆ. ಸಾರ್ವಜನಿಕರಿಂದ ದಾವೆ ಹೂಡಿಸಿರುವುದಾಗಿ ಹೇಳುತ್ತಿರುವ ಕಿಟ್ಟಿ ಪ್ರಕಾರ ಸಾರ್ವಜನಿಕರೆಂದರೆ ಆತನ ಬಾಮೈದ ಮತ್ತು ಆತನ ದಿನಗೂಲಿ!


ಮಾಜಿ ಶಾಸಕ ಆತ್ಮಾನಂದರಿಗೆ ಸ್ಮಶಾನ ಸೇರುವ ತನಕ ಬುದ್ಧಿ ಬರುವಂತೆ ಕಾಣುತ್ತಿಲ್ಲ! ಅಭಿವೃದ್ಧಿಯಾಗಬೇಕಾದ ಸ್ಮಶಾನವೀಗ ರಾಜಕಾರಣಿಗಳ ಕುರುಕ್ಷೇತ್ರ! ಮಂಡ್ಯದಲ್ಲಿ ಸತ್ತ ಮೇಲೂ ರಾಜಕಾರಣಿಗಳ ಕಾಟ.... ಸ್ಮಶಾನ ಸದೃಶವಾಗಿದೆ ಮಂಡ್ಯದ ರಾಜಕಾರಣ!

-ವರದಿಗಾರ

ದುಃಖ ಪಡಲಿಕ್ಕೂ ಸುಖ ಪಡಲಿಕ್ಕೂ ಮನಸ್ಸೇ ಕಾರಣ - ಸಿಂಪಿ ಲಿಂಗಣ್ಣ

ದಾವಣಗೆರೆ

ಗುಂಡಿ ಮಹದೇವಪ್ಪ ಫ್ಯಾಮಿಲಿಯ ಗಂಡಾಗುಂಡಿ ಮಕ್ಕಳು



ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪ

ಗುಂಡಿ ಮಹದೇವಪ್ಪ ಫ್ಯಾಮಿಲಿ ಎಂದರೆ ಇಡೀ ದಾವಣಗೆರೆಗೇ ಗೊತ್ತು. ಆದರೆ ಈ ಪುಣ್ಯಾತ್ಮರ ವಂಚನೆ, ಅವ್ಯವಹಾರ, ಬೇಜವಾಬ್ದಾರಿತನಗಳು ಇದುವರೆಗೂ ಯಾರಿಗೂ ಪೂರ್ತಿ ಗೊತ್ತಾಗಿರಲಿಲ್ಲ. ಈಗ ಈ ಪುರಾಣ ಮನೆತನದ ಗುಂಡಿ ರಾಜಶೇಖರ ಹಾಗೂ ಗುಂಡಿ ದಿನೇಶ ಎಂಬುವರು ಫ್ಯಾಮಿಲಿಯ ಗಂಡಾಗುಂಡಿ ದಂಧೆಗೆ ಹೊಸ ಮಾಲೀಕರಾಗಿ ಕಾಣಿಸಿಕೊಂಡಿದ್ದಾರೆ.

ದಾವಣಗೆರೆಯ ಶೇ. 99ರಷ್ಟು ಜನರು ಗುಂಡಿ ಮಹದೇವಪ್ಪ ಕಲ್ಯಾಣ ಮಂದಿರವನ್ನು ಗುಂಡಿ ಮಹದೇವಪ್ಪನವರ ಖಾಸಗೀ ಆಸ್ತಿಯೆಂದೂ, ಇದರ ಸಮಸ್ತ ಚೇತನ ಹಾಗೂ ಇದರಿಂದ ಬರುವ ಆದಾಯವೆಲ್ಲವನ್ನೂ ಅನುಭವಿಸುವ ಸಹಜವಾದ ಹಕ್ಕು ಇವರ ಕುಟುಂಬಕ್ಕಿದೆಯೆಂದೂ ತಿಳಿದುಕೊಂಡಿದ್ದಾರೆ. ಆದರೆ ಇದು ಅವರ ಖಾಸಗೀ ಆಸ್ತಿಯಲ್ಲ; ಸಾರ್ವಜನಿಕರಿಗೆ ಸೇರಿದ್ದು. ಇದರಿಂದ ಬರುವ ಆದಾಯವೆಲ್ಲ ಜಾತಿ, ಮತ-ವರ್ಣಗಳ ಬೇಧವಿಲ್ಲದೆ ನಿರ್ಗತಿಕರ ಹಾಗೂ ಇತರೆ ಜನಪರ ಕಾರ್ಯಗಳಿಗಾಗಿಯೇ ವಿನಿಯೋಗವಾಗ ಬೇಕು ಎಂದರೆ ಇಡೀ ಜಿಲ್ಲೆಯ ಜನರು ಗಾಬರಿಗೊಳ್ಳ ಬಹುದೇನೋ? ಆದರೆ ನಿಜ! ಇದು ಸಾರ್ವ ಜನಿಕರಿಗಾಗಿ ಇರಬೇಕಾದ ಆಸ್ತಿ!

ಮೆಗಾ ಸೈಟಿನ ಹಿನ್ನೆಲೆ

ದಾವಣಗೆರೆ ಕೈಗಾರಿಕೋದ್ಯಮಿ ಗುಂಡಿ ಮಹದೇವಪ್ಪ ನಗರಸಭೆಗೆ ದಿನಾಂಕ 17.8.1964ರಂದು ಅರ್ಜಿ ಸಲ್ಲಿಸಿ ರಾಜನಹಳ್ಳಿ ಹನುಮಂತಪ್ಪನವರು ಛತ್ರ ನಡೆಸುತ್ತಿದ್ದ ರೀತಿಯಲ್ಲೇ ಕಲ್ಯಾಣ ಮಂಟಪ ಹಾಗೂ ಧರ್ಮಶಾಲೆಯನ್ನು ಕಟ್ಟಲು ತನಗೆ ಒಂದು ದೊಡ್ಡ ಸೈಟನ್ನು ರೀಜನಬಲ್ ರೇಟಿಗೆ ಮಂಜೂರು ಮಾಡಲು ಕೋರಿದ್ದಾರೆ. ಈ ಅರ್ಜಿಯನ್ನು ನಗರಸಭೆಯು ಪರಿಗಣಿಸಿ ದಿನಾಂಕ 28.8.64ರಂದಿನ ಸಾಮಾನ್ಯ ಸಭೆಯ 48ನೇ ತೀರ್ಮಾನದಂತೆ ದಾವಣಗೆರೆ ನಗರದ ಪಿಂಸಿಸಿ 'ಬಿ' ಬ್ಲಾಕಿನ 1ನೇ ನಂಬರಿನ ಪೂರ್ವ-ಪಶ್ಚಿಮ 270, ಉತ್ತರ-ದಕ್ಷಿಣ 262 ಅಡಿಗಳಷ್ಟು ದೊಡ್ಡದಾದ ಕಾರ್ನರ್ ಸೈಟನ್ನು ಧರ್ಮಶಾಲೆ ಕಟ್ಟಲು ಒಂದು ಚದರ ಗಜಕ್ಕೆ (ಮೂರು ಅಡಿ) ಕೇವಲ 25 ಪೈಸೆಯಂತೆ ದರ ನಿಗದಿಗೊಳಿಸಿ 1,965 ರೂಪಾಯಿಗಳಿಗೆ ಗುಂಡಿ ಮಹದೇವಪ್ಪನಿಗೆ ಮಂಜೂರು ಮಾಡಿ ಕರಾರುವಕ್ಕಾದ ಷರತ್ತುಗಳನ್ನು ವಿಧಿಸಿತು.

ನಗರಸಭೆಯ ಷರತ್ತುಗಳೇನು?

28.10.1964ರಂದು ಗುಂಡಿ ಮಹದೇವಪ್ಪನಿಗೆ ಕೊಟ್ಟ ಮಾರಾಟಪತ್ರದಲ್ಲಿ ಈ ಕೆಳಕಂಡ ಷರತ್ತುಗಳಿವೆ. 1. ಲೈಸೆನ್ಸ್ ಪಡೆದು ಸದರಿ ಸೈಟಿನಲ್ಲಿ ಧರ್ಮಶಾಲೆ, ಕಲ್ಯಾಣ ಮಂಟಪವನ್ನು ಕಟ್ಟಿಸತಕ್ಕದ್ದು. 2. ಸದರಿ ಸೈಟಿನಲ್ಲಿ ಕಟ್ಟಿಸತಕ್ಕ ಧರ್ಮಶಾಲೆಯ ಉಪಯೋಗವು ಸಾರ್ವಜನಿಕರಿಗೆ ಸಿಗುವಂತೆ ಏರ್ಪಾಡು ಮಾಡತಕ್ಕದ್ದು. 3. ಸದರಿ ಸೈಟನ್ನಾಗಲೀ, ಆದರಲ್ಲಿ ಕಟ್ಟಿಸಿರುವ ಕಟ್ಟಡಗಳನ್ನಾಗಲೀ ಯಾರಿಗೂ ಯಾವ ವಿಧದಲ್ಲೂ ಪರಭಾರೆ ಮಾಡಬಾರದು. 4. ನಗರಸಭೆಯ ಅಭಿಮತಕ್ಕೆ ವಿರೋಧವಾಗಿ ಸದರಿ ಸೈಟನ್ನು ಅದರಲ್ಲಿ ಕಟ್ಟಿರುವ ಕಟ್ಟಡಗಳನ್ನು ಬೇರೆಯ ಉದ್ದೇಶಗಳಿಗೆ ಉಪಯೋಗಿಸತಕ್ಕುದಲ್ಲ. 5. ಸದರಿ ಸೈಟು ಮತ್ತು ಅದರಲ್ಲಿ ಕಟ್ಟಿರುವ ಕಟ್ಟಡಗಳ ಮೇಲೆ ನಗರಸಭೆಯವರು ವಿಧಿಸುವ ತೆರಿಗೆ ಮತ್ತು ಕಂದಾಯಗಳನ್ನು ಸಕಾಲದಲ್ಲಿ ಪಾವತಿ ಮಾಡತಕ್ಕದ್ದು. 6. ಮೇಲೆ ಕಾಣಿಸಿರುವ ಯಾವ ಒಂದು ಷರತ್ತಿಗೆ ಉಲ್ಲಂಘನೆ ನಡೆದರೂ ಈ ಸೇಲ್ ಸರ್ಟಿಫಿಕೇಟ್ ಮಂಜೂರಾತಿಯೊಂದಿಗೆ ರದ್ದಾದಂತೆ ಭಾವಿಸತಕ್ಕದ್ದು ಅಲ್ಲಾ ಭಾವಿಸಲಾಗುತ್ತೆ ಮತ್ತು ಯಾವ ರೂಪದ ಪರಿಹಾರವನ್ನೂ ಕೊಡದೆ ಈ ಸೈಟನ್ನು ಅಲ್ಲಿರಬಹುದಾದ ಕಟ್ಟಡಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಲು ನಗರಸಭೆಯವರಿಗೆ ಸಂಪೂರ್ಣ ಅಧಿಕಾರವಿರುತ್ತದೆ. -ಹೀಗೆ ನಗರಸಭೆಯು ಷರತ್ತುಗಳನ್ನು ವಿಧಿಸಿದೆ.

ಟ್ರಸ್ಟಿನ ಕರಾರುಪತ್ರ ಏನು ಹೇಳುತ್ತದೆ?

ಈ ಸೈಟನ್ನು ಸ್ವಾಧೀನಕ್ಕೆ ತೆಗೆದುಕೊಂಡ ಹತ್ತನೇ ವರ್ಷದಲ್ಲಿ ಗುಂಡಿ ಮಹದೇವಪ್ಪ ಪಬ್ಲಿಕ್ ಟ್ರಸ್ಟ್ ಎಂಬ ಹೆಸರಿನ ಟ್ರಸ್ಟೊಂದನ್ನು ದಿನಾಂಕ 30.1.1974 ರಂದು ರಿಜಿಸ್ಟರ್ ಮಾಡಿಸಲಾಗಿದೆ. ಸಂಸ್ಥಾಪಕರಾಗಿ ಗುಂಡಿ ಮಹದೇವಪ್ಪ, ಸದಸ್ಯರಾಗಿ ಇವರ ನಾಲ್ಕು ಜನ ಮಕ್ಕಳು ಮತ್ತು ಕೊಟ್ಟೂರು ಬಸಪ್ಪ ಎನ್ನುವವರು ಈ ಕರಾರು ಪತ್ರಕ್ಕೆ ಸಹಿ ಹಾಕಿದ್ದಾರೆ. ವಿಶೇಷವೆಂದರೆ ನಗರಸಭೆಯ ಷರತ್ತುಗಳಿಗನುಗುಣವಾಗಿಯೇ ಟ್ರಸ್ಟಿನ ಕರಾರುಪತ್ರ ತನ್ನ ಗುರಿ ಮತ್ತು ಉದ್ದೇಶಗಳನ್ನು ಹೇಳುತ್ತದೆ.

ಈ ಕರಾರುಪತ್ರದ 2, 3, ಮತ್ತು 4ನೇ ಪುಟಗಳಲ್ಲಿ ಹಂದ ಹಿ ಪರಿಗಣಿಸ ಗುರಿ ಹಾಗೂ ಉದ್ದೇಶಗಳನ್ನು ಹೀಗೆ ಹೇಳಬಹುದು. ಜಾತಿ, ಮತ-ವರ್ಣಗಳನ್ನೆಣಿಸದೆ, ಯಾವುದೇ ಲಾಭ ಮಾಡಿಕೊಡುವ ಚಟುವಟಿಕೆಗಳಲ್ಲಿ ತೊಡಗದ ಬಡಜನರಿಗೆ ಆರ್ಥಿಕ ಸಹಾಯ ಮಾಡುವುದು, ವಿದ್ಯಾಭ್ಯಾಸ, ವೈದ್ಯಕೀಯ ಸೌಲಭ್ಯಗಳನ್ನು ನೀಡುವುದು, ವಿದ್ಯಾರ್ಥಿನಿಲಯ, ವಾಚನಾಲಯಗಳನ್ನು ತೆರೆಯುವುದು, ಬಡ ವಿದ್ಯಾರ್ಥಿಗಳಿಗೆ ... ಗಳನ್ನು ನೀಡುವುದು, ನರ್ಸಿಂಗ್ ಹೋಂ, ಆಸ್ಪತ್ರೆಗಳನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಸ್ಥಾಪಿಸುವುದು ಇಂಥದೇ ಹಲವು ಹತ್ತು ಕಾರ್ಯಕ್ರಮಗಳ ಪಟ್ಟಿಯೇ ಇಲ್ಲಿದೆ.

ಮುಂದುವರೆದು 7ನೇ ಮತ್ತು 8ನೇ ಪುಟದಲ್ಲಿ ಟ್ರಸ್ಟಿಗಳ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ 6, 8, 11, 13ನೇ ಅಂಶಗಳ ಸಾರಾಂಶ ಹೀಗಿದೆ : ಮೂರು ತಿಂಗಳಿಗೊಮ್ಮೆ ಸಭೆ ಸೇರಬೇಕು, ಸಭೆಯ ತೀರ್ಮಾನಗಳನ್ನು ಕಡ್ಡಾಯವಾಗಿ ಮಿನಿಟ್ ಪುಸ್ತಕದಲ್ಲಿ ದಾಖಲಿಸಬೇಕು, ಟ್ರಸ್ಟಿನ ಆದಾಯ-ಖರ್ಚು, ಆಸ್ತಿ ಹೊಣೆಗಾರಿಕೆಗಳನ್ನು ನಿಯಮಿತವಾಗಿ ನಿರ್ವಹಿಸಬೇಕು ಎಂದು ಹೇಳುತ್ತದೆ. ವಿಶೇಷವಾಗಿ 9ನೇ ಪುಟದ 11ನೇ ಅಂಶದಲ್ಲಿ ಗಮನಿಸಬೇಕಾದ ಎರಡು ಅಂಶಗಳೆಂದರೆ ಟ್ರಸ್ಟಿನ ಮೂಲ ಉದ್ದೇಶಗಳನ್ನು ಹೊರತುಪಡಿಸಿ ಬೇರೆಯ ಉದ್ದೇಶಗಳಿಗಾಗಿ ಟ್ರಸ್ಟಿನ ಆದಾಯ ಮತ್ತು ಆಸ್ತಿಯನ್ನು ಉಪಯೋಗಿಸುವ ಹಕ್ಕು ಇರುವುದಿಲ್ಲ ಮತ್ತು 10ನೇ ಪುಟದ ಸಂಭಾವನೆ ನಿಷೇಧ ಭಾಗದಲ್ಲಿ ಟ್ರಸ್ಟಿನ ಸೇವೆಯ ಸಂದರ್ಭದಲ್ಲಿ ಪ್ರಯಾಣಕ್ಕಾಗಿ ತಮ್ಮ ಜೇಬಿನಿಂದ ಖರ್ಚು ಮಾಡಿದ ಹಣವನ್ನು ಸರಿಯಾದ ಆಧಾರ ತೋರಿಸಿ ಹಿಂಪಡೆಯು ವುದನ್ನು ಹೊರತುಪಡಿಸಿ ಟ್ರಸ್ಟಿನ ಸೇವೆ ಮಾಡಿದ ವ್ಯಕ್ತಿ ಸಂಬಳ, ಕಮಿಷನ್ ಅಥವಾ ಪ್ರತಿಫಲ ಪಡೆಯುವುದನ್ನು ನಿಷೇಧಿಸಲಾಗಿದೆ ಎಂದು ಸ್ಪಷ್ಟವಾಗಿ ದಾಖಲಿಸಲಾಗಿದೆ.

ಬಡವರಿಗಾಗಿ ಅಲ್ಲ ಬಲಿತವರಿಗೆ ಮಾತ್ರ

ಎಲ್ಲವೂ ಸಾರ್ವಜನಿಕ ಉದ್ಧಾರಕ್ಕಾಗಿಯೇ ನಡೆದಿದ್ದರೆ ಈ ವರದಿಯನ್ನು ಬರೆಯುವ ಅಗತ್ಯವೇ ಇರುತ್ತಿರಲಿಲ್ಲ. ಆದರೆ ನಗರಸಭೆಯು ವಿಧಿಸಿರುವ ಷರತ್ತುಗಳು, ಟ್ರಸ್ಟಿನ ಕರಾರುಪತ್ರದ ಗುರಿಗಳು "ಸಮುದ್ರಕ್ಕೆ ಸಾಹುಕಾರ ಉಪ್ಪಿಗೆ ಬಡತನ" ಎನ್ನುವಂತಾಗಿದೆ. ಅಂದರೆ ಎಲ್ಲವೂ ಸಾರ್ವಜನಿಕರಿಗಾಗೇ ಇರಬೇಕಾದರೂ ಇಲ್ಲಿ ಸಾರ್ವಜನಿಕರಿಗಾಗಿ ಯಾವುದೂ ಇಲ್ಲ, ಒಂದೇ ಮಾತಿನಲ್ಲಿ ಹೇಳುವುದಾದರೆ ನಗರಸಭೆಯ ಷರತ್ತು ಹಾಗೂ ಗುರಿಗಳನ್ನು ಕಾಲಕಸಕ್ಕಿಂತ ಕಡೆ ಮಾಡಿ ಸಂಪೂರ್ಣ ಖಾಸಗೀ ಕಲ್ಯಾಣ ಮಂದಿರವಾಗಿ ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪ ಮಾರ್ಪಟ್ಟಿದೆ. ಆದಾಯದ ಗುರಿಗಳನ್ನು ಹೊಂದಿರಬಾರದೆನ್ನುವ ಧ್ಯೇಯವಾಕ್ಯವು ಇಲ್ಲಿ ಆದಾಯವೇ ಪರಮಗುರಿಯಾಗಿ ಬದಲಾಗಿದೆ.



ಗುಂಡಿ ದಿನೇಶ

ಪ್ರಾರಂಭದಲ್ಲಿ ರೂ. 7,000 ತೆಗೆದುಕೊಳ್ಳುತ್ತಿದ್ದವರು ಈಗ ರೂ.26,500 ರಂತೆ ದಿನದ ಬಾಡಿಗೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಡೆಕೋರೇಶನ್ ಇತರೆ ಚಾರ್ಜು ಎಂದೆಲ್ಲಾ ಸೇರಿದರೆ ಬರೀ ಛತ್ರದ ಖರ್ಚಿನಲ್ಲೇ ಬಡವರ ಮದುವೆಗಳು ನಡೆದುಹೋಗಿಬಿಡುತ್ತವೆ. ಉನ್ನತ ವರ್ಗ ಮತ್ತು ಮೇಲ್ಮಧ್ಯಮ ವರ್ಗದವರು ಮಾತ್ರ ಇಲ್ಲಿ ಮದುವೆ ಮಾಡುವ ಸಾಹಸ ಮಾಡುತ್ತಾರೆ. ಕೆಳ ಮಧ್ಯಮ ವರ್ಗ ಮತ್ತು ಶ್ರಮಜೀವಿ ವರ್ಗದವರು ಇಲ್ಲಿ ಮದುವೆ ಮಾಡುವುದಿರಲಿ ಝಗಮಗಿಸುವ ಈ ಕಲ್ಯಾಣ ಮಂದಿರವನ್ನು ದೂರದಿಂದಲೇ ಬೆರಗುಗಣ್ಣಿಗಳಿಂದ ನೋಡಿ ತೃಪ್ತಿ ಪಟ್ಟುಕೊಳ್ಳಬೇಕಾಗುತ್ತದೆ 26,500 ರೂ. ಹಣ ಪಡೆಯಲಾಗುತ್ತದೆಯಾದರೂ ರಶೀದಿ ಕೊಡುವುದು ಮಾತ್ರ 10,000ರೂ.ಗೆ ಮಾತ್ರ. ಇನ್ನುಳಿದ ಹಣಕ್ಕೆ ಬಿಳಿಹಾಳೆಯಲ್ಲಿ ಏನೆಲ್ಲಾ ಲೆಕ್ಕ ಬರೆದು ತೋರಿ ಹರಿದು ಹಾಕಿಬಿಡುತ್ತಾರೆ. ವಿಶೇಷವೆಂದರೆ ಇನ್ನೂ ಕೂಡ ಗುಂಡಿ ಮಹದೇವಪ್ಪ ಪಬ್ಲಿಕ್ ಟ್ರಸ್ಟ್ ಎಂತಲೇ ರಶೀದಿ ಹರಿಯಲಾಗುತ್ತಿದೆ. ಬಡವರಿಗಲ್ಲದೆ ಬಲಿತವರಿಗೆ ಮೀಸಲಾಗಿರುವ ಈ ಕಲ್ಯಾಣ ಮಂಟಪವನ್ನು ಗುಂಡಿ ಮಹದೇವಪ್ಪನ ಕೈಗಾರಿಕಾ ಸಂಪರ್ಕದಿಂದ ಬಾಂಬೆ, ಕೊಲ್ಕತ್ತಾ, ತಮಿಳುನಾಡು, ಸಿಕಿಂದ್ರಾಬಾದ್‌ಗಳ ಕೈಗಾರಿಕಾ ಮಾಲೀಕರಿಂದ ಧರ್ಮಶಾಲೆಗೆಂದು ಹಣ ಸಂಗ್ರಹ ಮಾಡಿ ಕಟ್ಟಿದ್ದಾರೆ ಎನ್ನಲಾಗುತ್ತಿದೆ.

ಈ ಟ್ರಸ್ಟಿನ ಸಂಸ್ಥಾಪಕ ಗುಂಡಿ ಮಹದೇವಪ್ಪನ ನಿಧನಾ ನಂತರ (1974-75) ಕೆಲವು ವರ್ಷಗಳವರೆಗೆ ಆದಾಯ ತೆರಿಗೆ ಪಾವತಿಸುವುದು. ಕೆಲವೊಮ್ಮೆ ಸಭೆ ಸೇರುವುದು ನಡೆಯಿತಾದರೂ ಪ್ರಾರಂಭದಿಂದ ಇಲ್ಲಿಯವರೆಗೂ ನಗರಸಭೆಯ ಷರತ್ತುಗಳು ಹಾಗೂ ಟ್ರಸ್ಟಿನ ಕರಾರು ಪತ್ರದ ಪ್ರಕಾರ ಏನೂ ನಡೆಯಲಿಲ್ಲ. ನಿರ್ಗತಿಕರಿಗಾಗಿ 10ರೂ. ಸಹಾಯ ಮಾಡಿದ ದಾಖಲೆಯೂ ಕೂಡ ಇಲ್ಲ, ಟ್ರಸ್ಟಿನ ಸಭೆ ಸೇರಿ ದಶಕಗಳೇ ಕಳೆದಿರಬಹುದು. 19 ವರ್ಷಗಳಿಂದ ಆದಾಯ ತೆರಿಗೆಯನ್ನೂ ಕಟ್ಟಿಲ್ಲ! ಮೂರು ವರ್ಷಗಳಿಂದ ನಗರಸಭೆಗೆ ಕಂದಾಯವನ್ನೂ ಕಟ್ಟಿಲ್ಲ, ಆದಾಯ ಮತ್ತು ಖರ್ಚುಗಳ ಲೆಕ್ಕ ಇಟ್ಟಿಲ್ಲ, ಇಲ್ಲಿನ ವ್ಯವಹಾರಗಳೆಲ್ಲವೂ ಲಾಭದ ಉದ್ದೇಶದಿಂದ ಖಾಸಗಿಯಾಗಿ ನಡೆದಿವೆ-ನಡೆಯುತ್ತಿವೆ.... ಇಂಥ ಕಟು ವಾಸ್ತವಗಳನ್ನು ಪುಟಗಟ್ಟಲೆ ಪಟ್ಟಿ ಮಾಡಬಹುದು. ಆದರೆ ಈ ಟ್ರಸ್ಟಿನ ಸಂಸ್ಥಾಪಕರಾದಿಯಾಗಿ ಸದಸ್ಯರೆಲ್ಲರೂ ಈಗಾಗಲೇ ಸತ್ತು ಹೋಗಿದ್ದಾರೆ. ಇದರೊಂದಿಗೆ ಟ್ರಸ್ಟು ಕೂಡಾ ಅಧಿಕೃತವಾಗಿ ಬಹಳ ಹಿಂದೆಯೇ ಸತ್ತು ಹೋಗಿದೆ. ಇಷ್ಟಾದರೂ ಟ್ರಸ್ಟಿನ ಹೆಸರು ನಡೆಯುತ್ತಿದೆ! ಲಾಭದ ಹೊಳೆಯೂ ಹರಿಯುತ್ತಿದೆ! ಒಟ್ಟಿನಲ್ಲಿ ಹೆಸರು ಸಾರ್ವಜನಿಕರದ್ದು ಉಪಯೋಗವು ಸ್ವಂತದ್ದು ಎಂಬುವಂತಾಗಿದೆ.

ರಾಜಶೇಖರನ ಬೋಗಸ್ ಟ್ರಸ್ಟ್

ಇಷ್ಟು ದಿನಗಳ ಕಾಲ ಈ ಕಲ್ಯಾಣ ಮಂಟಪದ ಆದಾಯ ಅದ್ಯಾವ ಗಟಾರಕ್ಕೆ ಹರಿದು ಹೋಯಿತೋ ಗೊತ್ತಿಲ್ಲ, ಆದರೆ ಈಗ್ಗೆ ಕೆಲವು ವರ್ಷಗಳಿಂದ ತನ್ನನ್ನು ತಾನೇ ಟ್ರಸ್ಟಿನ ಅಧಿಕೃತ ವ್ಯಕ್ತಿ ಎಂದು ಸ್ವಯಂ ಘೋಷಿಸಿಕೊಂಡಿರುವ ಜಿ.ಎಚ್. ರಾಜಶೇಖರ ಎಂಬುವನು ಮಾತ್ರ ನಿರಾಯಾಸವಾಗಿ ತಿಂಗಳಿಗೆ ಲಕ್ಷಗಟ್ಟಲೆ ಹಣ ಎಣಿಸಿಕೊಂಡು ಐಷಾರಾಮಿ ಬದುಕು ಸಾಗಿಸುತ್ತಿದ್ದಾನೆ. ಗುಂಡಿ ಮಹದೇವಪ್ಪನ ಮೊಮ್ಮಗನಾದ ಇವನು ಬಿಳಿಕಾಗದದ ಮೇಲೆ ಜಿ.ಎಚ್. ರಾಜಶೇಖರ, ಜಿ.ಎಚ್. ಪ್ರಕಾಶ್, ಚಂದ್ರಶೇಖರ (2 ಮತ್ತು 3ನೇಯವರು ನಿಧನರಾಗಿದ್ದಾರೆ) ಜಿ.ಎಸ್. ರಮೇಶ್ (ಹುಬ್ಬಳ್ಳಿಯಲ್ಲಿದ್ದಾರೆ) ಜಿ.ಎಸ್. ಸಿದ್ದೇಶ್ (ಟ್ರಸ್ಟಿನ ಸುದ್ದಿಗೆ ಬರುತ್ತಿಲ್ಲ) ಮತ್ತು ಜಿ. ದಿನೇಶ್ ಎಂಬ ಹೆಸರುಗಳನ್ನು ಬರೆದುಕೊಂಡ ... ಇದು ರಿಜಿಸ್ಟರ್ ಆಗಿಲ್ಲ, ಆದರೂ ಈ ಸಮಿತಿ ... ಎನ್ನುವ ಗತ್ತಿನಲ್ಲಿ ರಾಜಶೇಖರ ... 18 ರಿಂದ 20 ಲಕ್ಷ ವಾರ್ಷಿಕ ಆದಾಯ ಬರುವ ಈ ಕಲ್ಯಾಣ ಮಂದಿರಕ್ಕೂ ಇವನಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಉಡದಂತೆ ಕಚ್ಚಿಕೊಂಡಿದ್ದಾನೆ. ಕಂಟ್ರಿಕ್ಲಬ್ಬಿನ ಮೆಂಬರಾಗಿರುವ ಇವನು ತಿಂಗಳಿಗೊಮ್ಮೆ ಇದಕ್ಕೆ ಭೇಟಿ ನೀಡಿ ತನ್ನ ಸಕಲ ಗುಣಗಳನ್ನು ಸಾರಿಬರುತ್ತಾನೆ. 2-3 ವರ್ಷಗಳ ಕೆಳಗೆ ಕೆಲಸಕ್ಕೆ ಸೇರಿಕೊಂಡ ಕಾರ್ ಚಾಲಕನಿಗೆ 2500 ರೂ. ಸಂಬಳ ಕೊಡುವ ಇವನು 26 ವರ್ಷಗಳಿಂದ ಮಿಲ್ಲು (ಈಗ ಬಂದಾಗಿದೆ) ಮತ್ತು ಕಲ್ಯಾಣ ಮಂಟಪದಲ್ಲಿ ಸೇವೆ ಸಲ್ಲಿಸುತ್ತಿರುವ ಮ್ಯಾನೇಜರ್‌ಗೆ 2300 ರೂ. ಸಂಬಳ ಕೊಡುತ್ತಾನೆ. ಇನ್ನು ಕಸಗುಡಿಸುವ, ಪಾಯಿಖಾನೆ ತೊಳೆಯುವವರಿಗೆ ಸಂಬಳ ದಿನಕ್ಕೆ 30-40 ರೂ.ಕೊಡುತ್ತಾನೆ. ಮಧ್ಯಾಹ್ನ ಒಂದು ರಾತ್ರಿಗೆ ಎರಡು ಸಿಗ್ನೇಚರ್ ವಿಸ್ಕಿ ಏರಿಸಿ ಓಡಾಡುವ ಇವನು ಇತ್ತೀಚೆಗೆ ದಿನೇಶನೆಂಬ ಭಸ್ಮಾಸುರನನ್ನು ಕಲ್ಯಾಣ ಮಂದಿರಕ್ಕೆ ಬಿಟ್ಟುಕೊಂಡಿದ್ದಾನೆ.

ದಿನೇಶನೆಂಬ ಭಸ್ಮಾಸುರ

ಪ್ರಾಯಶಃ ಈ ಕಲ್ಯಾಣ ಮಂದಿರಕ್ಕೆ ದಿನೇಶ್ ಎಂಟ್ರಿ ಪಡೆದುಕೊಳ್ಳದೇ ಇದ್ದಿದ್ದರೆ ಗುಂಡಿ ಮಹದೇವಪ್ಪನ ಕಲ್ಯಾಣ ಮಂದಿರದ ಗಾರ್ಧಭಗಾನ ಲೋಕಕ್ಕೆ ಪರಿಚಯವಾಗುತ್ತಿರಲಿಲ್ಲವೆನಿಸುತ್ತದೆ. ಸದಾ ಕುಡಿತದ ಅಮಲಿನಲ್ಲೇ ಇರುವ ಇವನು ಕೆಲಸಗಾರರನ್ನು ಗುಲಾಮರಿಗಿಂತ ಕೀಳಾಗಿ ಕಾಣುತ್ತಾನೆ. ಕ್ಷುಲ್ಲಕ ಕಾರಣಗಳಿಗಾಗಿ 15, 25, 35 ವರ್ಷಗಳು ಕೆಲಸ ಮಾಡಿದ ಅಂಜಿನಮ್ಮ, ವೀರಪ್ಪ, ಜಿ. ಸಿದ್ದಪ್ಪ, ಜಿ.ತಿಪ್ಪೇಶಿ ಎಂಬುವವರನ್ನು ಕೆಲಸದಿಂದ ಕಿತ್ತು ಹಾಕಿದ್ದಾನೆ. ಇವರೆಲ್ಲರೂ ಲೇಬರ್‌ಕೋರ್ಟಿನಲ್ಲಿ ಕೇಸು ಹಾಕಿದ್ದಾರೆ. ಏಪ್ರಿಲ್ 15ರ ರಾತ್ರಿ ಮಿಮಿಕ್ರಿ ದಯಾನಂದ್ ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ 15 ನಿಮಿಷಗಳ ಕಾಲ ಪವರ್ ಕಟ್ ಆದಾಗ ಕಸಗುಡಿಸುವ ಕೆಲಸಗಾರ ಜಿ. ಸಿದ್ದಪ್ಪ ಜನರೇಟರ್ ರಿಪೇರಿ ಮಾಡಲಿಲ್ಲವೆಂದು ಸರಿರಾತ್ರಿಯಲ್ಲಿ ಕಂಠಪೂರ್ತಿ ಕುಡಿದು ಬಂದು ಸಿದ್ದಪ್ಪನನ್ನು ಚಪ್ಪಲಿಯಿಂದ ಹೀನಾಯವಾಗಿ ಬಡಿದು ಕೆಲಸದಿಂದ ಹೊರಹಾಕಿದ್ದಾನೆ. ಸಿದ್ದಪ್ಪ ಆಸ್ಪತ್ರೆಗೆ ದಾಖಲಾಗಿ, ಪೋಲೀಸ್ ಠಾಣೆಗೆ HMR ಹೋದರೂ ದಿನೇಶನ ಮೇಲೆ ಕೇಸು ದಾಖಲಾಗಲಿಲ್ಲ, ಬಡಾವಣೆ ಪೋಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶಂಕರಲಿಂಗೇಗೌಡ ಮತ್ತು ದಿನೇಶ್ ಒಂದಾಗಿ ಮಾಜಿ ನಗರಸಭಾ ಸಭಾಧ್ಯಕ್ಷ ಡಿ. ಬಸವರಾಜರಿಂದ ಪೈರವಿ ಕೆಲಸ ಮಾಡಿಸಿ ಸಿದ್ದಪ್ಪನನ್ನು ಸುಮ್ಮನಾಗಿಸಿದ್ದಾರೆ. ಕುಡಿದರೆ ಯಾರ ಮೇಲಾದರೂ ಕೈ ಕಾಲು ಹರಿಬಿಡುವ ದಿನೇಶನ ಮುಂದಿನ ಬಲಿ ಮ್ಯಾನೇಜರ್ ಎಂ. ಚಂದ್ರಶೇಖರ್‌ರವರೇ ಆಗಬಹುದೇನೋ? ಏಕೆಂದರೆ ದಿನೇಶ ಕೆಲಸಗಾರರನ್ನೆಲ್ಲಾ ಈಗಾಗಲೇ ತೆಗೆದುಹಾಕಿದ್ದಾನೆ. ಈಗ ಮ್ಯಾನೇಜರ್ ಚಂದ್ರಶೇಖರ ಮಾತ್ರ ಬಾಕಿ ಇದ್ದಾರೆ. ದಿನೇಶ ಈ ಕಲ್ಯಾಣ ಮಂದಿರಕ್ಕೆ ಕಾಲಿಟ್ಟನಂತರ ಕೆಲಸಗಾರರ ಬದುಕುಗಳು ಭಸ್ಮವಾಗಿವೆ. ಇವನು ಆಡಿದ ಆಟಗಳಿಂದಾಗಿ ಗುಂಡಿ ಮಹದೇವಪ್ಪನ ಕಲ್ಯಾಣ ಮಂದಿರದ ಎಲ್ಲಾ ಹೂರಣವೂ ಹೊರಬಂದಿದೆ. ಈಗ ದಿನೇಶನಿಗೆ ಉಳಿದಿರುವುದೆಂದರೆ ರಾಜಶೇಖರನ ತಲೆಯ ಮೇಲೊಂದು ಕೈ, ತನ್ನ ತಲೆಯ ಮೇಲೊಂದು ಕೈ ಇಟ್ಟುಕೊಂಡು ಭಸ್ಮವಾಗುವುದಷ್ಟೇ!

ಚಂದ್ರಶೇಖರ ತೋರಣಘಟ್ಟ

ಗುಂಡಿ ಮಹದೇವಪ್ಪ ಕಲ್ಯಾಣ ಮಂದಿರದ ವತಿಯಿಂದ 19 ವರ್ಷಗಳಿಂದಲೂ ಆದಾಯ ತೆರಿಗೆ ಕಟ್ಟಲ್ಲದೇ ಇದ್ದರೂ ಆದಾಯ ತೆರಿಗೆ ಇಲಾಖೆಯವರು ಎಲ್ಲವನ್ನೂ ಬಂದು ಮಾಡಿಕೊಂಡು ಕುಂತಿರುವುದೇಕೆ? 28.10.1964ರಂದು ನಗರಸಭೆಯವರು ಹೇರಿದ ಷರತ್ತುಗಳು ಸಂಪೂರ್ಣ ಉಲ್ಲಂಘನೆಯಾಗಿದ್ದರೂ, ಮೂರು ವರ್ಷಗಳಿಂದ ಕಂದಾಯವನ್ನೇ ಕಟ್ಟದಿದ್ದರೂ ನಗರಸಭೆಯ ಅಧಿಕಾರಿಗಳು ಗುಮ್ಮಣ್ಣಗಳಂತಿರುವುದೇಕೆ? ಕಾಲಕಾಲಕ್ಕೆ ತಿಂದ ಎಂಜಲಿನಿಂದಾಗಿಯೋ ಅಥವಾ ಎಂಜಲುಗಳ್ಳತನದ ಮರ್ಜಿಯಿಂದಲೋ ಎನ್ನುವುದು ಬಹಿರಂಗಗೊಳ್ಳಬೇಕಿದೆ.

ಬಡವರು ಬದುಕಿಗಾಗಿ ಕಟ್ಟಿಕೊಂಡ ಗುಡಿಸಲುಗಳನ್ನು ವೀರಾವೇಶದಿಂದ ಒದ್ದು ಕೆಡವಿ ಕರ್ತವ್ಯ ಪ್ರಜ್ಞೆಯನ್ನು ಮೆರೆಯುವ ನಗರಸಭೆ ಅಧಿಕಾರಿಗಳು ದಾವಣಗೆರೆಯ ಹೃದಯ ಭಾಗದಲ್ಲಿ ಸುಮಾರು ಏಳು ಕೋಟಿ ರೂ. ಬೆಲೆಬಾಳುವ ಈ ಸೈಟು ಹಾಗೂ ಕಟ್ಟಡದ ದುರ್ಬಳಕೆಯನ್ನು ತಡೆದು ಇದನ್ನು ವಶಪಡಿಸಿಕೊಂಡು ತಮ್ಮ ಮೀಸೆ ಹುರಿಮಾಡಿಕೊಳ್ಳಬೇಕು. ಇಲ್ಲವಾದರೆ ಕೈಲಾಗುವುದಿಲ್ಲವೆಂದು ಹೇಳಿಕೆಯನ್ನಾದರೂ ಕೊಡಬೇಕು. ಅಥವಾ ಈ ವರದಿಗೆ ಮೀರಿದ ಪತ್ರಗಳೇನಾ ...

ಹೈಟೆಕ್ ಮಾಲ್‌ಗಳ ಅಸಮರ್ಥ ಅಭಿವೃದ್ಧಿ ವಿಚಾರ ಲಹರಿ...

"ಅಭಿವೃದ್ಧಿ ಪಥದಲ್ಲಿ ನಾವು ಇತರ ರಾಜ್ಯಗಳಿಗಿಂತ ಹಿಂದುಳಿದಿದ್ದೇವೆ. ಇದೀ ಕೇರಳ ರಾಜ್ಯವನ್ನು ನಾವು ಇನ್ನೊಂದು ಬೆಂಗಳೂರನ್ನಾಗಿಸಬೇಕು". ಇದು ಇತ್ತೀಚೆಗೆ ಕೇರಳದಲ್ಲಿ ನಡೆದ ಚುನಾವಣಾ ಪ್ರಚಾರಗಳಲ್ಲಿ ಚರ್ಚೆಗೊಳಗಾದ ಪ್ರಮುಖ ವಿಷಯ. ಕೇರಳವನ್ನು ಮುಂಬೈ ರೂಪದಲ್ಲಿ ನೋಡುವ ಧೋರಣೆಗಿಂತ ಇದು ಭಿನ್ನವಾದ ಯೋಜನೆಯಿರಬಹುದು. ಬಹುಶಃ ಮುಂಬೈ ನಗರವನ್ನು ಶಾಂಘೈ ನಗರವನ್ನಾಗಿಸುವ ಕನಸಿನಷ್ಟು ಅಸಂಬದ್ಧವಾದುದಲ್ಲ ಈ ದೃಷ್ಟಿಕೋನ. ಇತರರಂತಾಗುವ ಕನಸನ್ನು ಪಕ್ಕಕ್ಕಿಟ್ಟು ನೋಡಿದರೂ ಈಗಾಗಲೇ ಚಾಲ್ತಿಯಲ್ಲಿರುವ ರೇಸ್‌ಗೆ ಕೇರಳ ಹೊಸ ಸೇರ್ಪಡೆಯಷ್ಟೆ.

ಭಾರತದಲ್ಲಿ ಅಭಿವೃದ್ಧಿ ಬಗೆಗಿನ ಚರ್ಚೆ ದಶಕಗಳ ಹಿನ್ನಡೆ ಕಂಡಿದೆ. ಏಕಮುಖಿ ಅಭಿವೃದ್ಧಿ ವಾದವನ್ನು ನಮ್ಮ ಮೇಲೆ ಹೇರಲಾಗುತ್ತಿದೆ. ಇಂತಹ ಅಭಿವೃದ್ಧಿ ಮಾದರಿಗಳು ಯಶಸ್ವಿಯಾಗುತ್ತವೆಯೋ, ಇಲ್ಲವೋ ಎಂಬುದು ನಿಜವಾಗಿ ಚರ್ಚೆಗೊಳಗಾಗಬೇಕಾದ ವಿಷಯ. ಆದರೆ ದುರದೃಷ್ಟವಶಾತ್ ಸರ್ವಸಮ್ಮತವಾದ ಮಾದರಿಯನ್ನು ಪ್ರಶ್ನಿಸುವ ಪ್ರಯತ್ನ ವೈರುಧ್ಯದ ಸಂಕೇತವಾಗಿಬಿಡುತ್ತದೆ. ಜನರ ನೀರನ್ನು ಬರಿದು ಮಾಡಿ, ವಿಷತುಂಬುವ ಕೋಕಾ ಕೋಲಾದಂತಹ ಕಂಪನಿಗಳನ್ನು ವಿರೋಧಿಸಿದರೆ ಅದು ಅಭಿವೃದ್ಧಿ ವಿರೋಧಿ ಧೋರಣೆ ಎನಿಸಿಕೊಳ್ಳುತ್ತದೆ!

ಮುಖ್ಯಮಂತ್ರಿ (ಮಾಜಿ) ಓಮನ್ ಚಾಂಡಿ ಹೇಳುವಂತೆ, ನಿರುದ್ಯೋಗ ಕೇರಳ ರಾಜ್ಯವನ್ನು ಕಾಡುತ್ತಿರುವ ಗಂಭೀರ ಸಮಸ್ಯೆಗಳಲ್ಲೊಂದು ಎನ್ನುವುದು ಅಕ್ಷರಶಃ ಸತ್ಯ. ಆದರೆ ಯುಡಿಎಫ್ ಕೇರಳವನ್ನು ಮತ್ತೊಂದು ಬೆಂಗಳೂರನ್ನಾಗಿಸುವ ಆಲೋಚನೆ ಹೊಂದಿದೆ ಎಂಬ ಮಾತನ್ನೂ ಅವರು ಆಡುತ್ತಾರೆ. ಇದು ಚಾಂಡಿ ಅವರ ಅಭಿವೃದ್ಧಿಯ ವಿಚಾರ ಲಹರಿ! ಯಾವುದೇ ಅಭಿವೃದ್ಧಿ ಸೂಚಕಗಳಿಂದಲೂ ಕರ್ನಾಟಕ ಕೇರಳ ರಾಜ್ಯಕ್ಕಿಂತ ಮುಂದಿಲ್ಲ, ಬದಲಿಗೆ ಸಾಕ್ಷರತೆ, ಶಿಕ್ಷಣ, ಆರೋಗ್ಯ ಸ್ವಾಸ್ಥ್ಯ ಬಾಲ ಕಾರ್ಮಿಕ ಪದ್ಧತಿಯ ನಿರ್ಮೂಲನೆ, ಇವೇ ಮುಂತಾದ ಕ್ಷೇತ್ರಗಳಲ್ಲಿ ಕೇರಳ ಕರ್ನಾಟಕವನ್ನು ಮೈಲು ದೂರ ಹಿಂದೆ ಹಾಕಿದೆ. ಆದರೂ ಸಹಾ ಚಾಂಡಿ ಅವರ ಅಭಿವೃದ್ಧಿಯ ದೃಷ್ಟಿಕೋನ ಎಕ್ಸ್‌ಪ್ರೆಸ್ ಹೈವೇಗಳು, ಫ್ಲೈ-ಓವರ್‌ಗಳು, ಸ್ಮಾರ್ಟ್ ಸಿಟಿಗಳು ಮತ್ತು ಅದರ ಪಳೆಯುಳಿಕೆಗಳ ಸುತ್ತಲೇ ಗಿರಕಿ ಹೊಡೆಯುತ್ತಿರುವುದು ವಿಪರ್ಯಾಸ. ಕೇರಳದಲ್ಲಿ ಇವ್ಯಾವುವೂ ಹೆಚ್ಚಾಗಿ ಇಲ್ಲವಲ್ಲ!

ಆದರೆ ಇಲ್ಲಿ ಅತ್ಯುತ್ತಮವಾದ ಗ್ರಾಮಾಂತರ ಸಾರಿಗೆ ಸಂಪರ್ಕ ವ್ಯವಸ್ಥೆ ಇದೆ. ನೀವು ಮೈಸೂರಿನಿಂದ ವಯನಾಡ್‌ಗೆ ಮತ್ತು ವಯನಾಡ್‌ನಿಂದ ಮೈಸೂರಿಗೆ ಸಂಚರಿಸುವಾಗ, ಯಾವಾಗ ಗಡಿ ದಾಟುತ್ತೀರ ಎನ್ನುವುದನ್ನು ಗುರುತಿಸುವುದು ಸುಲಭವಾದ ವಿಷಯ. ಕಳಪೆಯಾದ ಹಳ್ಳ-ಕೊಳ್ಳಗಳ ರಸ್ತೆಗಳಾದರೆ ನೀವು ಕರ್ನಾಟಕದಲ್ಲಿದ್ದೀರ ಎಂದರ್ಥ. ಆದರೆ ಉತ್ತಮವಾದ ಗ್ರಾಮಾಂತರ ರಸ್ತೆಗಳು ಅಭಿವೃದ್ಧಿಯ ಸಂಕೇತಗಳಾಗುವುದಿಲ್ಲವಲ್ಲ? ಏನಿದ್ದರೂ ಬೃಹತ್ ಟ್ರಾಫಿಕ್ ಜಾಮ್‌ಗಳು ಮಾತ್ರ ಅಭಿವೃದ್ಧಿಯ ಸಂಕೇತವಾಗಬಹುದಷ್ಟೆ.

ನಿಯಂತ್ರಣ ತಪ್ಪಿದ ವಾಹನದಟ್ಟಣೆ, ಸಾಧಾರಣವಾದ ಸಾರ್ವಜನಿಕ ಸಂಚಾರ ವ್ಯವಸ್ಥೆ ಮತ್ತು ಖಾಸಗಿ 'ನಗರ'ಗಳಿಂದಾಗಿ ಬೆಂಗಳೂರಿನ ತಾಂತ್ರಿಕ ಯಶಸ್ಸು ಸೊರಗಿಹೋಗಿದೆ. ಒಟ್ಟಾರೆ ಇದು ಅಸಮರ್ಥ ಹೈಟೆಕ್ ನಿವಾಸಿಗಳ ಕರಾಳ ನಗರ.




ಕೇರಳದ ಜನ ಉತ್ತಮವಾದ ಶಿಕ್ಷಣ ಮತ್ತು ಆರೋಗ್ಯದ ಫಲಾನುಭವ ಪಡೆದವರು. ಇದೀ ದೇಶದಲ್ಲೇ ವೈದ್ಯರಿಗಿಂತ ಹೆಚ್ಚು ನರ್ಸ್‌ಗಳನ್ನು ಸೃಷ್ಟಿಸುವ ರಾಜ್ಯ ಕೇರಳ. ಇಲ್ಲಿನ ನರ್ಸ್‌ಗಳು ಎಲ್ಲೆಡೆ ಇದ್ದಾರೆ. ಉನ್ನತ ಶಿಕ್ಷಣ ಪಡೆದ ಸಮರ್ಥ ನರ್ಸ್‌ಗಳು ಒಂದು ಕಾಲದ ಉತ್ತಮ ಶಿಕ್ಷಣ ವ್ಯವಸ್ಥೆಯ ಫಲಶೃತಿ. ಆದರೆ ಇತ್ತೀಚೆಗೆ ಕೇರಳ ಕೂಡ ಕರ್ನಾಟಕದಂತೆ ಶಿಕ್ಷಣ ವ್ಯವಸ್ಥೆಯನ್ನು ವ್ಯಾಪಾರೀಕರಣಗೊಳಿಸುವ ಪ್ರಯತ್ನ ನಡೆಸಿತ್ತು, ಓಮನ್ ಚಾಂಡಿ ಅವರ ವಾದ ಇಷ್ಟೇ: ದುಬಾರಿ ಕೋರ್ಸ್‌ಗಳಿಗಾಗಿ ಕರ್ನಾಟಕಕ್ಕೆ ವಲಸೆ ಹೋಗುತ್ತಿರುವ ಕೇರಳದ ವಿದ್ಯಾರ್ಥಿಗಳಿಂದ ಬರುವ ಆದಾಯವನ್ನು ಕಳೆದುಕೊಳ್ಳುವುದೇಕೆ? ಅದನ್ನು ನಾವು ಇಲ್ಲೇ ಕಬಳಿಸಬಹುದಲ್ಲವೇ?

ಅದಕ್ಕಿಂತ ಉತ್ತಮ ದಾರಿಗಳೂ ಇಲ್ಲವೆಂದಿಲ್ಲ, ಮೂಲತಃ ಕೇರಳದ ಯಶಸ್ಸಿಗೆ ಕಾರಣವಾದ ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ವಿಸ್ತರಿಸಿ ಬೆಳೆಸಬಹುದಾಗಿತ್ತು, ಆದರೆ ಅದು ಅಭಿವೃದ್ಧಿ ವಿರೋಧಿ ನೀತಿಯಾಗುವುದಲ್ಲಾ? ಈ ಮಧ್ಯೆ ಕೃಷಿ ಸಂಬಂಧಿ ತೊಂದರೆಗಳಿಂದ ನೂರಾರು ಆತ್ಮಹತ್ಯೆಗಳು ಕೇರಳದಲ್ಲಿ ನಡೆದಿವೆ. ಇಂತಹವರ ಮತ್ತು ಇವರಂತೆ ದಿವಾಳಿಯೆದ್ದ ರೈತರ ಮಕ್ಕಳು ಕರ್ನಾಟಕದ ವ್ಯಾಪಾರಿ ವಿದ್ಯಾ ಸಂಸ್ಥೆಗಳಿಂದ ಬಲವಂತವಾಗಿ ಹೊರಬರುವಂತಾಗಿದೆ. ಶುಲ್ಕ ಪಾವತಿಸಲಾಗದೆ, ಕೇವಣಿ ಕಳೆದುಕೊಂಡು ಅರೆಬರೆ ವಿದ್ಯಾಭ್ಯಾಸ ಮುಗಿಸಿ ವಿದ್ಯಾರ್ಥಿಗಳು ಕಾಲೇಜು ಬಿಡುವಂತಾಗಿದೆ. ಬಹಳಷ್ಟು ವಿದ್ಯಾರ್ಥಿಗಳು ತಮ್ಮ ಶಾಲಾ ಸರ್ಟಿಫಿಕೇಟ್‌ಗಳನ್ನು ಹಿಂದಿರುಗಿ ಪಡೆಯಲಾಗುವುದಿಲ್ಲ, ಕಾಲೇಜುಗಳು ಸಹಾ ಈಗಾಗಲೇ ಕಂಗಾಲಾಗಿರುವ ವಿದ್ಯಾರ್ಥಿಗಳಿಂದ ಇನ್ನಷ್ಟು ಹಣ ಬಾಚಿಕೊಳ್ಳಲು ಸರ್ಟಿಫಿಕೇಟ್‌ಗಳನ್ನು ನೀಡದೆ ಸತಾಯಿಸುತ್ತವೆ. ಇಂತಹ ವಿದ್ಯಾರ್ಥಿಗಳು ಎಲ್ಲಿಯೂ ಸಲ್ಲದವರಾಗುತ್ತಾರೆ. ತಾಯ್ನಾಡಿನ ಖಾಸಗಿ ಕಾಲೇಜುಗಳೂ ಇವರ ಕೈಗೆಟುಕುವುದಿಲ್ಲ, ಭಾರತದ ಅದ್ಭುತ ನರ್ಸ್‌ಗಳ ಸಂಪತ್ತು ಈ ರೀತಿ ನಶಿಸಿ ಹೋಗುತ್ತಿದೆ.

ಹಿಂದೊಮ್ಮೆ 'ಉದ್ಯಾನ ನಗರಿ'ಯಾಗಿದ್ದ ಬೆಂಗಳೂರು ಈಗ ಕಾಂಕ್ರೀಟ್ ಕೊಂಪೆಯಾಗಿ ಬೆಳೆಯುತ್ತಲೇ ಇದೆ. ಬಹಳಷ್ಟು ಕೆರೆಗಳನ್ನು ನುಂಗಿ ನೀರು ಕುಡಿದು ರಿಯಲ್ ಎಸ್ಟೇಟ್ ದಂಧೆ ಬೃಹದಾಕಾರವಾಗಿ ಬೆಳೆದು ನಿಂತಿದೆ. ಕೆರೆಗಳನ್ನೆಲ್ಲಾ ಬರಿದು ಮಾಡಿರುವುದರಿಂದ ವರ್ಷಪೂರ್ತಿ ನೀರಿನ ಸಮಸ್ಯೆಯಿಂದ ಬಳಲುವ ಲೆಕ್ಕವಿಲ್ಲದಷ್ಟು ಪ್ರದೇಶಗಳು ಇಲ್ಲಿವೆ. ಮಳೆಗಾಲದಲ್ಲಿ ತತ್ತರಿಸುವ ಬಡಾವಣೆಗಳೂ ಸಾಕಷ್ಟಿವೆ. ಯಾಕೆಂದರೆ ಕೆರೆಗಳ ಮೇಲಲ್ಲವೇ ಕಟ್ಟಡಗಳಿದ್ದಿರುವುದು?! ಇದು ಮೂರ್ಖತನವಲ್ಲದೆ ಇನ್ನೇನು? ಆದರೂ ನಾವು ಇಂತಹ ಅಭಿವೃದ್ಧಿ ವಾದವನ್ನೇ ಒಪ್ಪಿಕೊಂಡಿದ್ದೇವೆ!

ಹಿಂದೊಮ್ಮೆ 'ಉದ್ಯಾನ ನಗರಿ'ಯಾಗಿದ್ದ ಬೆಂಗಳೂರು ಈಗ ಕಾಂಕ್ರೀಟ್ ಕೊಂಪೆಯಾಗಿ ಬೆಳೆಯುತ್ತಲೇ ಇದೆ. ಬಹಳಷ್ಟು ಕೆರೆಗಳನ್ನು ನುಂಗಿ ನೀರು ಕುಡಿದು ರಿಯಲ್ ಎಸ್ಟೇಟ್ ದಂಧೆ ಬೃಹದಾಕಾರವಾಗಿ ಬೆಳೆದು ನಿಂತಿದೆ. ಕೆರೆಗಳನ್ನೆಲ್ಲಾ ಬರಿದು ಮಾಡಿರುವುದರಿಂದ ವರ್ಷಪೂರ್ತಿ ನೀರಿನ ಸಮಸ್ಯೆಯಿಂದ ಬಳಲುವ ಲೆಕ್ಕವಿಲ್ಲದಷ್ಟು ಪ್ರದೇಶಗಳು ಇಲ್ಲಿವೆ. ಮಳೆಗಾಲದಲ್ಲಿ ತತ್ತರಿಸುವ ಬಡಾವಣೆಗಳೂ ಸಾಕಷ್ಟಿವೆ. ಯಾಕೆಂದರೆ ಕೆರೆಗಳ ಮೇಲಲ್ಲವೇ ಕಟ್ಟಡಗಳಿದ್ದಿರುವುದು?! ಇದು ಮೂರ್ಖತನವಲ್ಲದೆ ಇನ್ನೇನು? ಆದರೂ ನಾವು ಇಂತಹ ಅಭಿವೃದ್ಧಿ ವಾದವನ್ನೇ ಒಪ್ಪಿಕೊಂಡಿದ್ದೇವೆ!



ಮಾಧ್ಯಮದವರಿಗೆ ತಾಂತ್ರಿಕ ಬೆಳವಣಿಗೆಯಷ್ಟೇ ಅಭಿವೃದ್ಧಿ. ಮನುಷ್ಯರ ಜೀವನಮಟ್ಟದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ತಂತ್ರಜ್ಞಾನದ ಸಾಮರ್ಥ್ಯದ ಪರೀಕ್ಷೆಗಳೂ ನಡೆಯುವುದಿಲ್ಲ. ಆದರೂ ಇಂತಹ ತಂತ್ರಜ್ಞಾನವಿಲ್ಲದೆ ಅಭಿವೃದ್ಧಿ ಕೆಲಸಗಳು ನಡೆಯುವುದಿಲ್ಲ, ಉದಾಹರಣೆಗೆ ಜನರ ನೀರಿನ ಅವಶ್ಯಕತೆಗಳನ್ನು ಪೂರೈಸುವ ಸ್ಥಳೀಯವಾದ ಪರಿಹಾರ ಮಾರ್ಗಗಳಿದ್ದರೂ ಅವು ಅಭಿವೃದ್ಧಿಪರ ಮಾರ್ಗಗಳಾಗಿರುವುದಿಲ್ಲ, ಆದರೆ ನೀವು ನಿಮ್ಮ ಆಂತರಿಕ ಉತ್ಪನ್ನದ ಕಾಲು ಭಾಗವನ್ನು ಅಸಂಬದ್ಧವಾದ ನದಿಜೋಡಣೆ ಯೋಜನೆಗೆ ರಾಷ್ಟ್ರಮಟ್ಟದಲ್ಲಿ ವಿನಿಯೋಗಿಸಿದರೆ ಅದು ಅಭಿವೃದ್ಧಿಯೆನಿಸಿಕೊಳ್ಳುತ್ತದೆ. ಇಂತಹ ಯೋಜನೆಗಳ ಫಲಿತಾಂಶ ಏನಾಗುತ್ತದೆ ಎಂದು ಯಾವ ನರಪಿಳ್ಳೆಗೂ ಗೊತ್ತಿಲ್ಲದಿರುವುದು ಅಚ್ಚರಿಯ ವಿಷಯವಲ್ಲ.



ವಿಶೇಷ ಲೇಖನ

ಪಿ. ಸಾಯಿನಾಥ್

ಬೃಹತ್ ಕಾರ್ಪೊರೇಟ್ ಆಸ್ಪತ್ರೆಗಳು ಅಭಿವೃದ್ಧಿಯ ನಿಜವಾದ ಸಂಕೇತ! ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಣ್ಣ ದವಾಖಾನೆಗಳು ಅಲ್ಲವೇ ಅಲ್ಲ, ಒಂದು ಸಣ್ಣ ಗಾಯಕ್ಕೆ ಅಂಗ ಜೋಡಣೆಯ ಸಾಧ್ಯತೆ ಇದ್ದಾಗ ಬ್ಯಾಂಡೇಜ್‌ಗಳ ಅವಶ್ಯಕತೆ ಇದೆಯೇ?! ವೈದ್ಯಕೀಯ ಪ್ರವಾಸೋದ್ಯಮದಿಂದ ಕೆಲವರಾದರೂ ಅಗಾಧವಾಗಿ ಹಣ ಕೊಳ್ಳೆ ಹೊಡೆಯುವಂತಹ ಸ್ಥಿತಿಗೆ ನಾವಾಗಲೇ ತಲುಪಿದ್ದೇವೆ. ದಲ್ಲಾಳಿಗಳು ಟೋಪಿ ಹಾಕಿ ಮಾರಾಟ ಮಾಡುವ ಸೊಳ್ಳೆನಾಶಕ ಔಷಧಿ ಸಿಂಪಡಿಸಿರುವ ಪರದೆಗಳಿಂದ ತಂತ್ರಜ್ಞಾನಕ್ಕೆ, ಕಾರ್ಪೊರೇಟ್‌ಗಳಿಗೆ, ಮಧ್ಯವರ್ತಿಗಳಿಗೆ, ಭ್ರಷ್ಟ ಅಧಿಕಾರಿಗಳಿಗೆ ತಾನೆ ಲಾಭ. ಹಾಸಿಗೆ ಇಲ್ಲದವರಿಗೆ ಸೊಳ್ಳೆ ಪರದೆಗಳೇಕೆ ಎಂದು ನೀವು ತಲೆ ಕೆಡಿಸಿಕೊಳ್ಳಬಾರದು ಅಥವಾ ಮಲೇರಿಯಾ ಹರಾವ ಲಂಬಿಗಳು ತೀರ ಅಸಹಕಾರಿಗಳೆನ್ನುವುದು ಕೂಡ ಮುಖ್ಯವಲ್ಲ, ಹೆಚ್ಚು ಸಮಯದಲ್ಲಿ ನೀವು ತಣ್ಣಗೆ ಮಲಗಿರುವಾಗ ಹತ್ತಿರ ಸುಳಿಯದ ಇವು ಬೇರೆ ಸಮಯದಲ್ಲಿ ನಿಮ್ಮ ಮೇಲೆ ಆಕ್ರಮಣ ಮಾಡಬಹುದು. ಆದರೆ ಅದು ಕೂಡ ಇಲ್ಲಿ ಮುಖ್ಯವಲ್ಲ. ಲಕ್ಷಾಂತರ ಕೆಲಸಗಾರರು ಹೊಲ-ಗದ್ದೆಗಳಿಗೆ ಹೊರಡುವ ಮತ್ತು ವಾಪಸ್ಸಾಗುವ ಸಮಯದಲ್ಲೇ ಹೆಚ್ಚಾಗಿ ರೋಗ ತಗುಲುತ್ತದೆ ಎನ್ನುವುದು ಸರಳವಾದ ವಿಷಯ. ಬೇಕಾದರೆ ಆಗಲೂ ನೀವು ಸೊಳ್ಳೆ ಪರದೆ ಧರಿಸಿ ಹೊಸ ಫ್ಯಾಷನ್ ಮಾಡಬಹುದು, ಆದರೆ ನೀವು ಬದಿರು ಕತ್ತರಿಸುವವರಾದರೆ ಕೊಂಚ ಕಷ್ಟವಾದೀತು.

ಯಾವುದೇ ಒಂದು ಕಾರ್ಯನಿರ್ವಹಣೆಗೆ ಏಕಮುಖಿ ಧೋರಣೆ ಮಾತ್ರ ಸರಿಯಾದ ಮಾರ್ಗ ಎಂಬ ನಂಬಿಕೆ ಆರ್ಥಿಕ ಹಿನ್ನಡೆಯ ಹಿಂದೆ ಕೆಲಸ ಮಾಡುತ್ತದೆ. ಬೃಹತ್ ಮಟ್ಟದ ಖಾಸಗೀಕರಣದ ದಾರಿ ಎಂದರೆ ಇದೇ. ಇವುಗಳಲ್ಲಿ ಶಾಮೀಲಾದ ದೊಡ್ಡ ಹೆಸರುಗಳನ್ನು ನಾವು ಮರೆಯುವಂತಿಲ್ಲ. ಎನ್ರಾನ್ ಯುಗದಲ್ಲಿನ ಧಾಬೋಲ್ ಯೋಜನೆ ಇದಕ್ಕೆ ಒಂದು ಉತ್ತಮ ನಿದರ್ಶನ. ಸ್ವಲ್ಪ ಹಿಂದಕ್ಕೆ ಹೋಗಿ ಅವಲೋಕಿಸಿದರೆ ಸ್ಪಷ್ಟವಾಗುತ್ತದೆ. ಒಮ್ಮೆ ಲಾಭದಲ್ಲಿ ನಡೆಯುತ್ತಿದ್ದ ಮಹಾರಾಷ್ಟ್ರ ವಿದ್ಯುಚ್ಛಕ್ತಿ ಮಂಡಳಿಗೆ ಕ್ರಮಬದ್ಧವಾಗಿ ಸಹಾಯ ಧನವನ್ನು ಒದಗಿಸಿದ್ದರೆ ಸಾವಿರಾರು ಕೋಟಿಗಟ್ಟಲೆ ಹಣ ಉಳಿಸಬಹುದಿತ್ತು, ಇದೆಲ್ಲದರಿಂದ ಬಜೆಟ್‌ನಲ್ಲಿ ಜನಸಾಮಾನ್ಯರಿಗಾಗಿ ಮೀಸಲಿಟ್ಟ ಕ್ಷೇಮಾಭಿವೃದ್ಧಿ ಧನಸಹಾಯ ಸಿಗದಂತಾಗಿರುವುದು ಅತ್ಯಂತ ನೋವಿನ ಸಂಗತಿ. ನಾವು ವಿಶ್ವಮಟ್ಟಕ್ಕೆ ಏರುವ ತವಕದಲ್ಲಿ ವಿದ್ಯುಚ್ಛಕ್ತಿಗೆ ಪ್ರಪಂಚದಲ್ಲೇ ಅತಿ ಹೆಚ್ಚು ಬೆಲೆ ತೆತ್ತರೂ ಪರವಾಗಿಲ್ಲ ಅಲ್ಲವೆ?




ನರ್ಮದಾ ಸಂಬಂಧಿ ಅಭಿವೃದ್ಧಿ ಚರ್ಚೆಗೂ ಇದೇ ಗತಿ. ನೀರಿನ ಬವಣೆಗೆ ಅಣೆಕಟ್ಟು ನಿರ್ಮಾಣವೊಂದೇ ಪರಿಹಾರ, ಇನ್ನೆಲ್ಲವೂ ಗೌಣ! ಒಂದಷ್ಟು ಪುನರ್ವಸತಿ ನಾಟಕವಾಡಿದರೆ ಸಾಕು. ನಿಜವಾದ ಕಾಳಜಿ ಅನುಷ್ಠಾನಗೊಳ್ಳದಿದ್ದರೂ ಚಿಂತೆಯಿಲ್ಲ, ಇಂತಹ ಯೋಜನೆಗಳನ್ನು ಅನುಷ್ಠಾನಗೊಳಿಸುವುದೇ ಅಸಾಧ್ಯ ಎನ್ನುವ ವಿಷಯ ಇಲ್ಲಿ ಅಪ್ರಸ್ತುತವಾಗುತ್ತದೆ. ಇಲ್ಲಿ ಯೋಜನೆಗಳು ಮತ್ತು ಅವು ತರುವ ಹಣ ಮಾತ್ರ ಮುಖ್ಯವಾಗುತ್ತದೆ. ಜನಸಾಮಾನ್ಯರ ಕುಂದುಕೊರತೆಗಳು ಬರಿಯ ನೆಪ ಅಷ್ಟೇ. ಕಛ್ ಮತ್ತು ಸೌರಾಷ್ಟ್ರದ ನೀರನ್ನು ಬೇರೆ ಲಾಭದಾಯಕ ದಿಕ್ಕುಗಳಿಗೆ ಹರಿಸುತ್ತಿರುವ ವಿಷಯ ಪ್ರಸ್ತಾಪದ ಅರ್ಹತೆಗೂ ನಾಲಾಯಕು. ಇದರಿಂದ ಉತ್ಪಾದಿಸಲ್ಪಟ್ಟ ಅಸಹ್ಯ ವಿದ್ಯುಚ್ಛಕ್ತಿ ಕೂಡ ಅತ್ಯಲ್ಪ! ಅಂದಹಾಗೆ ಇದಕ್ಕೂ ಅಭಿವೃದ್ಧಿಗೂ ಏನಾದರೂ ಸಂಬಂಧವಿದೆಯೇ? ಜನರ ಒಳ್ಳಿತಿಗೆ ಮತ್ತು ಅಭಿವೃದ್ಧಿಗೆ ಅರ್ಥಾತ್ ಸಂಬಂಧ ಇಲ್ಲಿ ಕಾಣಿಸುತ್ತಿಲ್ಲ!

ಒರಿಸ್ಸಾದ ಪೊಲೀಸರು ಕಳಿಂಗ ನಗರದಲ್ಲಿ 13 ಮಂದಿ ಆದಿವಾಸಿಗಳನ್ನು ಗುಂಡಿಟ್ಟು ಕೊಂದರು. ಇಂತಹ ಘೋರ ಅಪರಾಧಕ್ಕೆ ನಾಲಿಗೆ ಲೊಚಗುಟ್ಟಿಸಿ ಛೇ ಛೇ ಎಂದು ಕನಿಕರ ಮಾತ್ರ ಸೂಚಿಸಲಾಯಿತು. ದೊಡ್ಡ ದಿನಪತ್ರಿಕೆಯೊಂದು ತಕ್ಷಣ ತನ್ನ ಸಂಪಾದಕೀಯಕ್ಕೆ ಈ ವಿಷಯವನ್ನು ಆರಿಸಿಕೊಂಡು "ಅಭಿವೃದ್ಧಿ ಯೋಜನೆಗಳಿಂದ ಜನಸಾಮಾನ್ಯರು ನಿರಾಶ್ರಿತಗೊಳ್ಳುವುದು ಸಹಜ. ಇಲ್ಲಿ ಪ್ರಶ್ನೆ ಇರುವುದು ಅವರಿಗೆ ಹೇಗೆ ಪುನರ್ವಸತಿ ಕಲ್ಪಿಸುವುದು ಎಂದು. ಅಭಿವೃದ್ಧಿಗಾಗಿ ನಾವು ಇದೆಲ್ಲವನ್ನೂ ಎದುರಿಸಲೇಬೇಕು" ಎಂದು ಬರೆದು ಬೇಜವಾಬ್ದಾರಿತನ ಮೆರೆದಿದೆ.

ಒರಿಸ್ಸಾದಂತಹ ರಾಜ್ಯದಲ್ಲಿ ಹಲವಾರು ಯೋಜನೆಗಳಿಗಾಗಿ ಸಾವಿರಾರು ಎಕರೆ ಪ್ರದೇಶವನ್ನು ಜನರಿಂದ ಕಿತ್ತುಕೊಳ್ಳಲಾಯಿತು. ಯಾವುದಕ್ಕಾಗಿ? ಅನುಷ್ಠಾನಗೊಳ್ಳದ ಯೋಜನೆಗಳಿಗಾಗಿ. ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ ಇದಕ್ಕೆ ಕೇವಲ ಒಂದು ಉದಾಹರಣೆಯಷ್ಟೆ. ಎಚ್‌ಎಎಲ್‌ನ ಯೋಜನೆಗಳಿಗಾಗಿ ನಡೆದಿರುವ ಭೂಕಬಳಿಕೆ ಅಷ್ಟಿಷ್ಟಲ್ಲ. ಆದರೆ ನಂತರ ಯೋಜನೆ ಅನುಷ್ಠಾನಗೊಂಡಿದ್ದು ಬೆಂಗಳೂರು ಮತ್ತಿತರೆಡೆ ಹೊರತು ಒರಿಸ್ಸಾದಲ್ಲಲ್ಲ, ಕಬಳಿಸಲಾದ ಭೂಮಿಯನ್ನು ನಿರಾಶ್ರಿತಗೊಂಡ ಕುಟುಂಬಗಳಿಗೂ ವಾಪಸ್ಸು ಮಾಡಲಿಲ್ಲ, ಇದೇ ರಾಜ್ಯದಲ್ಲಿ ಅನುಷ್ಠಾನಗೊಳ್ಳದ ಯೋಜನೆಗಳಿಗಾಗಿ ಒಂದೇ ಹಳ್ಳಿಯನ್ನು ಮೂರು ಬಾರಿ ಸ್ಥಳಾಂತರಿಸಲಾಗಿದೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. 1960ರ ಅಣೆಕಟ್ಟುಗಳು ನಿರ್ನಾಮ ಮಾಡಿರುವ ಹಳ್ಳಿಗಳ ಕುರುಹುಗಳು ಇಲ್ಲಿ ಇನ್ನೂ ಇವೆ ಎಂದರೆ ಈ ಯೋಜನೆಗಳ ಭೀಕರತೆ ನಿಮಗೆ ಅರಿವಾಗಬಹುದು. ಈ ರೀತಿಯ ಘಟನೆಗಳು ಮುಂಬೈನ ಮಲಬಾರ್ ಹಿಲ್ಸ್ ಮೇಲೆ ಬಡಿಗಾಸಿನಷ್ಟೂ ಪರಿಣಾಮ ಬೀರುವುದಿಲ್ಲ, ಯಾವಾಗ ನಾಗಪಟ್ಟಣಂನಲ್ಲಿ ಸುನಾಮಿಯಿಂದ 30,300 ಜನ ನೀರುಪಾಲಾದರೋ ಆಗ ಇದೇ ಮುಂಬಯಿಯಲ್ಲಿ ಮಲಬಾರ್ ಹಿಲ್ಸ್‌ಗೆ ಕಿಂಚಿತ್ತೂ ಅರಿವಾಗದ ರೀತಿಯಲ್ಲಿ 84 ಸಾವಿರ ಬಡಜನರ ಮನೆಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ನೆಲಸಮ ಮಾಡಲಾಯಿತು. ಇದಕ್ಕೆ ಹಿನ್ನಡೆಯೆನ್ನದೆ ಏನೆನ್ನಬೇಕು?

ಈ ಹಿನ್ನಡೆ ಪ್ರಕ್ರಿಯೆಗಳು ಬೇರೆ ರೀತಿಯಲ್ಲೂ ಕಾಣಸಿಗುತ್ತವೆ. ಉದಾಹರಣೆಗೆ ಹೇಗೆ ಕೆಲವು ನೀರಸ ವಿಚಾರಗಳನ್ನು ಅತ್ಯುತ್ಪ್ರೇಕ್ಷೆಗೊಳಿಸಲಾಗುತ್ತವೆ ನೋಡಿ, 'ಮಾಲ್'ಗಳು ಉತ್ಕೃಷ್ಟವೆನಿಸುವ ಸಾರ್ವಜನಿಕ ಸ್ಥಳಗಳಂತೆ. ಒಂದು ಇಂಗ್ಲಿಷ್ ದಿನಪತ್ರಿಕೆ ಮಾಲ್‌ಗಳ ಬಗ್ಗೆ ಬರೆದ ರೀತಿ ಪೇಲವವಾಗಿದೆ: 'ಸ್ನೇಹಪರ ಆಪ್ತ ಮಾಲ್‌ಗಳೆಂಬ ಅಡ್ಡೆಗಳಲ್ಲಿ ವಿಹಾರ... ಈ ಸುಂದರ ಮಾಲ್‌ಗಳು ಈಚೆಗೆ ಅಪರೂಪವಾದ, ಭ್ರಷ್ಟರಹಿತ, ಸುರಕ್ಷಿತ, ಅತ್ಯದ್ಭುತ ಆವಿಷ್ಕಾರಗಳು.



ಇವು ಯಾವುದೇ ಒಂದು ವರ್ಗಕ್ಕೂ ಕೃಪೆಮಾಡದ ಒಂದು ಸಾರ್ವಜನಿಕ ಅವಶ್ಯ ಸ್ಥಳ. ಇಲ್ಲಿ ಬಾತ್‌ರೂಂ ಮತ್ತು ಸಂಬಂಧಿತ ಕೆಲಸಗಳೆಲ್ಲ ಉಚಿತ. ಇಲ್ಲಿಯ ಕೆಲವು ಅಂಗಡಿಗಳು ಅತಿ ದುಬಾರಿಯ ಡೈಮಂಡ್‌ಗಳಿಂದ ಅಲಂಕೃತಗೊಂಡ ಪೆನ್‌ಗಳನ್ನು ಮಾರಿದರೂ ಯಾವುದೇ ಒಂದು ವರ್ಗಕ್ಕೆ ಮೀಸಲಿಲ್ಲವೆಂಬ ಅವರ ಘೋಷಣೆಗೆ ಏನೆನ್ನೋಣ? ಹಾಗೆಯೇ ಇಲ್ಲಿನ ಇತರ ಅಂಗಡಿಗಳು ಅನೇಕಾನೇಕ ಚಿಲ್ಲರೆ ವ್ಯಾಪಾರಿಗಳಿಗೆ ಮತ್ತು ಸಂಬಂಧಿ ಚಟುವಟಿಕೆಗಳಿಗೆ ಹೇಗೆ ಕೊಡಲಿಪೆಟ್ಟು ಕೊಡುತ್ತಿವೆ ಎನ್ನುವುದು ತಲೆಕೆಡಿಸಿಕೊಳ್ಳುವ ವಿಷಯವಲ್ಲ ಬಿಡಿ. ಇದು ಅಭಿವೃದ್ಧಿಯ ಏಕಮುಖಿ ವ್ಯಾಖ್ಯೆಗೆ ತಕ್ಕುದ್ದಾಗಿದೆ.

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತಂತ್ರಜ್ಞಾನ ಬಹಳ ಮುಖ್ಯವಾದ ವಿಷಯ. ಅದು ಮುಖ್ಯವಾಗಲೇ ಬೇಕು. ಆದರೆ ಉತ್ತರಿಸಲೇಬೇಕಾದ ಪ್ರಶ್ನೆಗಳೆಂದರೆ: ಯಾರ ಲಾಭಕ್ಕಾಗಿ ಈ ಅಭಿವೃದ್ಧಿ? ಇದಕ್ಕಾಗಿ ತೆರಬೇಕಾದ ಬೆಲೆ ಎಷ್ಟು? ನೀವು ಮಾಡಬೇಕಾದ ಕೆಲಸ ಒಳ್ಳೆಯದೆಂಬ ಕಾರಣಕ್ಕೆ ಮಾಡುತ್ತೀರೋ ಅಥವಾ ನಿಮಗೆ ಅದು

→



ೆಂಪು ನಾಲಗೆ ಮೇಲೆ
ತ್ತ ಪ್ರತಿ ಸಂಜೆಯಲ್ಲೊಮ್ಮೆ
ೀವಂತ ಹೆಜ್ಜೆಯನ್ನಿಟ್ಟು
ುಕ್ಕಿಗಳು ಚದುರುವ ಹೊತ್ತು
ೈಮುರಿದು; ಆಕಳಿಸಿ
ೆಲ್ಲಾಪಿಲ್ಲಿ ಕಸಕೂದಲ
ಳಿದು ಮುಡಿಕಟ್ಟಿ
ಣೆಯಂಗಳದಿ ರಂಗವಲ್ಲಿ ಹಾಕಿ
ಣ್ಣಂಚಿಗೆ ಕಾಡಿಗೆ ತೀಡಿ
ಡೆದು ಬಿಡುತ್ತೇನೆ ಹೀಗೆ.....
ುತುಮಾನ ರಸ್ತೆಗಳಲ್ಲಿ
ಿಗುಮಾನ ಹಾಸಿ
ೆಂಪು ನಾಲಗೆ ಮೇಲೆ
ತ್ತಲ ಜಗಿದು; ಮುಗಿಲಿಗೆ ಉಗಿದು
ಡು ರಾತ್ರಿಯಲಿ
ಮರ್‍ಯಾದೆ' ಜಗದ ಮುಲಾಜಿಲ್ಲದೆ
ುರ್ಕ್ಯುರಿ ಲೈಟಿನಡಿಗೆ
ೂವ ಸರಿಪಡಿಸುತ್ತಾ....

— ರಮೇಶ ಅರೋಲಿ
ಅಸ್ಕಿಹಾಳ್

ಧ್ಯವಾಗುತ್ತದೆ ಎಂಬ ಕಾರಣಕ್ಕೆಮಾಡುತ್ತೀರೋ? ಒಂದು ಲಸವನ್ನು ಬೇರೆ ಬೇರೆ ರೀತಿಯಲ್ಲಿ ಮಾಡಲು ಧ್ಯವಿಲ್ಲವೇ? ಯಾವುದು ಅದರಲ್ಲಿ ಅತ್ಯಂತ ುಂಜಸವಾದದ್ದು? ಬಡಜನರು ತಮ್ಮ ಅಭಿಪ್ರಾಯವನ್ನು ಿಸಲು ಅರ್ಹರಲ್ಲವೇ? ಈ ದೇಶದಲ್ಲಿ ಅವರಿಗೆ 'ಇಲ್ಲ' ನ್ನುವ ಹಕ್ಕಿಲ್ಲವೇ?

ಹೈಟೆಕ್ ಮಾಲ್‌ಗಳ ಅಭಿವೃದ್ಧಿ ಹಳಸಲು ಚರ್ಚೆಗಳು ರಳದಂತಹ ಸುಶಿಕ್ಷಿತ ರಾಜ್ಯದಿಂದ ಬರುತ್ತಿರುವುದು ಚಿತ್ರವಾದರೂ ಸತ್ಯ. ಈ ಚೌಕಟ್ಟಿನೊಳಗೆ ೋಡುವುದಾದರೆ ಬಿಹಾರ ಮತ್ತು ಉತ್ತರ ಪ್ರದೇಶ ಜ್ಯಗಳು ಕೇರಳಕ್ಕೆ ಎಂದೋ ಸೆಡ್ಡು ಹೊಡೆದು ಮುಂದೆ ೋಗಿವೆ. ಲೆಕ್ಕವಿಲ್ಲದಷ್ಟು ದೊಡ್ಡ ಬಜೆಟ್ಟಿನ ಅಭಿವೃದ್ಧಿ ೋಜನೆಗಳು ಇಲ್ಲಿ ಯಾವಾಗಲೂ ಇದ್ದಿದ್ದೇ. ಆದರೆ ನಸಾಮಾನ್ಯರ ಜೀವನಮಟ್ಟದಲ್ಲಂತೂ ಅಷ್ಟಾಗಿ ದಲಾವಣೆ ಕಂಡಿಲ್ಲ.

ಅಂದಹಾಗೆ ಇದೆಲ್ಲದರ ಮಧ್ಯೆ ನಿಜವಾದ ಅಭಿವೃದ್ಧಿ ಾಚಕವನ್ನೇ ನಾವು ಮರೆತುಬಿಟ್ಟಿದ್ದೇವೆ. ಅದು ಕೂಡ ಚರ್ಚೆಯಲ್ಲಿ ಮುಖ್ಯವಾಗಲೇ ಬೇಕು. ಎಲ್ಲಾ ಜ್ಯಗಳಲ್ಲಿನ 30% ಕೆಳಸ್ತರದ ಜನ ದಿನು ಾಡುತ್ತಿದ್ದಾರೆಂದು ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿಟ್ಟು ಟ್ಟಿಸಿದರೆ ವಿಕಮುಖಿ ಅಭಿವೃದ್ಧಿ ಪಾಡಕ್ರಿತ ಭಗ್ನವಾದ ಭಿವೃದ್ಧಿ ಪಾತ್ರೆಯನ್ನು ಬರೆಯಬಹುದು.

ಕೃಪೆ : 'ದಿ ಹಿಂದು'

ಕನ್ನಡಕ್ಕೆ

ಸತ್ಯಪ್ರಕಾಶ್ ಎಂ. ಆರ್. ಮತ್ತು
ಎಸ್. ಕೃಷ್ಣಮೂರ್ತಿ ರಾವ್

ಉಪನ್ಯಾಸಕರು,
ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರ,
ತುಮಕೂರು.

ತವರಿನ ಸಿರಿ, ಗೋಳಿನ ಸಿರಿ!



'ತವರಿಗೆ ಬಾ ತಂಗಿ', 'ಅಣ್ಣ ತಂಗಿ', 'ಮನೆ ಮಗಳು' ತರಹದ ಚಿತ್ರಗಳ ಸಾಲಿಗೆ 'ತವರಿನ ಸಿರಿ' ಸೇರುತ್ತದೆ. ಇವತ್ತು ನಮ್ಮ ಸುತ್ತಲಿನ ಸಮಾಜವನ್ನು ಗಮನಿಸಿದರೆ, ಅಣ್ಣ-ತಂಗಿ, ಅಕ್ಕ-ತಮ್ಮ ಇರಲಿ ಯುವ ಪ್ರೇಮಿಗಳಲ್ಲೂ ಇಂಥ ಅಪಾರ ಪ್ರೇಮ ಕಂಡುಬರುವುದಿಲ್ಲ. ಏಕೆಂದರೆ ಪ್ರೇಮಿಗೆ ಕೈ ಕೊಟ್ಟ ಮರುಕ್ಷಣವೇ ಮರೆತು ಬಿಡುವ ಜೆನರೇಷನ್ ಈಗಿನ ಕಾಲದ್ದು. ಇಂತಹ ಸಮಯದಲ್ಲಿ 'ತವರಿನ ಸಿರಿ' ತರಹದ ಸಿನಿಮಾ ಎಷ್ಟರ ಮಟ್ಟಿಗೆ ಪ್ರಸ್ತುತ ಎಂಬುದು ಒಂದು ಪ್ರಶ್ನೆ.

ಅದೆಲ್ಲ ಇರಲಿ, ಈ ಚಿತ್ರ 'ಬೆಳ್ಳಿ ಮೋಡ', 'ಬಂಗಾರದ ಮನುಷ್ಯ' ಚಿತ್ರಗಳಷ್ಟೇ ಚೆನ್ನಾಗಿದೆ ಅಂತ ಮಾತು ಕೇಳಿ ಬಂದಿತ್ತು. ಆದರೆ ಆ ಸಿನಿಮಾಗಳನ್ನು ನಾವು ಈಗ ನೋಡಿದರೂ ನಾವು ಅಂದಿನ ಸಿನಿಮಾ ನೋಡುತ್ತಿದ್ದೇವೆ ಅನ್ನುವುದನ್ನು ಮನಸಿನಲ್ಲಿ ಇಟ್ಟುಕೊಂಡು ನೋಡುತ್ತೇವೆ. ಅಂದಿನ ಸಿನಿಮಾಗಳು ಇವತ್ತೂ ನಮ್ಮ ಹೃದಯವನ್ನು ತಾಕುತ್ತವೆ, ಹಾಡುಗಳು ಇವತ್ತಿಗೂ ಇಂಪಾಗಿ ಕೇಳಿಸುತ್ತವೆ. ಇದನ್ನೇ ನಾಸ್ಟಾಲ್ಜಿಯಾ ಅನ್ನುವುದು. ಅಂದಹಾಗೆ 'ಬೆಳ್ಳಿ ಮೋಡ', 'ಬಂಗಾರದ ಮನುಷ್ಯ'ದಂತಹ ಸಿನಿಮಾಗಳಿಗೆ 'ತವರಿನ ಸಿರಿ' ತರಹದ ಕೆಟ್ಟ ಸಿನಿಮಾ ಹೋಲಿಸುವುದು ಕಷ್ಟ.

ಮುತ್ತಣ್ಣ (ಶಿವರಾಜಕುಮಾರ್)ನ ತಂದೆ-ತಾಯಿ ಸಿಡಿಲು ಹೊಡೆದು ಸಾಯುತ್ತಾರೆ. ಮುತ್ತಣ್ಣ ತನ್ನ ಮೂರು ತಂಗಿಯರನ್ನು ಕಷ್ಟಪಟ್ಟು ಸಾಕಿ ಸಲಹುತ್ತಾನೆ. ಬೆವರು ಸುರಿಸುತ್ತಾ ಛಲದಿಂದ ದುಡಿದು ಊರಿಗೇ ಶ್ರೀಮಂತನಾಗುತ್ತಾನೆ, ಮತ್ತು ಧಾನಶೂರ ಕರ್ಣ ಎನಿಸಿಕೊಳ್ಳುತ್ತಾನೆ. ಎಂದಿನಂತೆ ತನ್ನನ್ನು ರೇಪ್ ಮಾಡಲು ಬರುವ ವಿಲನ್ (ಶೋಭರಾಜ್)ನಿಂದ ತಪ್ಪಿಸಿಕೊಳ್ಳಲು ನಾಯಕಿ ಪ್ರಿಯಾ (ಡೈಸಿ ಬೋಪಣ್ಣ) ಓಡೋಡಿ ಬಂದು ನಾಯಕ ಮುತ್ತಣ್ಣನ ತೋಳ ತೆಕ್ಕೆಗೆ ಬೀಳುತ್ತಾಳೆ. ಮುತ್ತಣ್ಣ ಅವಳನ್ನು ರಕ್ಷಿಸಿ ತನ್ನ ಮನೆಯ ಹಿಂಭಾಗದಲ್ಲಿರುವ ಮನೆಯಲ್ಲೇ ಆಶ್ರಯ ನೀಡುತ್ತಾನೆ.

ತನ್ನ ತಂಗಿಯರು ದೊಡ್ಡ ಡಾಕ್ಟರ್ ಅಥವಾ ಇಂಜಿನಿಯರನ್ನೇ ಮದುವೆ ಆಗಬೇಕು ಅಂತ ಆಶಿಸುವ ಮುತ್ತಣ್ಣ ಅಂತ ವರರನ್ನೇ ಹುಡುಕಿ ಅವರಿಗೆ ಮದುವೆ ಮಾಡುತ್ತಾನೆ. ಆದರೆ ತಂಗಿಯರನ್ನು ಆತ ಎಷ್ಟು ಮುದ್ದಾಗಿ, ಸೋಂಭೇರಿಗಳಾಗಿ ಬೆಳೆಸಿರುತ್ತಾನೆ ಅಂದರೆ ಒಬ್ಬಳಿಗೆ ಕಾಫಿ ಮಾಡಲೂ ಬರುವುದಿಲ್ಲ, ಇನ್ನೊಬ್ಬಳಿಗೆ ಸಿಟಿ ಜನರ ಜೊತೆ ಹೊಂದುಕೊಳ್ಳಲು ಆಗುವುದಿಲ್ಲ, ಇಬ್ಬರನ್ನೂ ಗಂಡನ ಮನೆಯವರು ಹೊರ ದೂಡುತ್ತಾರೆ. ಅವರು ಅಣ್ಣನ ಮನೆಗೆ ಹಿಂದಿರುಗಿ ತವ್ಮ ಪಾಡನ್ನು ಹೇಳಿಕೊಳ್ಳಲಾಗದೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಮುತ್ತಣ್ಣ ಅವರನ್ನು ಕಾಪಾಡುತ್ತಾನೆ, ಆದರೆ ಅವರನ್ನು ಸಂತೋಷಪಡಿಸುವುದು ಹೇಗೆ ಎಂದು ಅವನಿಗೆ ತೋಚುವುದಿಲ್ಲ. ಆಗ ಪ್ರಿಯಾ ಅವನ ಸಹಾಯಕ್ಕೆ ಬರುತ್ತಾಳೆ. ಇಬ್ಬರು ತಂಗಿಯರನ್ನು ಬ್ಯೂಟಿ ಪಾರ್ಲರ್‌ಗೆ, ಜಿಮ್‌ಗೆ ಕಳುಹಿಸುತ್ತಾಳಲ್ಲದೆ, ಅರವತ್ತು ದಿನಗಳಲ್ಲಿ ಇಂಗ್ಲಿಷ್ ಮತ್ತು ಅಡುಗೆ ಕಲಿಸುವ ಕ್ಲಾಸ್‌ಗಳಿಗೂ ಸೇರಿಸುತ್ತಾಳೆ. ಗಂಡ, ಅತ್ತೆ ಮತ್ತು ಮಾವನಿಗೆ ಬಾಬ್‌ಕಟ್ ಮಾಡಿಕೊಂಡು ಅಡುಗೆ ಮಾಡುವ ಸೊಸೆಯಂದಿರನ್ನು ನೋಡಿ ಸಂತೋಷವಾಗಿ ಅವರನ್ನು ಮತ್ತೆ ಸ್ವೀಕರಿಸುತ್ತಾರೆ! ಹೀಗೆ ಹೊರಗೆ ಮಾಡ್ ಆಗಿದ್ದು ಒಳಗೆ ಸಂಪ್ರದಾಯಸ್ಥರಾಗಿದ್ದರೆ ಮಾತ್ರ ಮಹಿಳೆಯರು ಮಹಿಳೆಯಂತಿರುತ್ತಾರೆ ಎಂಬ ಮಹಾನ್ ಸಂದೇಶವನ್ನು ನಿರ್ದೇಶಕ ಸಾಯಿಪ್ರಕಾಶ್ ನಮಗೆ ಈ ಚಿತ್ರದಲ್ಲಿ ನೀಡುತ್ತಾರೆ!

ವಿಲನ್‌ಗಳಾಗಿರುವ ಸಂಬಂಧಿಕರು (ಹೇಮಾ ಚೌದರಿ ಮತ್ತು ಮುಂತಾದವರು) ಮುತ್ತಣ್ಣನ ಆಸ್ತಿ ಮತ್ತು ಆತನ ಕೊನೆ ತಂಗಿಯ ಮೇಲೆ ಕಣ್ಣು ಹಾಕುತ್ತಾರೆ. ಹೇಮಾ ಚೌದರಿಯ ಮಗ ಆಗಲೇ ಹುಡುಗಿಯೊಬ್ಬಳನ್ನು ರೇಪ್ ಮಾಡಿರುತ್ತಾನೆ. ಆಕೆ ಬಂದು "ನನ್ನನ್ನು ಮದುವೆ ಮಾಡ್ಕೊಳ್ಳಲ್ಲೇ ಬೇಕು" ಅನ್ನುತ್ತಾಳೆ. ತನ್ನ ಮೇಲೆ ಅತ್ಯಾಚಾರ ಮಾಡಿದವನನ್ನು ಜೈಲಿಗೆ ಹಾಕುವುದನ್ನು ಬಿಟ್ಟು ರೇಪಿಸ್ಟನನ್ನೇ ಮದುವೆ ಆಗ್ತಿನಿ ಅಂತ ಹೇಳುವುದನ್ನು ನಮ್ಮ ಸಿನಿಮಾಗಳಲ್ಲಿ ಯಾವಾಗ ನಿಲ್ಲಿಸುತ್ತಾರೋ ಗೊತ್ತಿಲ್ಲ. ಇಂತಹದ್ದನ್ನು ನೋಡುವುದೇ ಒಂದು ದೊಡ್ಡ ಹಿಂಸೆ ಆಗಿದೆ.

ಹೇಮಾ ಚೌದರಿ ತನ್ನ ಮಗನಿಗೆ "ನೀನು ಮುತ್ತಣ್ಣನ ಕೊನೆಯ ತಂಗಿಯನ್ನು ರೇಪ್ ಮಾಡು. ಆಗ ಅವನೇ ನಮ್ಮ ಕಾಲಿಗೆ ಬಿದ್ದು ಮದುವೆ ಮಾಡಿ ಕೊಡಿ ಅಂತ ಬೇಡಿಕೊಳ್ಳುತ್ತಾನೆ. ಆಗ ಅವನ ಆಸ್ತಿಯಲ್ಲಾ ನಮ್ಮದಾಗುತ್ತೆ" ಎಂದು ಹೇಳಿ ಶುಭ ಹಾರೈಸುತ್ತಾಳೆ! ಇಂತಹ ಘನ ಕಾರ್ಯಕ್ಕೆ ಐವತ್ತು ಸಾವಿರ ರೂಪಾಯಿಗಳನ್ನೂ ಕೊಟ್ಟು ಕಳುಹಿಸುತ್ತಾಳೆ. ಅಲ್ಲಿಗೆ ಮಧ್ಯಂತರ.

ಆದರೆ ಅವಳ ಮಗ ಎಂಥ ಪೆದ್ದ ಅಂದರೆ ಆತ ತಾನು ಮೊದಲು ರೇಪ್ ಮಾಡಿದ್ದ ಹುಡುಗಿಯನ್ನೇ ಮತ್ತೆ ರೇಪ್ ಮಾಡುತ್ತಾನೆ. ಆಗ ಅವನನ್ನು ಹಿಡಿಯುವ ಮುತ್ತಣ್ಣ ರೇಪಿಸ್ಟ್ ಕೈಯಲ್ಲೇ ಹುಡುಗಿಗೆ ತಾಳಿ ಕಟ್ಟಿಸಿ ಕಳುಹಿಸುತ್ತಾನೆ. ಇದೆಂತಹ ಲಾಜಿಕ್? ತಮಾಷೆಯ ವಿಷಯ ಯಾವುದೆಂದರೆ ಮಧ್ಯಂತರದ ನಂತರ ಐದು ನಿಮಿಷ ತಡವಾಗಿ ಬಂದ ನನ್ನ ಸ್ನೇಹಿತನಿಗೆ ಯಾರು ಯಾರನ್ನು ರೇಪ್ ಮಾಡಿದರು, ಯಾರು ಯಾರನ್ನು ಮದುವೆ ಆದರು ಒಂದೂ ಗೊತ್ತಾಗಲಿಲ್ಲ. ಅವನ ಕನ್‌ಫ್ಯೂಷನ್ ನೋಡಿ ನನಗೆ ಎಷ್ಟು ನಗು ಬಂತೆಂದರೆ ನನಗೆ ಉತ್ತರಿಸಲೂ ಆಗಲಿಲ್ಲ.

ಎನಿವೇ, ಕೊನೆಯ ತಂಗಿ ಕಾಲೇಜಿನಲ್ಲೇ ಒಬ್ಬ ಶ್ರೀಮಂತನನ್ನು ಲವ್ ಮಾಡಿರುತ್ತಾಳೆ. ಮುತ್ತಣ್ಣ ಅವಳ ಆಸೆನೇ ಮುಖ್ಯವೆಂದು ಎರಡು ಕೋಟಿ ರೂಪಾಯಿ ಖರ್ಚು ಮಾಡಿ ಅವಳ ಮದುವೆ ನಡೆಸಿಕೊಡುತ್ತಾನೆ. ಈ ಮಧ್ಯೆ ಮುತ್ತಣ್ಣ ಕನಸು ಕಂಡು, ಎರಡೋ ಮೂರೋ ಹಾಡು ಹೇಳಿ ಪ್ರಿಯಾಳನ್ನು ಪ್ರೀತಿಸಲು ಶುರುಮಾಡಿರುತ್ತಾನೆ. ಆದರೆ ಅವಳನ್ನೂ ರೇಪ್ ಮಾಡಲು ಶೋಭರಾಜ್ ಮತ್ತೆ ಪ್ರಯತ್ನ ಮಾಡಿದಾಗ ಮುತ್ತಣ್ಣ ಮತ್ತೆ ಅವಳನ್ನು ಕಾಪಾಡುತ್ತಾನೆ. ಪ್ರಿಯಾಳನ್ನು ತಾನು ಪ್ರೀತಿಸುತ್ತಿರುವುದಾಗಿ ಆಕೆಗೆ ಮುತ್ತಣ್ಣ ಹೇಳಲು ನಿರ್ಧರಿಸುತ್ತಾನೆ. ಆದರೆ ಅವಳು 'ಎಷ್ಟು ದಿನಾ ಅಂತ ನನ್ನ ಕಾಪಾಡಕ್ಕೆ ಆಗುತ್ತೆ, ನಾನು ಕಾಲೇಜಿನಲ್ಲಿ ಪ್ರೀತಿ ಮಾಡಿದವನು ಫಾರಿನ್‌ನಿಂದ ಹಿಂದಿರುಗಿದ್ದಾನೆ. ನಾನು ಅವನನ್ನು ಮದುವೆಯಾಗುತ್ತೇನೆ' ಎಂದು ಹೇಳುತ್ತಾಳೆ. ಮುತ್ತಣ್ಣ ತನ್ನ ಪ್ರೀತಿಯನ್ನು ನುಂಗಿಹಾಕಿಕೊಂಡು ಅವಳಿಗೆ ಅರಿಶಿಣ, ಕುಂಕುಮ ಕೊಟ್ಟು ಕಳುಹಿಸುತ್ತಾನೆ. ಹೀಗೆ ಲವ್ ಡಿಸಪಾಯಿಂಟ್‌ಮೆಂಟ್ ಆದ ಮೇಲೆ ಅವನಿಗೆ ಜೀವನದಲ್ಲೇ ಆಸಕ್ತಿ ಕಳೆದುಹೋಗಿ ಮನೆ, ಆಸ್ತಿ ಮಾರುವ ಪರಿಸ್ಥಿತಿಗೆ ಬರುತ್ತಾನೆ. "ಎಲ್ಲರಿಗೂ ಕಷ್ಟ ಬರುತ್ತೆ ಆದರೆ ದೇವರು ಮತ್ತೆ ನಮ್ಮ ಕಡೆ ನೋಡೇ ನೋಡುತ್ತಾನೆ" ಅಂತ ಕೂಲಿ ಕೆಲಸಕ್ಕೆ ಇಳಿಯುತ್ತಾನೆ. ತಂಗಿಯರಿಗೆ ಇದೆಲ್ಲ ಗೊತ್ತಾಗುವ ಮೊದಲೇ ಅವನು ಮತ್ತೆ ತನ್ನ ಮನೆ ಮತ್ತು ಆಸ್ತಿ ಪಡೆದಿರುತ್ತಾನೆ.

ಆಗ ಹಿಂದಿರುಗುವ ಪ್ರಿಯಾ "ನಾನು ಇನ್ನೂ ಯಾರನ್ನು ಮದುವೆ ಆಗಿಲ್ಲ" ಅಂತ ಹೇಳಿ ಮುತ್ತಣ್ಣನಿಂದಲೇ ತಾಳಿ ಕಟ್ಟಿಸಿಕೊಳ್ಳುತ್ತಾಳೆ. ಅಲ್ಲಿಗೆ ಸಿನಿಮಾ ಮುಗಿಯುತ್ತದೆ.

'ಬಂಗಾರದ ಮನುಷ್ಯ' ಸೇರಿದಂತೆ ಹಿಂದಿನ ಕಾಲದ ಸಿನಿಮಾದ ಕತೆಗಳು ಸರಳವಾಗಿರುತ್ತಿದ್ದವು. ಅವುಗಳಲ್ಲಿ ಒಂದು ರೀತಿಯ ಮುಗ್ಧತೆ ಇರುತ್ತಿತ್ತು, ನನ್ನ ಅಪ್ಪ ಯಾವಾಗಲೂ 'ಸಿಂಪಲ್ ಮತ್ತು ಎಮೋಷನಲ್ ಆಗಿ ಕತೆ ಹೇಳಬೇಕು' ಅಂತ ಹೇಳುತ್ತಿದ್ದರು. ಆ ಅಳತೆಗೋಲು ಹಿಡಿದು ನೋಡಿದರೆ 'ತವರಿನ ಸಿರಿ' ನಮ್ಮನ್ನು ಹಿಂದೆ ಎಳೆದುಕೊಂಡು ಹೋಗುತ್ತದಲ್ಲದೆ, ಒಂದು ಕೆಟ್ಟ ಕನಸು ಕಾಣುತ್ತಿದ್ದೇವೆ ಅನ್ನಿಸುತ್ತದೆ.

ಶಿವರಾಜ್‌ಕುಮಾರ್ ಯಾವ ಪಾತ್ರ ಮಾಡಿದರೂ ಚೆನ್ನಾಗಿಯೇ ನಟಿಸುತ್ತಾರೆ ಎಂಬುದರ ಬಗ್ಗೆ ಸಂಶಯವಿಲ್ಲ. 'ಜೋಗಿ' ಚಿತ್ರದಲ್ಲಿ ಅವರ ನಟನೆ ನೋಡಿ ನಾನು ಬೆರಗಾಗಿದ್ದೆ. 'ತವರಿನ ಸಿರಿ'ಯಲ್ಲಿ ಓವರ್ ಆಕ್ಟ್ ಮಾಡಲು ಅವಕಾಶವಿದ್ದರೂ ಅವರು ಹಾಗೆ ಮಾಡದೇ ಸೂಕ್ಷ್ಮವಾಗಿ ನಟಿಸಿದ್ದಾರೆ. ಒಂದು ಕಡೆ ಗ್ಲಾಮರಸ್ ಕೂಡ ಅಲ್ಲದ, ಇನ್ನೊಂದು ಕಡೆ ಸಾಧಾರಣ ಹುಡುಗಿಯೂ ಅಲ್ಲದ ಡೈಸಿ ಸುಮಾರಾಗಿದ್ದಾಳೆ.

ಕೊನೆ ಮಾತು: ನಿರ್ದೇಶಕ ಸಾಯಿ ಪ್ರಕಾಶ್ ಗೋಳು ಸಿನಿಮಾಗಳನ್ನು ಮಾಡುವುದನ್ನು ನಿಲ್ಲಿಸಿದರೆ ನಮಗೂ ಗೋಳು ಕಡಿಮೆಯಾಗಬಹುದು.

ಕವಿತಾ ಲಂಕೇಶ್

ಈ ಚಿತ್ರ ನೋಡಬೇಕೆ?



ಸೈನೈಡ್: ಅದ್ಭುತ ಚಿತ್ರ

ಸೈನೈಡ್' ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ಪ್ರಯೋಗ. ರಾಜೀವ್‌ಗಾಂಧಿಯನ್ನು ಹತ್ಯೆ ಮಾಡಿದ ನಂತರ ಎಲ್‌ಟಿಟಿಇ ಸಂಘಟನೆಯ ಶಿವರಸನ್, ಶುಭ ಮತ್ತು ಇನ್ನಿತರರು ಆಗಸ್ಟ್ ಒಂದರಿಂದ ಇಪ್ಪತ್ತನೆ ತಾರಿಖಿನವರೆಗೂ ಪ್ರತಿಯೊಂದು ದಿನ ಏನೇನನ್ನು ಮಾಡಿದರು ಎಂದು ದಾಖಲಿಸುವ ಚಿತ್ರ.


ಶ್ರೀಪೆರಂಬದೂರ್‌ನಲ್ಲಿ ರಾಜೀವ್ ಹತ್ಯೆ ಮಾಡಿದ ನಂತರ ಬೆಂಗಳೂರಿಗೆ ಬಂದು ಅವರು ಬಾಡಿಗೆ ಮನೆಗಾಗಿ ಹುಡುಕಿದ್ದು, ರಂಗನಾಥ್ (ರಂಗಾಯಣ ರಘು)ನಂತಹ ಸಾಮಾನ್ಯ ಗೃಹಸ್ಥ ಮತ್ತು ಆತನ ಹೆಂಡತಿ (ತಾರಾ)ಯಿಂದ ಬಲವಂತವಾಗಿ ಸಹಾಯ ಪಡೆದಿದ್ದು ಅದು ಪೊಲೀಸರಿಗೆ ಗೊತ್ತಾಗಿದ್ದು ಎನ್‌ಕೌಂಟರ್ ಆಗುವ ಮುನ್ನವೇ ಅವರೆಲ್ಲ ಸೈನೈಡ್ ಕುಡಿದು ಸಾವನ್ನಪ್ಪಿದ್ದು..... ಎಲ್ಲರಿಗೂ ಈ ವಿಷಯಗಳು ಚೆನ್ನಾಗಿ ಗೊತ್ತಿರುವುದರಿಂದ ಸಿನಿಮಾ ನೋಡುವಾಗ ಅಷ್ಟು ಕುತೂಹಲ ಇರುವುದಿಲ್ಲ.

ಆದರೂ ಈ ಚಿತ್ರ ನಮ್ಮನ್ನು ಯಾಕೆ ಹಿಡಿದು ಕೂರಿಸುತ್ತೆ ಅಂದರೆ ನರೇಶನ್ ಶೈಲಿ ಮತ್ತು ಅದ್ಭುತವಾದ ಛಾಯಾಗ್ರಹಣ. ನಿರ್ದೇಶಕ ರಮೇಶರ ಜೀನಿಯಸ್ ಸ್ಪರ್ಶ ಅಲ್ಲಲ್ಲಿ ಎದ್ದು ಕಾಣುತ್ತದೆ. ಅದರಲ್ಲೂ ತಾರಾರವರ ಪಾತ್ರದ ಮೂಲಕ ಭಯೋತ್ಪಾದಕರ ಗುಂಪಿನಲ್ಲಿ ಅನಿವಾರ್ಯವಾಗಿ ಸೇರಿಕೊಂಡಿರುವ ಸಾಧಾರಣ ಗೃಹಸ್ಥೆಯ ಭಯ, ಆತಂಕಗಳನ್ನು ನಿರ್ದೇಶಕ ಚೆನ್ನಾಗಿಯೇ ತೆರೆದಿಟ್ಟಿದ್ದಾರೆ.

ಆದರೆ ನಿರ್ದೇಶಕ ರಮೇಶ್ ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ಸಾಗುತ್ತಾರೆ. ಎಲ್‌ಟಿಟಿಇಯವರಲ್ಲಿ ಮನುಷ್ಯತ್ವ ಇದೆಯೋ ಇಲ್ಲವೋ, ಅವರ ಹೋರಾಟ ಸರಿಯೋ ಅಲ್ಲವೋ ಎಂಬುದರ ಬಗ್ಗೆ ಚರ್ಚಿಸದೆ ನಿರಾಶೆ ಮೂಡಿಸುತ್ತಾರೆ.

ರಂಗಾಯಣ ರಘು, ತಾರಾ, ರವಿ ಕಾಳೆ, ಅವಿನಾಶ್ ಮತ್ತು ಮಾಳವಿಕಾ ಚೆನ್ನಾಗಿ ನಟಿಸಿದ್ದಾರೆ. ಸಿನಿಮಾ ಒಂದರಲ್ಲಿ ಮೂರೋ, ನಾಲ್ಕೋ ಅಂಶಗಳು ಚೆನ್ನಾಗಿದ್ದರೆ ಸಾಕು, ಅದೇ ನೆಮ್ಮದಿ ಕೊಡುತ್ತೆ. 'ಸೈನೈಡ್'ನಲ್ಲಿ ಒಳ್ಳೆ ನಿರ್ದೇಶನ, ಛಾಯಾಗ್ರಹಣ, ನಟನೆ ಮತ್ತು ಸಂಕಲನ ಇರುವುದರಿಂದ ನೋಡಲೇಬೇಕಾದ ಸಿನಿಮಾ.

ಕನ್ನಡ ಚಿತ್ರಗಳ ಪ್ರೇಕ್ಷಕರು ಒಳ್ಳೆಯ ತಂತ್ರಜ್ಞಾನ ಹೊಂದಿರುವ ಇಂತಹ ಸಿನಿಮಾಗಳನ್ನು ನೋಡಿ ಪ್ರೋತ್ಸಾಹಿಸಿದರೆ ಅವರಿಗೆ ಇನ್ನೂ ಹೆಚ್ಚು ಒಳ್ಳೆ ಸಿನಿಮಾಗಳನ್ನು ಮಾಡುವ ಅವಕಾಶ ಸಿಗುತ್ತದೆ. 'ಸೈನೈಡ್' ಸಿನಿಮಾ ಕನ್ನಡ ಚಿತ್ರರಂಗ ಯಾವ ಹಾಲಿವುಡ್ ಅಥವಾ ಬಾಲಿವುಡ್ ಸಿನಿಮಾಗಿಂತಲೂ ಕಡಿಮೆ ಇಲ್ಲ ಅನ್ನುವುದನ್ನು ತೋರಿಸುತ್ತೆ.



ದೇವೇಗೌಡರಿಗೆ ಕರುಣಾನಿಧಿ ಸಮಾಧಾನ ತಂದರಂತೆ

ತಮ್ಮ 'ನಿಜವಾದ ಮಗ' ಸಮಯಕ್ಕೆ ಸರಿಯಾಗಿ ಊಟ, ನಿದ್ರೆ ಇಲ್ಲದೆ ಸೊರಗುತ್ತಿರುವುದನ್ನು ಕಂಡು ದೇವೇಗೌಡರಿಗೆ ಆಗುತ್ತಿರುವ ಸಂಕಟ ಹೇಳತೀರದು. ಇಂತಹ ಸಂದರ್ಭಗಳಲ್ಲಿ ಎಂತಹವರಿಗೂ ನೋವು ಆಗ ತಕ್ಕದ್ದೇ ಸರಿ. ಆದರೆ ಅದನ್ನ ಇತರರು ತಮ್ಮ ಮನಸ್ಸಿನ್ನಲಿಯೇ ಇಟ್ಟುಕೊಳ್ಳುತ್ತಾರೆ. ಬಹಿರಂಗ ಪಡಿಸುವುದು ಸಭ್ಯತೆ ಅಲ್ಲ ಅಂತ ಭಾವಿಸುತ್ತಾರೆ. ಆದರೆ ನಮ್ಮ ಮಾಜಿ ಪ್ರಧಾನಿಗಳು ಹಾಗಲ್ಲ. ಅವರದ್ದು ತೆರೆದ ಹೃದಯ ಆದುದರಿಂದ ಜನರೆದುರು ತಮ್ಮ ಭಾವನೆಗಳನ್ನೆಲ್ಲ ಬಿಚ್ಚಿಡುತ್ತಾರೆ; ತಮ್ಮ ಮಾನಸಿಕ ತೊಳಲಾಟವನ್ನು ತೋದಿಕೊಳ್ತಾರೆ. ತಮ್ಮ ಮಗ ಮುಖ್ಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಹಾಜರಾಗದುದಕ್ಕೆ ಇತ್ತೀಚೆಗೆ ಕಣ್ಣೀರು ಸುರಿಸಿದ್ದಾರೆ. ಅಳುವ ಗಂಡಸನ್ನೂ ನಗುವ ಹೆಂಗಸನ್ನೂ ನಂಬಬಾರದು ಎಂಬ ಅನುಭವದ ಮಾತನ್ನು ಇವರಿಗೆ ಅನ್ವಯಿಸ ಬೇಕಾಗಿಲ್ಲ ಬಿಡಿ! ಈ ವಿದ್ಯುನ್ಮಾನ ಯುಗದಲ್ಲಿ ಸಮಾರಂಭವನ್ನು ಮನೆಯಲ್ಲೇ ಕುಳಿತು ಟಿವಿಯಲ್ಲಿ ವೀಕ್ಷಿಸಬಹುದಿತ್ತಲ್ಲಾ ಎಂದು ಸಂಶಯಿಸುವವರೂ ಇದ್ದಾರೆ. ನಿರಾಶೆಯ ಮಡುವಿನಲ್ಲಿ ಬಿದ್ದಂತೆ ಮುಖ ಮಾಡಿಕೊಂಡಿದ್ದರೂ ತಮ್ಮ ಪ್ರೀತಿಯ ಮಗ ಅಧಿಕಾರ ಸ್ವೀಕರಿಸುತ್ತಿರುವುದನ್ನು ಟಿವಿಯಲ್ಲಿ ನೋಡಿ, ಮೈಮರೆತು ಚಪ್ಪಾಳೆ ತಟ್ಟುತ್ತಾ ಸಂಭ್ರಮಿಸಿದರು ಎಂದು ಕುಟುಕುವವರೂ ಇದ್ದಾರೆ. ಅಂತಹವರ ಮಾತಿಗೆ ಬೆಲೆ ಕೊಡಬೇಕಾಗಿಲ್ಲ. ಮಾನಸಿಕ ಹಿಂಸೆಯಿಂದ ಸೆಟೆದು ಕೊಂಡಿದ್ದ ನರಗಳನ್ನು ಸಡಿಲ ಮಾಡುವ ಘಟನೆಯೊಂದು ದಕ್ಷಿಣ ಭಾರತದಲ್ಲಿ ಘಟಿಸಿ ದೇವೇಗೌಡರು ಉಸಿರಾಡುವಂತೆ ಮಾಡಿರುವುದು ದೇಶದ ಪುಣ್ಯ. ತಮಿಳುನಾಡಿನಲ್ಲಿ ಕರುಣಾನಿಧಿಯವರ ಸುಪುತ್ರ ಭಾವಿ ಮುಖ್ಯಮಂತ್ರಿ ಸ್ಟಾಲಿನ್‌ರ ಮಂತ್ರಿಗಿರಿಯ ಅರಂಗೇಟ್ರಂ ನಡೆದಿರುವುದು ಗೌಡರಿಗೆ ಆಶಾದಾಯಕ ಘಟನೆ. ವಂಶ ಪಾರಂಪರಿಕ ಆಳ್ವಿಕೆಗೆ ಈ ಗೌಡ ಹುನ್ನಾರ ನಡೆಸಿದ್ದಾನೆ ಎಂಬ ಆಪಾದನೆಯಿಂದ ಈ ಘಟನೆ ಅವರನ್ನು ಬಿಡುಗಡೆ ಮಾಡಿದೆಯಂತೆ!

ನನಗೊಂದು ಸಣ್ಣ ಅನುಮಾನ. ನಾನು, ನನ್ನ ಮಗ ನಮ್ಮನ್ನು ನಂಬಿದ್ದ ಸಮಾಜಕ್ಕೆ ಮೋಸ ಮಾಡಿ ಅಧಿಕಾರ ದಕ್ಕಿಸಿಕೊಂಡೆವು ಎನ್ನಿ. ಹೀಗೇ ಮಾಡಿದ ಮತ್ತೊಬ್ಬರನ್ನು ತೋರಿಸಿ 'ನಾವೆ ಅಲ್ಲ ಮಾಡಿರೋದು, ಅವರೂ ಹಂಗೆ ಮಾಡ್ದಿಲ್ವ' ಎಂದು ಇನ್ನೊಬ್ಬರ ಕಡೆಗೆ ಕೈ ತೋರಿಸಿದರೆ... ಸರ್ಕಾರಿ ನೌಕರ ಲಂಚ ತಿಂದು ಸಿಕ್ಕಿ ಬಿದ್ದಾಗ 'ನಾನೊಬ್ಬನೇ ಅಲ್ಲ ಹೀಗೆ ತಿನ್ನೋದು, ಅವರೂ ತಿನ್ನಲ್ವ' ಅಂದರೆ... 'ನನ್ನ ಮಗ ಒಬ್ಬನೇ ಅಲ್ಲ ರೇಪ್ ಮಾಡಿರೋನು, ಅವನ ಮಗನೂ ಮಾಡಿಲ್ವ' ಅಂದರೆ... ಹೀಗೇ ನಾನು ಮಾಡಿದ ಅಪರಾಧವನ್ನೇ ಇನ್ನೊಬ್ಬನೂ ಮಾಡಿದಾನೆ ಅಂತ ಸಮಾಧಾನಪಟ್ಟುಕೊಂಡರೆ....! ಕಾನೂನು, ಸಂವಿಧಾನ ಎಲ್ಲವನ್ನೂ ಕಂತೆ ಕಟ್ಟಿ ಮೂಲೆಗೆ ಬಿಸಾಕಬೇಕಾಗುತ್ತದೆ ಅಲ್ಲವಾ.

* * * * * * *

ಅಣಕ

ಮೀಸಲಾತಿ ವಿರೋಧಿಸಿ ದೇಶಾದ್ಯಂತ ಪ್ರತಿಭಟನೆ ಎಂಬುದಾಗಿ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ.

ವಿರೋಧಿಸುತ್ತಿರುವವರು ಯಾರು?

ವೈದ್ಯಕೀಯ ವಿದ್ಯಾರ್ಥಿಗಳು, ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳೊಂದಿಗೆ ಖಾಸಗಿ ಕಾಲೇಜಿನ ವಿದ್ಯಾರ್ಥಿಗಳೂ ಸೇರಿದ್ದಾರೆ!

ಖಾಸಗಿ ಕಾಲೇಜಿಗೆ ಅವರು ಸೇರಿದ್ದು ಹೇಗೆ?

ಹಣ ನೀಡಿ! ತಮಗಿರುವ ಸಂಬಂಧ ಬಳಸಿ!

ನನಗಿರುವ ಅನುಮಾನ ಅಂದರೆ ಇದು ಮೀಸಲಾತಿ ಅಲ್ಲವಾ? ಇವರು ಹೇಗೆ ಗುಣಮಟ್ಟದ ವೈದ್ಯರಾಗಲು ಸಾಧ್ಯ ಆಗುತ್ತದೆ?

ಮೀಸಲಾತಿ ಫಲಾನುಭವಿಗಳು





ರಾಜೀವ್‌ಗಾಂಧಿ ಡೂನ್ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದರು. ಅದು ದೇಶದ ಪ್ರತಿಷ್ಠಿತ ಶಾಲೆ ಎಂಬುದೇನೋ ಸರಿ. ಅವರಿಗೆ ಅಲ್ಲಿ ವ್ಯಾಸಂಗ ಮಾಡಲು ಅವಕಾಶ ಸಿಕ್ಕಿದ್ದು ಹೇಗೆ? ಅವರ ಪ್ರತಿಭೆಯಿಂದಲೋ? ಇಂದಿರಾ ಗಾಂಧಿ ಮಗ ಎಂದೋ? ಇದು ಮೀಸಲಾತಿ ಅಲ್ಲವೊ?

ಸ್ವಾತಂತ್ರ್ಯ ಪೂರ್ವದಿಂದಲೂ ಹಣ, ಅಧಿಕಾರ, ವಂಶಗಳ ಪ್ರಭಾವದಿಂದ ವಿದೇಶಗಳಲ್ಲಿನ ಪ್ರತಿಷ್ಠಿತ ಶಾಲೆಗಳಲ್ಲಿ ವ್ಯಾಸಂಗ ಪೂರೈಸಿ ಭಾರತದಲ್ಲಿ ಆಯಕಟ್ಟಿನ ಸ್ಥಾನಗಳನ್ನು ಪಡೆಯುತ್ತಿದ್ದಾರಲ್ಲ, ಇದು ಮೀಸಲಾತಿ ಅಲ್ಲವೊ?

ನೆಹರೂ ವಂಶದವರೇ ಪ್ರಧಾನಿಗಳಾಗುತ್ತಿರುವುದು ಅಥವಾ ಅದರ ಹತ್ತಿರವೇ ಇರುವುದು ಪ್ರತಿಭೆಯಿಂದಲೋ? ರೇವಣ್ಣ ಕುಮಾರಸ್ವಾಮಿ, ಸ್ಟಾಲಿನ್, ದಯಾನಿಧಿ ಮಾರನ್.... ಇಂತಹವರೆಲ್ಲ ತಮ್ಮ ಪ್ರತಿಭೆಯಿಂದಲೇ ಅಧಿಕಾರ ಗ್ರಹಣ ನಡೆಸಿದರೆ? ಇವು ಮೀಸಲಾತಿ ಅಲ್ಲವೊ?

ಇಂತಹವುಗಳನ್ನು ಯಾಕೆ ಯಾರೂ ಪ್ರಶ್ನಿಸುವುದೇ ಇಲ್ಲ?

ಈ ಮೀಸಲಾತಿ ವಿಷಯವನ್ನು ಈಗ ತೆಗೆದದ್ದೇ ಕೇಂದ್ರ ಮಾನವ ಸಂಪನ್ಮೂಲ ಸಚಿವ ಅರ್ಜುನ್‌ಸಿಂಗ್. ಅವರಿಗೆ ಪ್ರಾಮಾಣಿಕವಾಗಿ ಇದರ ಬಗ್ಗೆ ಆಸಕ್ತಿ ಇದೆಯೋ ಎಂಬುದರ ಬಗ್ಗೆಯೇ ಕೆಲವರ ಅನುಮಾನ ಇದೆ. ಯಾಕೆಂದರೆ ಧೂಳು ಹಿಡಿಯುತ್ತಿದ್ದ ಮಂಡಲ್ ಆಯೋಗದ ವರದಿಯನ್ನು ವಿ.ಪಿ. ಸಿಂಗ್ ಅವರು ಜಾರಿಗೆ ತಂದದ್ದು ಬಡಜನತೆಯ ಮೇಲಿನ ಕನಿಕರದಿಂದಲ್ಲ, ಅವರ ಸಂಪುಟದಿಂದ ಉಚ್ಚಾಟನೆಗೊಂಡ ದೇವಿಲಾಲ್ ಅವರ ಪ್ರತಿಭಟನೆಗೆ ಗುರಾಣಿ ಆಗಿ! ಅದು ಹೇಗಾದರೂ ಇರಲಿ, ಅದರಿಂದ ಕೆಲವರಿಗಾದರೂ ಅನುಕೂಲ ಆಗಿದೆ ಎಂಬುದೇ ಸಮಾಧಾನದ ಸಂಗತಿ.

ವಿ.ಪಿ. ಸಿಂಗ್ ಅವರಿಗೆ ದೇವಿಲಾಲ್ ಪ್ರತಿಭಟನೆ ಕಾರಣ ಇತ್ತು. ಅರ್ಜುನ್‌ಸಿಂಗ್ ಯಾಕೆ ಇದನ್ನು ಎತ್ತಿದರು ಅಂದರೆ ಪ್ರಧಾನಿಯನ್ನು ಇಕ್ಕಟ್ಟಿಗೆ ಸಿಕ್ಕಿಸಲು ಅಂತೆ! ಪಾಪ ಅಧಿಕಾರದ ಆಮಿಷ ಅನ್ನೋದು ಕೆಟ್ಟದ್ದು ನೋಡಿ. ಅರ್ಜುನ್‌ಸಿಂಗ್ ಅವರಿಗೆ ಪ್ರಧಾನಿ ಆಗಬೇಕು ಅಂತ ಆಸೆ. ವಯಸ್ಸು ಮೀರುತ್ತಾ ಇದೆ. ಆದರೆ ಈಗ ಆಗಬೇಕು. ದಶಕದ ಹಿಂದೆ ಅವರು ಒಬ್ಬ ಸ್ವಾಮೀಜಿಯನ್ನು ಕಂಡು ತಮ್ಮ ಜೀವಿತದ ಆಶಯವನ್ನು ಅವರ ಮುಂದೆ ತೋಡಿಕೊಂಡಿದ್ದರಂತೆ. ಸೀರೆ ಉಟ್ಟುಕೊಂಡು ಒಂದು ದಿವಸ ಆಶ್ರಮದಲ್ಲಿದ್ದರೆ ಪ್ರಧಾನಿಯಾಗುವುದು ಖಚಿತ ಎಂಬುದಾಗಿ ಸ್ವಾಮೀಜಿ ಭರವಸೆ ನೀಡಿದ್ದರಂತೆ. ಪ್ರಧಾನಿಯಾಗುವ ಆಸೆ ನೋಡಿ, ಹಾಗೆ ಮಾಡಿದರಂತೆ. ಆದರೂ ಪ್ರಧಾನಿಯಾಗಲಿಲ್ಲ, ಎಲ್ಲೋ ಇದ್ದ ಮನಮೋಹನ್ ಸಿಂಗ್ ಪ್ರಧಾನಿ ಆದರು. ಅವರನ್ನು ಉರುಳಿಸಲು ಮೀಸಲಾತಿ ತಂತ್ರ ಅಂತೆ! ಇದಕ್ಕೆ ಪೂರಕವಾಗಿ ಸಮ್ಮಿಶ್ರ ಸರ್ಕಾರದ ವಿಷಯ ಎತ್ತಿದ್ದಾರಂತೆ.

ಕಮ್ಯುನಿಸ್ಟರು ಅಧಿಕಾರದಿಂದ ಹೊರಗಿದ್ದರೂ ಸರ್ಕಾರದ ಒಳ್ಳೆಯ ಕೆಲಸಗಳಿಗೆ ತಾವು ಕಾರಣ ಅಂತ ಹೇಳುತ್ತಿದ್ದಾರೆ. ಜನ ವಿರೋಧಿ ಕೆಲಸ ಅಂತ ಆದರೆ ಅದು ಸರ್ಕಾರ ಮಾಡಿದ ಅಪರಾಧ ಎಂಬುದಾಗಿ ಆಪಾದನೆ ಮಾಡುತ್ತಿದ್ದಾರೆ. ಇದಕ್ಕೆ ಪರಿಹಾರ ಅಂದರೆ ಇನ್ನು ಉಳಿದ ಅವಧಿಯಲ್ಲಿ ಅವರನ್ನೇ ಪ್ರಧಾನಿ ಮಾಡುವುದರಿಂದ ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಲಾಭ ಇದೆ ಎನ್ನುವ ಸೂತ್ರವನ್ನು ಹೊರಬಿಟ್ಟಿದ್ದಾರಂತೆ.

ಹೌದು, ಇದರಿಂದ ಅವರಿಗೇನು ಪ್ರಯೋಜನ? ಅವರು ಪ್ರಧಾನಿ ಹೇಗೆ ಆದಾರು ಅಂದರೆ.... ಕಮ್ಯುನಿಸ್ಟರು ಪ್ರಧಾನಿಯಾಗಲು ಕಾಂಗ್ರೆಸ್ ಒಪ್ಪುವುದಿಲ್ಲ, ಕಾಂಗ್ರೆಸ್ಸಿನಲ್ಲಿ ಸೋನಿಯಾ ಪ್ರಧಾನಿಯಾಗಲು ಬಯಸುವುದಿಲ್ಲ. ಮನಮೋಹನ್ ಸಿಂಗ್ ಮೇಲೆ ಗೂಬೆ ಕೂರಿಸಿ ಆಗಿದೆ. ನಂತರ ಯಾರು? ತಾನೇ ಪ್ರಧಾನಿಯಾಗುವುದು ಖಚಿತ ಅಂತ ಈ ಆಟ ಆಡುತ್ತಿದ್ದಾರಂತೆ! ಈ ಆಟದಿಂದಾದರೂ ಮೀಸಲಾತಿ ಜಾರಿಗೆ ಬರಲಿ.

* * * * * *

ಯಾವುದು ಲಾಭದಾಯಕ ಹುದ್ದೆ?

ಸಂಸತ್ತಿನಲ್ಲಿ ಈ ಕುರಿತು ಕೋಲಾಹಲ.

ಯಾವುದೇ ಆರ್ಥಿಕ ಸವಲತ್ತು ಪಡೆಯದಿದ್ದರೆ ಅದು ಲಾಭದಾಯಕ ಹುದ್ದೆಯೇ?

ಕುರಿ ಕಾಯೋ ತೋಳ ಅಂದರೆ ಕೂಲೀನೆ ಬೇಡ!

ಹಾಗಾದರೆ ಅದು ಅಲ್ಲ.

ಮತ್ತಾವುದು?

ಸಂಸದರು ತಲೆ ಕೆಡಿಸಿಕೊಂಡರು. ಕೆಲವು ಹುದ್ದೆಗಳನ್ನು ಲಾಭದಾಯಕ ಹುದ್ದೆ ವ್ಯಾಪ್ತಿಯಿಂದ ಹೊರಗಿಟ್ಟು ಠರಾವು ಪಾಸು ಮಾಡಿದರು.

ಯಾವು ಈ ಹುದ್ದೆಗಳು?

ಪ್ರಭಾವಿತರು ಅಲಂಕರಿಸಿರುವ ಹುದ್ದೆಗಳು!

ಸೋನಿಯಾ ಗಾಂಧಿ ಹೊಂದಿರುವ ಹುದ್ದೆ-ಲಾಭದಾಯಕ ಅಲ್ಲ!

ಸೋಮನಾಥ ಚಟರ್ಜಿ ಹೊಂದಿರುವ ಹುದ್ದೆ-ಲಾಭದಾಯಕ ಅಲ್ಲ!

ಹೀಗೆ.


ಅಂದರೆ ಏನಾಯಿತು, ಲಾಭದಾಯಕ ಹುದ್ದೆ ನಿರ್ಧಾರ ಹುದ್ದೆಯನ್ನವಲಂಭಿಸಿಲ್ಲ, ಅದನ್ನು ಪಡೆದಿರುವ ವ್ಯಕ್ತಿಯನ್ನು ಅವಲಂಭಿಸಿದೆ!

ಏನು ಸಂಸತ್ತು, ಎಂತಹ ಠರಾವು!

-ಎಚ್.ಎಲ್. ಕೇಶವಮೂರ್ತಿ


'ಸಮಾಜವಾದಿ' ಸೀತಾರಾಮ್‌ಗೆ 'ಸ್ನೇಕ್ ವ್ಯಾಧಿ'!

ಈ ವಾರದ ಸಂಚಿಕೆಯಲ್ಲಿ ಸ್ನೇಕ್ ಸಿಂಡ್ರೋಮ್ ಎಂಬ ರಾ. ಸೋಮನಾಥ್ ಅವರ ವರದಿ ತುಂಬಾ ಮಾರ್ಮಿಕವಾಗಿತ್ತು. ವಿ.ಎಸ್. ನಾಯಕ್ ಎಂಬ ಕೊಳಕು ಬ್ರಾಹ್ಮಣ ಖ್ಯಾತಿವೆತ್ತರ ತಲೆ ಬೋಳಿಸುವ ದುಷ್ಟ ವಿದ್ಯೆಯನ್ನು ಕರಗತ ಮಾಡಿಕೊಂಡಿರುವುದಕ್ಕೆ ಪತ್ರಿಕೆಯ ವರದಿಯೇ ಸಾಕ್ಷಿ. ಕುಕ್ಕೆ ಸುಬ್ರಮಣ್ಯ ಎಂಬ ಜನಿವಾರಿಗಳ ಪುಣ್ಯಕ್ಷೇತ್ರಕ್ಕೆ ಬಾಲಿವುಡ್‌ನ ಮೆರಗು ಹಚ್ಚಿ ಕಂಡವರ ಜೇಬಿಗೆ ಕೈ ಇಟ್ಟು ಕೊಳ್ಳೆ ಹೊಡೆಯುವ ಬದ್ಮಾಶ್ ಬ್ರಾಹ್ಮಣ ವಿ.ಎಸ್. ನಾಯಕ್ ಎಂಬ ಭಂಡನ ಬಣ್ಣ ಬಯಲಿಗೆಳೆದ ಪತ್ರಿಕೆಗೆ ನನ್ನ ವಂದನೆಗಳು.



-ರಮಜಾನ ಕೆ. ಕೊರ್ತಿ, ಬಾದಾಮಿ

ಕಳೆದ ಸಂಚಿಕೆಯಲ್ಲಿನ ಸ್ನೇಕ್ ಸಿಂಡ್ರೋಮ್ ಲೇಖನದಿಂದ ಸಮಾಜವಾದಿ, ಬುದ್ಧಿಜೀವಿ ಟಿ.ಎಸ್. ಸೀತಾರಾಮ್‌ರವರ ಇನ್ನೊಂದು (ನಿಜವಾದ!) ಮುಖದ ಪರಿಚಯ ಮಾಡಿಸಿದ್ದೀರಿ. ಲಂಕೇಶರ ಗರಡಿಯಲ್ಲಿ ಬೆಳೆದು ಅವರ ಶಿಷ್ಯರೆಂದು ಹೇಳಿಕೊಳ್ಳುವ ಇವರು ಇಂತಹ ಸ್ಥಿತಿ ತಲುಪಿದ್ದು ನಿಜಕ್ಕೂ ದುರಂತ. ಹಿಂದೆ ಒಮ್ಮೆ ಎಚ್.ಡಿ. ಕುಮಾರಸ್ವಾಮಿಯವರನ್ನು ಸಂದರ್ಶಿಸುವಾಗ ಅವರು ಪ್ರಮಾಣ ವಚನವನ್ನು ಪಂಚೆಯುಟ್ಟು ಸ್ವೀಕರಿಸಿದ್ದನ್ನೇ ಕ್ರಾಂತಿ ಎಂಬಂತೆ ಹೊಗಳಿದ್ದರು. ಸೀತಾರಾಮ್‌ಗೆ ಯಾಕೆ ಬಂತು ಇಂತಹ ಬುದ್ಧಿ?



ಅಂದಹಾಗೆ, ನಾನು ಸುಮಾರು 15 ವರ್ಷಗಳಿಂದ ಪತ್ರಿಕೆಯಲ್ಲಿ ಕಣ್ಣಾಮುಚ್ಚಾಲೆಯ ಅಂಕಣಕ್ಕೆ ಪ್ರಶ್ನೆಗಳನ್ನು ಕಳುಹಿಸುತ್ತಿದ್ದೇನೆ. ಆದರೆ ಕಳೆದ ಸಂಚಿಕೆಯಲ್ಲಿನ ಪಿ.ಎಸ್. ಶ್ರೀವತ್ಸ, ಬೆಂಗಳೂರುರವರ ಪ್ರಶ್ನೆಗೆ ಕೊಟ್ಟ ಉತ್ತರ ಓದಿ ಬಹಳ ಬೇಸರವೆನಿಸಿತು. ಉತ್ತರಗಳು ಸಭ್ಯತೆಯನ್ನು ಮೀರದಿರಲಿ. ಪ್ರಶ್ನೆಗಳು ಸಭ್ಯತೆಯನ್ನು ಮೀರಿದ್ದರೂ ಉತ್ತರಗಳು ಸಭ್ಯತೆಯನ್ನು ಮೀರಬಾರದಲ್ಲವೆ? ಉತ್ತರಗಳು ಮತ್ತೆ ಮತ್ತೆ ಪ್ರಶ್ನೆಗಳನ್ನು ಕೇಳಲು ಸ್ಫೂರ್ತಿಯಾಗಲಿ. ಈ ಅಂಕಣ ಲಂಕೇಶ್‌ರವರ ಅಚ್ಚುಮೆಚ್ಚಿನ ಅಂಕಣ. ಅವರಿಂದ ಎಂದೂ ಇಂತಹ ಉತ್ತರ ಬಂದಿರಲಿಲ್ಲ. ಮುಂದೆ ಇಂತಹ ಉತ್ತರಗಳು ಬರದಿರಲಿ ಎಂದು ಆಶಿಸುತ್ತೇನೆ.

-ಬಸವರಾಜ್ ಬೆಸ್ತರ್, ಹರಪನಹಳ್ಳಿ

ಹೊಸ ತಲೆ

'ಲಂಕೇಶ್' ವಾರಪತ್ರಿಕೆಯ ಎಲ್ಲಾ ಸಂಚಿಕೆಗಳನ್ನು ಪ್ರಾರಂಭದಿಂದಲೂ ಓದಿರುವವರು ನಾವು. ಗೌರಿ ಲಂಕೇಶ್ ಬರೆಯುವ 'ಕಂಡಹಾಗೆ' ಅಂಕಣ ನನ್ನಂತಹ ಅಸಂಖ್ಯಾತ ತಳ ಸಮುದಾಯದ ವ್ಯಕ್ತಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಹುಟ್ಟುಹಾಕಿದೆ. ಹೈಟೆಕ್ ಜಾಗತೀಕರಣಗಳ ಹುಚ್ಚು ಹೊಳೆಯಲ್ಲಿ ಕೊಚ್ಚಿ ಹೋಗುತ್ತಿರುವ ದೇಸೀ ಸಂಸ್ಕೃತಿಯ ಧೀಶಕ್ತಿಯನ್ನು ರಚನಾತ್ಮಕವಾಗಿ ಬಿಂಬಿಸುವ ದಿಕ್ಕಿನಲ್ಲಿ 'ಲಂಕೇಶ್' ವಾರಪತ್ರಿಕೆ ಕಾರ್ಯನಿರತವಾಗಿರುವುದು ಹೆಮ್ಮೆಯ ವಿಷಯ. ಬದುಕಿನ ಭರವಸೆ ಕಳೆದುಕೊಂಡ ರೈತನ ಮಾತಿನ ಬಗ್ಗೆ ನನ್ನ ಈ ಪತ್ರ.

ಕೆ. ರವಿಕುಮಾರ. ಕೋಲಾರ, ಬೆಂಗಳೂರು

ಉನ್ನತ ಮೌಲ್ಯಗಳ ಅಪ್ಪಟ ಚಿನ್ನ

ಒಂದು ಪತ್ರಿಕೆಯ ಗೆಲುವು ಎಂದರೆ ಸರ್ಕ್ಯುಲೇಶನ್‌ನಲ್ಲಿ ಏರಿಕೆಯಾಗುವುದು, ದಾಖಲೆ ಸ್ಥಾಪಿಸಿ ಮಾರಾಟವಾಗುವುದು ಎಂದರ್ಥವಲ್ಲ.

ಪತ್ರಿಕೆ ಮಾರುಕಟ್ಟೆಗೆ ತಡವಾಗಿ ಬಂದರೆ ಓದುಗರು ನಾಲ್ಕು ಬಾರಿಯಾದರೂ ನೆನೆಯಬೇಕು, ನಿರಾಶರಾಗಬೇಕು. ಪತ್ರಿಕೆಯ ಗೆಲುವೆಂದರೆ ಅದು! ಪತ್ರಿಕೆಯೆಂಬುದು ಜನರ ಮನಸ್ಸನ್ನು ವ್ಯಾಪಕವಾಗಿ ತಲುಪಬೇಕು. ವಿವಿಧ ರಂಗಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು.

ಈ ಅರ್ಥದಲ್ಲಿ 'ಲಂಕೇಶ್' ಕರ್ನಾಟಕದ ಹೆಮ್ಮೆಯ ಪತ್ರಿಕೆಯಾಗಿದೆ. ಶೋಷಿತರ, ದೀನ-ದಲಿತರ, ಅಲ್ಪಸಂಖ್ಯಾತ-ಹಿಂದುಳಿದವರ.. ಹೀಗೆ ಸಮಸ್ತ ಕನ್ನಡ ಜನತೆಯ ಆಶಾಕಿರಣವಾಗಿ ಉನ್ನತ ಮೌಲ್ಯಗಳ ಅಪ್ಪಟ ಚಿನ್ನವಾಗಿದೆ.

ಡಿ.ಬಿ. ಖಾತೇದಾರ, ಬೆಳಗಾವಿ

ಚಿನ್ನಿದಾಂಡು, ಕ್ರಿಕೆಟ್ಟು ಮತ್ತು ಸಿಡುಕಿನ ಮೇಷ್ಟ್ರು!

ನನ್ನ ಅಪ್ಪ ಇಲ್ಲದಿದ್ದಾಗ ನನ್ನನ್ನು ಸ್ಕೂಲಿಗೆ ೆದುಕೊಂಡು ಹೋಗಿ ಬರುತ್ತಿದ್ದವನು ನಮ್ಮ ಡ್ರೈವರ್ ಲ್ಲಪ್ಪ. ನಮ್ಮ ಅಪ್ಪಾಜಿಯವರ ಯೂನಿಟ್‌ನಲ್ಲಿ ಯಲ್ಲಪ್ಪ ಈಗಲೂ ಕೆಲಸ ಮಾಡುತ್ತಿದ್ದಾರೆ. ಅವರಿಗೆ ್ನನ್ನು ಕಂಡರೆ ತುಂಬ, ತುಂಬ ಪ್ರೀತಿ. ಆತ ಸ್ಕೂಲಿಗೆ ಂದಾಗ ತನ್ನ ಸ್ವಂತ ಹಣದಲ್ಲಿ ನನಗೋಸ್ಕರ ಚಾಕ್ ೇಟನ್ನು ತಂದುಕೊಡುತ್ತಿದ್ದ. ನನ್ನ ಗೆಳೆಯರನ್ನು ಟ್ಟು ನಾನು ಒಬ್ಬನೇ ಚಾಕ್‌ಲೇಟ್ ತಿನ್ನೊಲ್ಲ ನ್ನುವುದು ಅವರಿಗೆ ಗೊತ್ತಿದ್ದರಿಂದ ನಾಲ್ಕೈದು ಚಾಕ್ ೇಟುಗಳನ್ನು ತರುತ್ತಿದ್ದರು. ನಾನು ಮತ್ತು ನನ್ನ ಗೆಳೆಯರು ದನ್ನು ಸಮನಾಗಿ ಹಂಚಿಕೊಂಡು ಎಂಜಾಯ್ ಾಡುತ್ತಿದ್ದೆವು. ಯಲ್ಲಪ್ಪ ತನ್ನ ಸ್ವಂತ ಹಣದಲ್ಲಿ ನನಗೆ ಾಕ್‌ಲೇಟ್ ತರುತ್ತಿದ್ದದ್ದು ಅವರು ನನ್ನ ಮೇಲಿಟ್ಟಿದ್ದ ್ರೀತಿಗೆ ಸಾಕ್ಷಿ. ಹೀಗೆ ನಮ್ಮ ಕುಟುಂಬದ ಸದಸ್ಯರು ಾತ್ರವಲ್ಲ ನಮ್ಮಲ್ಲಿ ಕೆಲಸ ಮಾಡುತ್ತಿದ್ದ ಎಲ್ಲರೂ ನ್ನನ್ನು ಪ್ರೀತಿಯಿಂದ ಬೆಳೆಸಿದರು.

ಆಗ ನಮ್ಮ ಆರು ಜನರ ಗ್ಯಾಂಗ್ ಎಲ್ಲ ಕಡೆ ಟ್ಟಿಗೆ ತಿರುಗಾಡುತ್ತಾ, ಆಟವಾಡುತ್ತಾ ಕಾಲಕಳೆಯು ್ತಿದ್ದೆವು. ನನ್ನ ಸ್ನೇಹಿತರೊಂದಿಗೆ ನಾನು ಸಂತೋಷ ಾಗಿದ್ದರೂ ನಮ್ಮ ತಂಡಕ್ಕೆ ಇನ್ನೊಬ್ಬ ಸದಸ್ಯನಿದ್ದರೆ ಷ್ಟು ಚೆನ್ನಾಗಿರುತ್ತಿತ್ತು ಎಂದು ಹಲವೊಮ್ಮೆ ನ್ನಿಸುತ್ತಿತ್ತು. ಅದಕ್ಕೆ ಒಂದು ಕಾರಣವೂ ಇತ್ತು. ದೇನೆಂದರೆ ಆಗ ಎನಿಡ್ ಬ್ಲೈಟನ್ ಎಂಬ ಮಕ್ಕಳ ೇಖಕಿ ಬರೆಯುತ್ತಿದ್ದ 'ಸೀಕ್ರೆಟ್ ಸೆವೆನ್' ಎಂಬ ಪುಸ್ತಕ ರಮಾಲೆ ಸಿಕ್ಕಾಪಟ್ಟೆ ಪಾಪ್ಯುಲರ್ ಆಗಿತ್ತು. ಹೀಗಾಗಿ ನ್ನೊಬ್ಬ ಗೆಳೆಯ ನಮಗೆ ಸಿಕ್ಕಿದ್ದರೆ ನಾವು ಕೂಡ ೀಕ್ರೆಟ್ ಸೆವೆನ್ ಅಂತ ಹೇಳಿಕೊಂಡು ತಿರುಗಾಡ ಹುದಿತ್ತು ಎಂದು ಅನ್ನಿಸುತ್ತಿತ್ತು.

But unfortun ately we are not seven, we were six, that's all.

ನಾನು ಕ್ಲಾಸಿನಲ್ಲಿ ಮಾಡು ್ತಿದ್ದ ತುಂಟಾಟ, ಗಲಾಟೆಯನ್ನು ಮನಿಸುತ್ತಿದ್ದ ಪ್ರಿನ್ಸಿಪಾಲ್ ನನಗೆ ಅನೇಕ ಬಾರಿ ಎಚ್ಚರಿಕೆ ನೀಡು ್ತಿದ್ದರು. "ನಿನ್ನ ಜಗಳ ಜಾಸ್ತಿ ಾಗಿದೆ, ನೀನು ಒಳ್ಳೆ ಹುಡುಗ ಾಗಿ ಬೆಳೆಯಬೇಕು" ಎಂದು ಾರ್ನಿಂಗ್ ಕಂ ಉಪದೇಶವನ್ನು ನನಗೆ ಆಗಾಗ ೀಡುತ್ತಿದ್ದರು.

ಕೊನೆಗೊಂದು ದಿನ ನಮ್ಮ ತರಗತಿಯಲ್ಲಿ ಹೆವಿ ಲಾಟೆಯಾಯಿತು. ಅದು ಯಾವ ಕಾರಣಕ್ಕಾಯಿತು? ಾನು ಯಾರೊಂದಿಗೆ ಗಲಾಟೆ ಮಾಡಿದೆ? ಅದರಲ್ಲಿ ನೇನು ಯಡವಟ್ಟಾಯಿತು? ಇದ್ಯಾವುದೂ ನನಗೆ ಂದಿಷ್ಟೂ ನೆನಪಿಲ್ಲ, ಆದರೆ ಗಲಾಟೆಯಾಗಿದ್ದು ನಿಜ. ೊನೆಗೆ ಆ ಕಾರಣಕ್ಕಾಗಿ ನಾನು ಆ ಸ್ಕೂಲನ್ನು ಬಿಟ್ಟು ೇರೆ ಸ್ಕೂಲಿಗೆ ಹೋಗಬೇಕಾಯಿತು.

ನನ್ನ ಆತ್ಮೀಯ ಐದೂ ಜನ ಸ್ನೇಹಿತರಿಗೆ ವಿದಾಯ ೇಳಿ ಬೇರೆ ಸ್ಕೂಲಿಗೆ ಹೋದ ಆರಂಭದಲ್ಲಿ ನನಗೆ ಸೂ ಅನ್ನಿಸಲಿಲ್ಲ, ಆದರೆ ಹಲವು ದಿನಗಳ ನಂತರ ನ್ನನ್ನು ಒಂಟಿತನ ಕಾಡಲಾರಂಭಿಸಿತು. ಏಕೆಂದರೆ ೊಸ ಸ್ಕೂಲಿನಲ್ಲಿ ನನಗೆ ಪರಿಚಯ ಇದ್ದ ಹುಡುಗ- ುಡುಗಿಯರು ಯಾರೂ ಇರಲೇ ಇಲ್ಲ, ಮೂಲತಃ ಂಬ ಜನ ಗೆಳೆಯರನ್ನು ಇಷ್ಟಪಡುತ್ತಿದ್ದ ನನ್ನ ಸುತ್ತ ಎಲ್ಲ ಹೊಸಬರೇ ಕಾಣಿಸುತ್ತಿದ್ದರು. ಗೆಳೆಯರ ಮಧ್ಯೆ ಕಾಲ ಕಳೆಯುತ್ತಿದ್ದ ನಾನು ಇಲ್ಲಿ ಬಂದ ನಂತರ ಏಕಾಂಗಿಯಾಗಿದ್ದೆ.


> ನಾನು ಎಂದೂ ಒಂದೇ ಆಟಕ್ಕೆ ಅಂಟಿಕೊಂಡು ಇರುತ್ತಿರಲಿಲ್ಲ. ಗಿಲ್ಲಿಯಿಂದ ಆಟ ಶುರುಮಾಡಿ ಸ್ವಲ್ಪ ಹೊತ್ತಿಗೆ ಬುಗುರಿಗೆ ಶಿಫ್ಟ್ ಆಗುತ್ತಿದ್ದೆ. ಬುಗುರಿಯಿಂದ ಬೋರಾಗುವ ಮೊದಲೇ ಚಿನ್ನಿ ದಾಂಡು ಆಡಲು ರಸ್ತೆಗಿಳಿಯುತ್ತಿದ್ದೆ. ಆ ಆಟಗಳಲ್ಲಿ ಸಿಗುತ್ತಿದ್ದ ಮಜಾ ಮುಂದೆ ಬೇರೆ ಯಾವ ಆಟದಲ್ಲೂ ನನಗೆ ಸಿಗಲೇ ಇಲ್ಲ.



ನಾನು ನಾಲ್ಕನೇ ತರಗತಿ ಮುಗಿಸಿ ವೇಲಾಂಕಣಿ ಯಲ್ಲಿರುವ ಶಾಲೆಗೆ ಸೇರಿಕೊಂಡ ನಂತರ ನನ್ನ ಲೈಫ್ ಸ್ಟೈಲ್ ಸ್ವಲ್ಪ ಬದಲಾಯಿತು. ಆರಂಭದಲ್ಲಿ ಗೆಳೆಯರಿಲ್ಲ ಎಂಬ ಕೊರಗಿದ್ದರೂ ಸ್ವಲ್ಪ ಸಮಯದಲ್ಲೇ ಅನೇಕ ಗೆಳೆಯ-ಗೆಳತಿಯರನ್ನು ಪಡೆದು ಆ ಸಮಸ್ಯೆಯನ್ನು ನಿವಾರಿಸಿಕೊಂಡೆ. ನನ್ನ ಐದು ಗೆಳೆಯರಿಂದ ಸಿಗುತ್ತಿದ್ದ ಪ್ರೀತಿ ಹೊಸ ಗೆಳಯರಿಂದ ಸಿಗ ದಿದ್ದರೂ ನನ್ನದೇ ಆದ ಒಂದು ಹೊಸ ಲೋಕ ಸೃಷ್ಟಿಯಾಯಿತು. ಆದರೆ ನನ್ನ ಹಳೆಯ ಗೆಳೆಯರನ್ನು ಮತ್ತೆ ಭೇಟಿಯಾಗಲಿಲ್ಲವಲ್ಲ, ಅವರು ಕೂಡ ನನ್ನನ್ನು ಭೇಟಿಯಾಗಲು ಬರಲಿಲ್ಲವಲ್ಲ ಎಂಬ ದುಃಖ ಇಂದಿಗೂ ಇದೆ.

ನಿರೂಪಣೆ: ಸದಾಶಿವ ಶೆಣೈ

4



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಆಗಲೂ ಕೂಡ ಹಿಂದಿನಂತೆ ಕುಟುಂಬದ ಸದಸ್ಯರು ತೋರಿಸುವ ಪ್ರೀತಿಗಿಂತ ಗೆಳೆಯರ ಒಡನಾಟದಲ್ಲಿ ನಾನು ಅದ್ಭುತವಾದ ಸವಿಯನ್ನು ಕಾಣುತ್ತಿದ್ದೆ. ಮನೆಯವರಿಂದ ತಪ್ಪಿಸಿಕೊಂಡು ಹೊರಗಡೆ ಗೆಳೆಯರ ಜೊತೆ ಆಡುವುದೆಂದರೆ ನನಗೆ ಪಂಚ ಪ್ರಾಣ. ನಾನು ಆ ದಿನಗಳಲ್ಲಿ ಗಿಲ್ಲಿ, ಚಿನ್ನಿದಾಂಡು, ಗೋಲಿ, ಬುಗುರಿ... ಹೀಗೆ ಹಲವಾರು ಆಟಗಳನ್ನು ಆಡುತ್ತಾ ಮೈ ಮರೆಯುತ್ತಿದ್ದೆ.

ಮೊದಲೇ ಹೇಳಿದಂತೆ ನನಗೆ ಕ್ರೀಡೆಯಲ್ಲಿ ಸಿಕ್ಕಾಪಟ್ಟೆ ಆಸಕ್ತಿಯಿತ್ತು. ಕ್ರೀಡೆ ಎಂದರೆ ಬರೀ ಕ್ರಿಕೆಟ್ ಅಲ್ಲ, ಕ್ರಿಕೆಟ್‌ನಿಂದ ಹಿಡಿದು ಎಲ್ಲ ಆಟಗಳನ್ನು ಆಡುತ್ತಿದ್ದೆ. ಅಷ್ಟೇ ಅಲ್ಲ....ನಾನು ಎಂದೂ ಒಂದೇ ಆಟಕ್ಕೆ ಅಂಟಿಕೊಂಡು ಇರುತ್ತಿರಲಿಲ್ಲ. ಗಿಲ್ಲಿಯಿಂದ ಆಟ ಶುರುಮಾಡಿ ಸ್ವಲ್ಪ ಹೊತ್ತಿಗೆ ಬುಗುರಿಗೆ ಶಿಫ್ಟ್ ಆಗುತ್ತಿದ್ದೆ. ಬುಗುರಿಯಿಂದ ಬೋರಾಗುವ ಮೊದಲೇ ಚಿನ್ನಿ ದಾಂಡು ಆಡಲು ರಸ್ತೆಗಿಳಿಯುತ್ತಿದ್ದೆ. ಆ ಆಟಗಳಲ್ಲಿ ಸಿಗುತ್ತಿದ್ದ ಮಜಾ ಮುಂದೆ ಬೇರೆ ಯಾವ ಆಟದಲ್ಲೂ ನನಗೆ ಸಿಗಲೇ ಇಲ್ಲ.

ಆ ಸಂದರ್ಭದಲ್ಲಿ ನನ್ನನ್ನು ಯಾರೂ ರಾಜ್ ಕುಮಾರ್ ಅವರ ಮಗ ಎಂದು ವಿಶೇಷವಾಗಿ ನೋಡು ತ್ತಿರಲಿಲ್ಲ. ನಮ್ಮ ಮನೆಯವರೂ ಅಷ್ಟೇ, ನಾನು ಬೀದಿ ಮಕ್ಕಳ ಜೊತೆಯಾಗಲೀ ಅಥವಾ ಶಾಲೆಯ ಗೆಳೆಯರ ಜೊತೆಯಾಗಲೀ ಆಡಬಾರದೆಂದು ಎಂದೂ ನಿರ್ಬಂಧ ಹೇರಿದವರೇ ಅಲ್ಲ. ಹೀಗಾಗಿ ನನ್ನನ್ನು ಯಾರೂ, ಯಾವ ಹಂತದಲ್ಲೂ ಸಿನಿಮಾ ಸ್ಟಾರ್ ಮಗ ಎಂದು ಪರಿಗಣಿಸಲೇ ಇಲ್ಲ. ಹೀಗಾಗಿ ಎಲ್ಲ ಮಕ್ಕಳಂತೆ ಅಥವಾ ಜನ ಸಾಮಾನ್ಯರಂತೆ ನಾನು ಬಾಲ್ಯದಲ್ಲಿ ರಸ್ತೆ ಬದಿಯಲ್ಲಿ ಗಿಲ್ಲಿ ಮತ್ತು ಚಿನ್ನಿ ದಾಂಡು ಆಟವಾಡುತ್ತಾ ಬೆಳೆದೆ.

ಈ ಹಂತದಲ್ಲಿ ನನ್ನ ಓದಿಗಿಂತ ಆಟೋಟಗಳೇ ಜಾಸ್ತಿಯಾಯಿತು ಎಂದು ನಮ್ಮ ಮನೆಯವರೆಲ್ಲ ತೀರ್ಮಾನಿಸಿ ನನ್ನನ್ನು ಟ್ಯೂಷನ್‌ಗೆ ಕಳಿಸಬೇಕೆಂದು ನಿರ್ಧರಿಸಿದರು. ನಮ್ಮ ಮನೆಯ ಪಕ್ಕದಲ್ಲೇ ಇದ್ದ ನಾರಾಯಣ ಮೇಷ್ಟ್ರ ಬಳಿ ಟ್ಯೂಷನ್‌ಗೆ ನನ್ನನ್ನು ಮತ್ತು ನನ್ನ ಕಸಿನ್ ಗೀತಾಳನ್ನು ಕಳುಹಿಸಲಾರಂಭಿಸಿದರು. ಗೀತಾ ನನಗಿಂತ ಸ್ವಲ್ಪ ದೊಡ್ಡವಳಾಗಿದ್ದರಿಂದ ಒಂದು ರೀತಿಯಲ್ಲಿ ಅಕ್ಕನ ಥರ ಇದ್ದಳು.

ನಾರಾಯಣ ಮೇಷ್ಟ್ರು ಎಷ್ಟು ಶಿಸ್ತಿನ ಮನುಷ್ಯ ಎಂದರೆ ಅವರನ್ನು ಕಂಡರೆ ನಮಗೆಲ್ಲಾ ಭಯವಾಗುತ್ತಿತ್ತು. **I was naughty but I was not arrogant** ಎಂದು ಎಲ್ಲರೂ ಹೇಳುತ್ತಿದ್ದರು. ನಾರಾಯಣ ಮೇಷ್ಟ್ರು ಮುಂದೆಯೂ ನನ್ನ ತುಂಟತನ ಮುಂದುವರೆದಿತ್ತು. ಆದರೆ ನಾನು ಕ್ಲಾಸಿನಲ್ಲಿ ತಪ್ಪು ಮಾಡಿದರೆ ರಾಜ್‌ಕುಮಾರ್ ಮಗ ಎಂದು ನನಗೇನೂ ಅವರು ರಿಯಾಯ್ತಿ ತೋರಿಸುತ್ತಿರಲಿಲ್ಲ. ಅನೇಕ ಬಾರಿ ಅವರು ನನಗೆ ಚೆನ್ನಾಗಿ ಹೊಡೆದಿದ್ದರು. ಅವರು ಸ್ಕೇಲಿನಿಂದ ನನ್ನ ಕೈ ಮೇಲೆ ಹೊಡೆದಿದ್ದಕ್ಕೆ ಲೆಕ್ಕವೇ ಇಲ್ಲ. ನಾನು ಆಗೆಲ್ಲ ಅಳುತ್ತಿದ್ದೆ. ಆದರೂ ಅವರಿಗೆ ನನ್ನ ಮೇಲೆ ಒಂದಿಷ್ಟೂ ಕನಿಕರವಿರುತ್ತಿರಲಿಲ್ಲ. ಅವರು ಯಾವಾಗಲೂ ನನಗೆ ಓದು, ಓದು ಎಂದು ಸತಾಯಿಸುತ್ತಿದ್ದರು.

ಅವರು ನನಗೆ ಹೊಡೆಯುತ್ತಿದ್ದುದು ಅಪ್ಪಾಜಿಗೆ ಮಾತ್ರ ಗೊತ್ತಾಗುತ್ತಿರಲಿಲ್ಲ. ಅಪ್ಪಾಜಿಗೆ ಗೊತ್ತಾಗಿದ್ದರೆ ಅವರು ಬೇಜಾರು ಮಾಡಿಕೊಳ್ಳುತ್ತಿದ್ದರು. ನನಗೆ ಮಾತ್ರವಲ್ಲ ನನ್ನ ಕಸಿನ್‌ಗಳಿಗೆ ಕೂಡ "ಎಂದೂ ಯಾರಿಗೂ ಹೊಡೆಯಬಾರದು" ಎಂದು ಅಪ್ಪಾಜಿ ಹೇಳುತ್ತಿದ್ದರು. ಆದ್ದರಿಂದ ಅವರಿಗೆ ಈ ವಿಷಯವನ್ನು ಯಾರೂ ಹೇಳುತ್ತಿರಲಿಲ್ಲ.

ನಾನು ಮತ್ತು ಗೀತಾ ನಾರಾಯಣ ಮೇಷ್ಟ್ರು ಮನೆಗೆ ಹೊಗುತ್ತಿದ್ದಾಗ "ಈ ನಾರಾಯಣ ಮೇಷ್ಟ್ರು ಯಾವಾಗ ಸಾಯ್ತಾರಪ್ಪ? ಅವರು ಬೇಗ ಸಾಯ್ಲಿ" ಎಂದು ನಾನು ಶಾಪ ಹಾಕುತ್ತಿದ್ದೆ. ಗೀತಾಗೂ ನಾರಾಯಣ ಮೇಷ್ಟ್ರು ಸಾಕಷ್ಟು ಬಾರಿ ಹೊಡೆದಿದ್ದರೂ ಆಕೆ "ಹಾಗೆಲ್ಲ ಮಾತನಾಡಬಾರದು. ಮೇಷ್ಟ್ರಿಗೆ ಹಾಗೆಲ್ಲ ಶಾಪ ಹಾಕಬಾರದು" ಎಂದು ತಾಕೀತು ಮಾಡುತ್ತಿದ್ದಳು. "ಮೇಷ್ಟ್ರಿಗೆ ನಾವು ಶಾಪ ಹಾಕಿದ್ರೆ ದೇವ್ರು ನಮ್ಗೆ ಶಾಪ ಕೊಡ್ತಾರೆ, ನಮ್ಗೆ ಕಷ್ಟಗಳು ಬರುತ್ತೆ" ಎಂದು ಆಕೆ ಹೇಳುತ್ತಿದ್ದದ್ದು ನನಗೆ ಈಗಲೂ ನೆನಪಿದೆ.

ಇತ್ತೀಚೆಗೆ, ಮೂರು ವರ್ಷದ ಹಿಂದೆ ನಾರಾಯಣ ಮೇಷ್ಟ್ರು ನಿಧನಹೊಂದಿದರು. ನಾನು ಸಿನಿಮಾ ನಟನಾದ ನಂತರ ಕೂಡ ಅವರ ಹೆಸರು ಕೇಳಿದಾಕ್ಷಣ ಒಂದು ಕ್ಷಣ ಸಿನಿಮಾ ಹೀರೋ ಎಂಬುದನ್ನು ಮರೆತು ತಟ್ಟನೇ ಎದ್ದುನಿಲ್ಲುತ್ತಿದ್ದೆ. ನಾನು ಅವರಿಗೆ ಕೊಡುತ್ತಿದ್ದ ಗೌರವ ಅದು.

ಅವರು ನಿಧನಹೊಂದಿದ ಸುದ್ದಿ ಕೇಳಿದಾಗ ನಾನು ಯಾವುದೋ ಶೂಟಿಂಗ್‌ನಲ್ಲಿ ಡ್ಯಾನ್ಸ್ ಮಾಡುತ್ತಿದ್ದೆ. ಆ ಸುದ್ದಿ ಕೇಳಿದಾಕ್ಷಣ ನನ್ನ ಕಣ್ಣು ಮಂಜಾಯಿತು. ನಾನು ನಾಯಕಿಯೊಂದಿಗೆ ಡ್ಯಾನ್ಸ್ ಮಾಡುತ್ತಿದ್ದಾಗ ನನ್ನ ಕಣ್ಣಿನಲ್ಲಿ ನೀರು ಬಂದದ್ದನ್ನು ನೋಡಿ ನಿರ್ದೇಶಕರಿಗೆ ಆಶ್ಚರ್ಯವಾಯಿತು. "ಏನಾಯಿತು?" ಎಂದು ಅವರು ಕೇಳಿದರು.

ನನ್ನ ನಾರಾಯಣ ಮೇಷ್ಟ್ರ ಬಗ್ಗೆ ಒಂದು ವಾಕ್ಯದಲ್ಲಿ ಅವರಿಗೆ ಹೇಗೆ ಹೇಳಲು ಸಾಧ್ಯ? "ಏನೂ ಇಲ್ಲ" ಎಂದು ಡ್ಯಾನ್ಸ್ ಮುಂದುವರಿಸಿದೆ. ಆದರೆ ಮನಸ್ಸಿನಲ್ಲಿ ಮಾತ್ರ ಮೇಷ್ಟ್ರ ನೆನಪು ಕಾಡುತ್ತಲೇ ಇತ್ತು......

(ಮುಂದಿನ ವಾರಕ್ಕೆ....)



ಮಾತಾಡೋ ಮಲ್ಲಿಗೆಯೀಗ ಮೂಕಿ!

ಕಳೆದ ಬಾರಿ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಮಾತಾಡ್ ಮಾತಾಡ್ ಮಲ್ಲಿಗೆ' ಚಿತ್ರ ಮುಂದೂಡಲ್ಪಟ್ಟ ಬಗ್ಗೆ ಬರೆದಿದ್ದೆವು. ಇದೀಗ ಬಂದ ಸುದ್ದಿ ಏನೆಂದರೆ ಈ ಚಿತ್ರ ಪರ್ಮನೆಂಟಾಗಿ ಮುಂದೂಡಲ್ಪಟ್ಟಿದೆಯಂತೆ. ಈ ಚಿತ್ರಕ್ಕೆ ನೀಡಿದ ಕಾಲ್‌ಶೀಟ್‌ಅನ್ನು ವಿಷ್ಣು ಬೇರೆಯವರಿಗೆ ನೀಡಿದ್ದಾರೆ ಎಂಬ ಸುದ್ದಿ ಎಲ್ಲೆಡೆ ಹಬ್ಬಿದೆ. 'ಮಾತಾಡ್ ಮಾತಾಡ್ ಮಲ್ಲಿಗೆ' ಮಾತಾಡದೇ ಸುಮ್ಮನಾಗಿದೆ.



ಸದಾಳಿಗೆ 'ಮೋಹಿನಿ' ಕಾಟ!

'ಮೋಹಿನಿ' ಚಿತ್ರಕ್ಕೆ ಆರಂಭದಿಂದಲೂ ಮೋಹಿನಿ ಕೊಟ್ಟ ಕಾಟದ ಸುದ್ದಿಯನ್ನು ನೀವು ಓದಿರಬಹುದು, ಇದೀಗ ಈ ಚಿತ್ರ ಸಂಪೂರ್ಣವಾಗಿದ್ದು, ಇದರ ನಾಯಕಿ ಸದಾ ಮತ್ತೆ ಮದ್ರಾಸಿಗೆ ಹಿಂದಿರುಗಿದ್ದಾಳೆ.

ಹಾಗೆ ಹೋದ ಸದಾ "ನಾನು ಇನ್ನೊಮ್ಮೆ ಕನ್ನಡದಲ್ಲಿ ನಟಿಸಬೇಕಾದರೆ ತುಂಬಾ ಆಲೋಚನೆ ಮಾಡಬೇಕಾಗಿದೆ. ಅಂತಹ ಕೆಟ್ಟ ಅನುಭವ ನನಗೆ 'ಮೋಹಿನಿ' ಚಿತ್ರದ ಸೆಟ್‌ನಲ್ಲಿ ಆಗಿದೆ" ಎಂದು ಗೆಳೆಯರಲ್ಲಿ ಹೇಳಿದ್ದಾಳಂತೆ. ಈ ಮೋಹಿನಿಗೆ ಯಾವ ರೀತಿಯಲ್ಲಿ ತೊಂದರೆ ಯಾಗಿದೆ ಎಂದು ನಿರ್ಮಾಪಕ ಮೋಹನ್ ಈಗ ಹೇಳಬೇಕಾಗಿದೆ.



ಎಸ್.ಎಂ.ಎಸ್. ಮಿಸ್ ಆಯ್ತು

ಡಾ. ರಾಜ್ ನಿಧನದ ನಂತರ ಮೊದಲು ಸೆಟ್ಟೇರಿದ್ದು 'ಎಸ್ಸೆಮ್ಮೆಸ್ 6216'. ಈಗ ಆ ಚಿತ್ರ ಅರ್ಧಕ್ಕೇ ನಿಂತುಬಿಟ್ಟಿದೆ. ಕಾರಣ ಇಷ್ಟೆ. ಚಿತ್ರದ ನಾಯಕಿ 'ಮಿಸ್ ಕ್ಯಾಲಿಫೋರ್ನಿಯಾ' ಖ್ಯಾತಿಯ ಜಾನು ಮುಹೂರ್ತದ ಹಿಂದಿನ ದಿನ ಬೆಂಗಳೂರಿಗೆ ಅಮೆರಿಕಾದಿಂದ ಬಂದಿದ್ದಳು ನಿಜ. ಆದರೆ ಅಂದೇ ಆಕೆ ಜಾರಿ ಬಿದ್ದು ಕಾಲು ಮುರಿದುಕೊಂಡಳು. ಈಕೆ ನಿರ್ಮಾಪಕಿ ಕೂಡ ಹೌದು! ಈಗ ಆಕೆ ಕಾಲು ರಿಪೇರಿ ಮಾಡಿಸಿಕೊಳ್ಳಲು ಅಮೆರಿಕಕ್ಕೆ ಮತ್ತೆ ಹೊರಟುನಿಂತಿದ್ದಾಳೆ. ಹೀಗಾಗಿ ಚಿತ್ರೀಕರಣ ಸದ್ಯಕ್ಕೆ ಸ್ಟಾಪ್. ಚಿತ್ರದ ನಿರ್ದೇಶಕ ಸಂದೀಪ್ ಮಲಾನಿ "ಬೇಗ ಗುಣಮುಖವಾಗಲಿ" ಎಂಬ ಎಸ್ಸೆಮ್ಮೆಸ್ ಕಳಿಸುತ್ತಾ ಕೂಡಬೇಕಷ್ಟೆ.





ಫಾರ್ 'A' ಚೇಂಜ್!

13 ವರ್ಷದ ಹಿಂದೆ 'ಮಮ್ಮೂ' ಇದನ್ನು ಮಾಡಿದ್ದಳು. 'ಸ್ಟಾರ್‌ಡಸ್ಟ್'ನ ಕವರ್‌ಗೆ ಟಾಪ್‌ಲೆಸ್ ಪೋಸ್ ಕೊಟ್ಟು, ಹುಡುಗರ ತಲೆದಿಂಬು ಕೆಳಕ್ಕೆಲ್ಲ 'ಸ್ಟಾರ್‌ಡಸ್ಟ್' ತಲುಪುವಂತೆ ಮಾಡಿದ್ದಳು ಆವತ್ತಿನ ಮಮತಾ ಕುಲಕರ್ಣಿ ಎಂಬ ಸ್ಕಿನ್ ಬಾಂಬ್! ಆವತ್ತದು ಹಿರಿಯರಲ್ಲಿ ಶಾಕ್ ಮೂಡಿಸಿ 'ಮಮ್ಮೂ' ಕೋರ್ಟ್ ಮೆಟ್ಟಿಲು ಏರಬೇಕಾಗಿತ್ತು, ಜಡ್ಜ್‌ಗಳಿಗೆ ಶಾಕ್ ನೀಡಲು 'ಮಮ್ಮೂ' ಕೋರ್ಟಿಗೆ ಬುರ್ಖಾ ತೊಟ್ಟು ಬಂದು, ಕೋರ್ಟ್‌ನಿಂದ ಉಗಿಸಿಕೊಂಡಿದ್ದಳು. ಇನ್ನೊಮ್ಮೆ ಬುರ್ಖಾ ಧರಿಸಿ ಬಂದರೆ ಮಮತಾಳನ್ನು ಸುಟ್ಟುಬಿಡುವುದಾಗಿ ಕೆಲ ಮುಸ್ಲಿಂ ಸಂಘಟನೆಗಳು ಹಾರಾಡಿದ್ದವು.

ಈಗ 2006: ಬಾಲಿವುಡ್‌ನ ಅಧಿಕೃತ ಸೆಕ್ಸ್ ಲಾಂಛನ ಮಲ್ಲಿಕಾ ಶೆರಾವತ್ ಈಗ 'ಸಿನಿ ಬ್ಲಿಟ್ಜ್'ನ ಕವರ್‌ಗೆ ಪೋಸ್ ನೀಡಿದ್ದಾಳೆ. ತನ್ನ ಅಮೂಲ್ಯ ಅಂಗಾಂಗಗಳಿಗೆ ಒಂದು ತೆಳು ಬೆಡ್‌ಶೀಟನ್ನಷ್ಟೇ ಅಡ್ಡ ಹಿಡಿದು ಗರಂ ಪೋಸ್ ಕೊಟ್ಟದೆ ಮಾರ್ವೆಲಸ್ ಮಲ್ಲಿ! ಒಳಗಡೆ ಇನ್ನೂ ಹೆಚ್ಚು 'ಬೋಲ್ಡ್' ಚಿತ್ರಗಳೂ ಉಂಟು.

ಬಹಳಷ್ಟು ಓದುಗರು ಕೇವಲ ಟಾಪ್ (ಕವರ್) ನೋಡಿ ಸುಮ್ಮನಾಗಿಬಿಟ್ಟರೇನೋ? 'ಮಮ್ಮೂ' ವಿರುದ್ಧ ನಡೆದಂತೆ 'ಮಲ್ಲಿ' ವಿರುದ್ಧ ಜನಾಕ್ರೋಶ ವ್ಯಕ್ತವಾಗಿಲ್ಲ... ಜನ ನಗ್ನಸತ್ಯ ತಿಳಿಯುವಷ್ಟು 'ಮೇಲ್ಮಟ್ಟ' ತಲುಪಿದ್ದಾರೆ ಎನ್ನೋಣವೆ?

ಜಸ್ಟ್ ಫಾರ್ 'A' ಚೇಂಜ್.... ಇಲ್ಲಿ 'ಮಲ್ಲಿ' ಸೀರೆಯಲ್ಲಿರುವ ಸ್ಟಿಲ್ ನೀಡುತ್ತಿದ್ದೇವೆ.

ಇಳಕಲ್ ಸೀರೆ ಉಟ್ಕೊಂಡು, ಕಣ್ಣಲ್ಲಿ ನಶೆ ತುಂಬ್ಕೊಂಡು ಎಂತ ಈ 'saree' ಚೆಲುವೆ ಪಡ್ಡೆಗಳಿಗೆ ಇಷ್ಟವಿಲ್ಲವೇನೋ? sorry ಫ್ರೆಂಡ್ಸ್...

ಇನ್ನೊಂದು ಸ್ಟಿಲ್‌ನಲ್ಲಿ ಸಾಂಪ್ರದಾಯಿಕ ಉಡುಗೆಯಲ್ಲಿ ಮೂಗುತಿ ತೊಟ್ಟು ನಕ್ಕವೈ ನಿಮ್ಮ ಮಲ್ಲಿ!



ಸಿ.ಎಂ. : ಎರಡು ಹೆಜ್ಜೆಗಳು

ನವೆಂಬರ್ 1.

ಈ ಬಾರಿಯ ರಾಜ್ಯೋತ್ಸವಕ್ಕೆ ವಿಶೇಷ ಮೆರುಗು. ಕರ್ನಾಟಕ ಏಕೀಕರಣ ಸುವರ್ಣ ಸಂಭ್ರಮದ ಹೊನ್ನಿನ ದಿನ ನವೆಂಬರ್ 1. ಆದ್ದರಿಂದ ಅದನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಿದ್ದಾರೆ ಮುಖ್ಯಮಂತ್ರಿ ಕುಮಾರಸ್ವಾಮಿ.

ಅಂದೇ ಅವರ ಮಾಲೀಕತ್ವದ 'ಕನ್ನಡ ಕಸ್ತೂರಿ' ಚಾನೆಲ್‌ಅನ್ನು ಅವರು ಉದ್ಘಾಟಿಸಲಿದ್ದಾರೆ. ಇದಕ್ಕಿಂತ ಮುಖ್ಯವಾಗಿ ಅವರ ಬಹುದಿನಗಳ ಆಸೆಯಾದ 'ಹೆಜ್ಜೆಗಳು' ಚಿತ್ರದ ಮುಹೂರ್ತವನ್ನೂ ನಡೆಸಲಿದ್ದಾರೆ.

ವ್ಯಾಸರಾಯ ಬಲ್ಲಾಳರ ಕಾದಂಬರಿ ಆಧಾರಿತ 'ಹೆಜ್ಜೆಗಳು' ಚಿತ್ರದ ಚಿತ್ರಕತೆಯನ್ನು ಎರಡು ವರ್ಷಗಳ ಹಿಂದೆಯೇ ನಿರ್ದೇಶಕ ನಾಗಾಭರಣ ಅವರು ಮುಗಿಸಿದ್ದರು. ಆದರೆ ಈಗ ಅವರ ಸ್ಥಾನಕ್ಕೆ ಕುಮಾರಸ್ವಾಮಿ ಅಸ್ಥಾನದ ನಿರ್ದೇಶಕ ಎಸ್. ನಾರಾಯಣ್ ಬಂದಿದ್ದಾರೆ.

ಅಂದಹಾಗೆ ಮುಂಬೈಯಲ್ಲಿ ನಡೆಯುವ ಈ ಕತೆಯನ್ನು ಅವರು ಕನ್ನಡ ಮತ್ತು ಹಿಂದಿಯಲ್ಲಿ ನಿರ್ಮಿಸಲಿದ್ದಾರೆ. ನಾರಾಯಣ್ ನಿರ್ದೇಶನದಲ್ಲಿ ಈ ಚಿತ್ರ ಹೇಗೆ ಮೂಡಿಬರುತ್ತದೋ, ಆದರೆ ಈ ಮೂಲಕ ಅವರಿಗೆ ಬಾಲಿವುಡ್‌ಗೆ ಎಂಟ್ರಿ ಸಿಕ್ಕಂತೆ!





ಅಪ್ಪ ಇಟ್ಟ ಹೆಸರು ಬೇಡವೇ?

ಬಂಗಾರಪ್ಪ ಕುಟುಂಬ ಎರಡು ಹೋಳಾಗಿ ಎರಡು ವರ್ಷವೇ ಕಳೆದಿದೆ. ಈಗ ಕೌಟುಂಬಿಕ ಜಗಳದ ಇನ್ನೊಂದು ಆಯಾಮದ ಸುದ್ದಿ ಹೊರಬಿದ್ದಿದೆ.

ಅದೇನೆಂದರೆ ಸಾಧಾರಣವಾಗಿ ಅವರ ಎಲ್ಲಾ ಸಂಸ್ಥೆಗಳಿಗೆ ಮನೆ ದೇವರಾದ ರೇಣುಕಾಂಬಿಕೆಯ ಹೆಸರಿಡುವುದು ವಾಡಿಕೆ. ಈ ಹಿನ್ನೆಲೆಯಲ್ಲೇ ರೇಣುಕಾಂಬ ಸ್ಟುಡಿಯೋ, ರೇಣುಕಾಂಬ ಕಂಬೈನ್ಸ್ ಇವೆಲ್ಲವೂ ಆರಂಭವಾದದ್ದು.

ಮೊನ್ನೆ ದಿಢೀರನೆ ಕುಮಾರ್ ಬಂಗಾರಪ್ಪ ತನ್ನ ಕೈಯಲ್ಲಿರುವ ರೇಣುಕಾಂಬ ರೆಕಾರ್ಡಿಂಗ್ ಸ್ಟುಡಿಯೋದ ಹೆಸರನ್ನು ಬದಲಾಯಿಸಿಬಿಟ್ಟಿದ್ದಾರೆ. ಈಗದರ ಹೆಸರು 'ಅರ್ಜುನ್ ಆರ್ಟ್ಸ್ ಥಿಯೇಟರ್'. ಕುಮಾರ್ ಬಂಗಾರಪ್ಪನವರ ಮಗನ ಹೆಸರು ಅರ್ಜುನ್!

ರೇಣುಕಾಂಬ ಎಂಬ ಹೆಸರನ್ನು ಬಂಗಾರಪ್ಪನವರು ರಿಜಿಸ್ಟರ್ ಮಾಡಿದ್ದಾರೋ? ಅಥವಾ ಆ ಹೆಸರನ್ನು ಬಳಸಿಕೊಳ್ಳಬಾರದು ಎಂದು ತಾಕೀತು ಮಾಡಿದ್ದಾರೋ? ಅಥವಾ ಅಪ್ಪ ಇಟ್ಟ ಹೆಸರನ್ನು ನಾನ್ಯಾಕೆ ಮುಂದುವರಿಸಬೇಕು ಎಂದು ಕು.ಬಂ. ಹೆಸರು ಬದಲಾಯಿಸಿದ್ದಾರೋ ಎಂಬುದು ಮಾತ್ರ ಗೊತ್ತಿಲ್ಲ. ಇಷ್ಟೆಲ್ಲಾ ಮಾಡಿದ 'ಮರಿ ಬಂ' ಶಿವಮೊಗ್ಗದಲ್ಲೀಗ ಅಪ್ಪನನ್ನು ಹೊಗಳುತ್ತ ನಡೆದಿದ್ದಾರಂತೆ!





ಸಿಂಗಾರವಾದ ಗಂಧದ ಗುಡಿ

'ಗಂಧದ ಗುಡಿ' ಚಿತ್ರ ಮುಂದಿನ ವಾರ ಬಿಡುಗಡೆಯಾಗಲಿದೆ. ಡಾ. ರಾಜ್ ಮತ್ತು ವಿಷ್ಣು ಜೊತೆಯಾಗಿ ನಟಿಸಿ ಚಿತ್ರೀಕರಣದ ಸಮಯದಲ್ಲಿ ವಿವಾದವೊಂದು ಸಂಭವಿಸಿದ್ದು ಈಗ ಇತಿಹಾಸ. ಈಗ ಇದರ ನಿರ್ಮಾಪಕ ಎಂ.ಪಿ. ಶಂಕರ್ ಲಕ್ಷಾಂತರ ರುಪಾಯಿ ಖರ್ಚು ಮಾಡಿ ಪುನಃ ಬಿಡುಗಡೆ ಮಾಡುತ್ತಿದ್ದಾರೆ. ಈ ಚಿತ್ರದ ಸೌಂಡ್ ಟ್ರ್ಯಾಕ್ ಬದಲಾಯಿಸಿದ್ದಾರಲ್ಲದೆ ಸಿನಿಮಾ ಸ್ಕೋಪ್‌ಗೆ ರೂಪಾಂತರಿಸಿದ್ದಾರೆ. ಹೀಗಾಗಿ ಈ ಬಾರಿ 'ಗಂಧದ ಗುಡಿ' ನೋಡಿದಾಗ ವಿಶೇಷ ಅನುಭವ ಸಿಗಲಿದೆ ಎನ್ನುತ್ತಾರೆ ನಿರ್ಮಾಪಕ ಎಂ.ಪಿ. ಶಂಕರ್.

ಡಾ. ರಾಜ್ ನಿಧನಹೊಂದಿದ ನಂತರ ಬಿಡುಗಡೆಯಾದ ಸುಮಾರು 16 ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಮುಗ್ಗರಿಸಿವೆ. ಈ ಚಿತ್ರವಾದರೂ ಆ ಸೋಲಿನ ಸರಪಳಿಯನ್ನು ಮುರಿಯುತ್ತದೆಯೇ ಎಂಬುದನ್ನು ನೋಡಬೇಕು. ಅದಕ್ಕಿಂತಲೂ ಮುಖ್ಯವಾಗಿ ಸದ್ಯಕ್ಕೆ ಕನ್ನಡ ಚಿತ್ರರಂಗದಲ್ಲಿ ಅಗ್ರ ಸ್ಥಾನದಲ್ಲಿರುವ ವಿಷ್ಣುವರ್ಧನ್ ಅವರ ಅಭಿಮಾನಿಗಳು ಈ ಚಿತ್ರವನ್ನು ಹೇಗೆ ಸ್ವೀಕಾರ ಮಾಡುತ್ತಾರೆಂಬ ಕುತೂಹಲ ಇಡೀ ಗಾಂಧೀನಗರದಲ್ಲಿ ಹಬ್ಬಿದೆ.





ಆಟೋಗ್ರಾಫ್ ಕ್ಲಿಕ್ಕು... ಸುಂಟರಗಾಳಿಗೆ ಕಿಕ್ಕು...

'ಮೈ ಆಟೋಗ್ರಾಫ್' ಚಿತ್ರ ಸೆಂಚುರಿ ಬಾರಿಸಿದೆ. ಇದರೊಂದಿಗೆ ಬಿಡುಗಡೆಯಾದ 'ಸುಂಟರಗಾಳಿ' ಚಿತ್ರ ಮೂರೇ ವಾರಕ್ಕೆ ಥಿಯೇಟರ್‌ನಿಂದ ಖಾಲಿಯಾಗಿತ್ತು.

ಇದರಿಂದ ಗಾಂಧಿನಗರದವರು ಕಲಿಯಬೇಕಾದ ಪಾಠ ಇಷ್ಟೇ: ನಾಯಕನಟನ ನಾಮಬಲದಲ್ಲಿ ಚಿತ್ರ ಖಂಡಿತವಾಗಿಯೂ ನೂರು ದಿನ ಓಡುತ್ತೆ ಎಂದು ಯಾರು ಬಡಾಯಿ ಕೊಚ್ಚಿಕೊಳ್ಳುತ್ತಾರೋ ಅಂತವರಿಗೆಲ್ಲ ಸೋಲು ಕಟ್ಟಿಟ್ಟ ಬುತ್ತಿ. 'ಸುಂಟರಗಾಳಿ' ಚಿತ್ರದಲ್ಲಿ ದರ್ಶನ್ ಮತ್ತು ರಕ್ಷಿತಾ ಜೋಡಿಯಾಗಿದ್ದರು. ಈ ಜೋಡಿಯ ಹಳೆಯ ಮೂರು ಚಿತ್ರಗಳು ಹಿಟ್ ಆಗಿದ್ದರಿಂದ ಈ ಚಿತ್ರವೂ ಜಯಭೇರಿ ಬಾರಿಸುತ್ತದೆ ಎಂದೇ ಎಲ್ಲರೂ ಭವಿಷ್ಯ ನುಡಿದಿದ್ದರು. ಆದರೆ ಪ್ರೇಕ್ಷಕ ಮಹಾಶಯರು ಚೆನ್ನಾಗಿಯೇ ಪಾಠ ಕಲಿಸಿದರು. ಈ ಹಿಂದೆ ಉಪೇಂದ್ರ ನಟಿಸಿದ 'ಸೂಪರ್‌ಸ್ಟಾರ್' ಚಿತ್ರದ ಕತೆಯೂ ಹೀಗೇ ಆಗಿತ್ತು. ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ ಈ ಚಿತ್ರದ ಮುಹೂರ್ತದಂದೇ ಶತದಿನೋತ್ಸವದ ಡಿಸ್ಕ್‌ಅನ್ನು ನೀಡಿದ್ದರು. ಪ್ರೇಕ್ಷಕರು ಚಿತ್ರವನ್ನು ತಿರಸ್ಕರಿಸಿದ್ದರು. 'ಸೂಪರ್ ಸ್ಟಾರ್' ಯಾವ ಥಿಯೇಟರಿನಲ್ಲೂ ನೂರು ದಿನ ಓಡಲಿಲ್ಲ.

ಈಗ ಯಾವುದೇ ಮಸಾಲೆ ಅಂಶ ಇಲ್ಲದ 'ಮೈ ಆಟೋಗ್ರಾಫ್' ಚಿತ್ರಕ್ಕೆ ಪ್ರೇಕ್ಷಕರು 100 ಮಾರ್ಕ್ ನೀಡಿ ರುವುದು ನಮ್ಮ ಜನರ ಅಭಿರುಚಿಯನ್ನು ತೋರುತ್ತದೆ. ಇದನ್ನು ನೋಡಿ ನಮ್ಮವರು ಪಾಠ ಕಲಿತರೆ ಒಳ್ಳೆಯದು.



PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676427 Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44